ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ


ಕನ್ನಡ ವಾರಪತ್ರಿಕೆ

ಕಾಂ. ಖಗೇಂದ್ರ ಜಮಾತಿಯ
ಲಾಲ್ ಸಲಾಂ !!



ಸಂಪುಟ 12 | ಸಂಚಿಕೆ 11 | ಮಾರ್ಚ್ 12-18, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಧಮನಿಯಲಿ ಬಿಸಿ ನೆತ್ತರುಕ್ಕದೆ
ನೆನೆಯಲಾರೆ ನಿನ್ನಂ,
ಲೆನಿನ್!
ನಿನ್ನ ಹೆಸರದು
ಸಿಡಿಲ್ ಸದ್ದು
ದೊರೆಗಿವಿಗೆ!!
: ಕುವೆಂಪು

"ಪಲ್ಟಿ ಮಾಡೋಣ" ಎಂದಿದ್ದು ಮೂರ್ತಿಗಳ ಬಗ್ಗೆನಾ?!



ಬಾಗೇಪಲ್ಲಿ ಸಿಪಿಐ(ಎಂ) ರಾಜಕೀಯ ಸಮಾವೇಶ



ಮಹಾರಾಷ್ಟ್ರ ರೈತರ 'ಲಾಂಗ್ ಮಾರ್ಚ್'

ಲೋಕಾಯುಕ್ತ ಮೇಲೆ ದಾಳಿ : ಬರಿಯ ಭದ್ರತಾ ಲೋಪವೇ?





ನೀವು ಮೂರ್ತಿ ಕೆಡವಬಹುದು ಯೋಚನೆಗಳನ್ನು ಕೆಡವಲಾರಿರಿ



ಬಾಬುಬುಡನ್ ಗಿರಿ: ಪರಿಣತರ ವರದಿ

ತ್ರಿಪುರಾದಲ್ಲಿ ಬಿಜೆಪಿಗೆ ರಾಜಕೀಯ ಹಿಂಸಾಚಾರವೇ ಮುಖ್ಯ ಸಾಧನ

ಜನ–ವಿರೋಧಿ, ಪ್ರಜಾಪ್ರಭುತ್ವ–ವಿರೋಧಿ ಸ್ವರೂಪವನ್ನು ಬಯಲಿಗೆಳೆಯಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ತ್ರಿಪುರಾದಲ್ಲಿ ಆರೆಸ್ಸೆಸ್/ಬಿಜೆಪಿ ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ತಮ್ಮ ವಿಜಯದ ನಂತರದಲ್ಲಿ ರಾಜ್ಯಾದ್ಯಂತ ಅಭೂತಪೂರ್ವ ಹಿಂಸಾಚಾರವನ್ನು ಹರಿಯಬಿಟ್ಟಿವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅದನ್ನು ಬಲವಾಗಿ ಖಂಡಿಸಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳ ಕಚೆರಿಗಳು ಮತ್ತು ಕಾರ್ಯಕರ್ತರ ಮೇಲೆ ಗುರಿಯಿಟ್ಟು ಮಾರಣಾಂತಿಕ ಹಲ್ಲೆಗಳನ್ನು ಮಾಡಲಾಗುತ್ತಿದೆ. ಲೆನಿನ್ ಪ್ರತಿಮೆಯ ಧ್ವಂಸ ಆರೆಸ್ಸೆಸ್‌ನ ಉನ್ಮತ್ತ ಕಮ್ಯುನಿಸ್ಟ್–ವಿರೋಧಿ, ಪ್ರಜಾಪ್ರಭುತ್ವ–ವಿರೋಧಿ ಫ್ಯಾಸಿಸ್ಟ್ ತೆರನ ಸ್ವರೂಪದ ಪ್ರತೀಕವಾಗಿದೆ ಎಂದು ಅದು ಹೇಳಿದೆ.

ಮಾರ್ಚ್ 6ರಂದು ಸಿಪಿಐ(ಎಂ) ಮತ್ತು ಎಡಪಕ್ಷಗಳ ಸಂಸತ್ ಸದಸ್ಯರ ನಿಯೋಗವೊಂದು ಸಂಸತ್ತಿನಲ್ಲಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಇಂತಹ ಹಲ್ಲೆಗಳ ಪ್ರಮುಖ ಘಟನೆಗಳ ವಿವರ ನೀಡುವ ಮನವಿ ಪತ್ರವೊಂದನ್ನು ಸಲ್ಲಿಸಿದ್ದಾರೆ.

ಈ ದಾಳಿಗಳು ಆರೆಸ್ಸೆಸ್/ಬಿಜೆಪಿ ತಮ್ಮ ಪ್ರಜಾಪ್ರಭುತ್ವವ–ವಿರೋಧಿ ಅಜೆಂಡಾವನ್ನು ಜಾರಿಗೆ ತರಲು ಮುಖ್ಯವಾಗಿ ರಾಜಕೀಯ ಹಿಂಸಾಚಾರವನ್ನೇ ಸಾಧನವಾಗಿ ಬಳಸುತ್ತವೆ ಎಂಬುದನ್ನು ಮತ್ತೊಮ್ಮೆ ಸ್ಪಷ್ಟವಾಗಿ ತೋರಿಸುತ್ತಿವೆ.

ತ್ರಿಪುರಾದ ಸಿಪಿಐ(ಎಂ), ಎಡರಂಗ ಮತ್ತು ಅಲ್ಲಿನ ಶಾಂತಿಪ್ರಿಯ ಜನತೆ ಮತ್ತು ಈ ದಾಳಿಗಳನ್ನು ಎದುರಿಸುತ್ತಿರುವ ಸಂಗಾತಿಗಳೊಂದಿಗೆ ಸೌಹಾರ್ದ ವ್ಯಕ್ತಪಡಿಸಲು ದೇಶಾದ್ಯಂತ ಸಿಪಿಐ(ಎಂ) ಘಟಕಗಳು ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಿ ಆರೆಸ್ಸೆಸ್/ಬಿಜೆಪಿಯಲ್ಲಿ ಅಂತರ್ಗತವಾಗಿರುವ ಅದರ ಪ್ರಜಾಪ್ರಭುತ್ವ–ವಿರೋಧಿ, ಜನ–ವಿರೋಧಿ ಸ್ವರೂಪವನ್ನು ಮತ್ತು ಚಟುವಟಿಕೆಗಳನ್ನು ಬಯಲಿಗೆಳೆಯಬೇಕು ಎಂದು ಪೊಲಿಟ್‌ಬ್ಯುರೊ ಕರೆ ನೀಡಿದೆ.

ಮಾರ್ಚ್ 5ರ ಸಂಜೆ 4 ರವರೆಗೆ

* 5 14 ಮಂದಿಯನ್ನು ವೈಯಕ್ತಿಕ ಚಿತ್ರಹಿಂಸೆಗೆ ಗುರಿಪಡಿಸಲಾಗಿದೆ, 1539 ಮನೆಗಳ ಮೇಲೆ ದಾಳಿಯಾಗಿದೆ, 196 ಮನೆಗಳನ್ನು ಸುಟ್ಟಿದ್ದಾರೆ.
* 134 ಪಕ್ಷದ ಕಚೇರಿಗಳ ಮೇಲೆ ದಾಳಿ ಮಾಡಲಾಗಿದೆ, 64ನ್ನು ಧ್ವಂಸ ಮಾಡಲಾಗಿದೆ, 208 ಪಕ್ಷದ ಕಚೇರಿಗಳ ಮೇಲೆ ಕಬ್ಜಾ ಮಾಡಿದ್ದಾರೆ.
* 38 ಸಾಮೂಹಿಕ ಸಂಘಟನೆಗಳ ಕಚೇರಿಗಳ ಮೇಲೆ ದಾಳಿ ಮಾಡಿದ್ದಾರೆ.
* 90 ಸಾಮೂಹಿಕ ಸಂಘಟನೆಗಳ ಕಚೇರಿಗಳನ್ನು ಕಬ್ಜಾ ಮಾಡಿದ್ದಾರೆ.

ಇವುಗಳ ವಿವರವಾದ ಪಟ್ಟಿಯನ್ನು ಲಗತ್ತಿಸಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರೂ, ಸಂಸತ್ ಸದಸ್ಯರೂ ಆಗಿರುವ ಮಹಮದ್ ಸಲೀಂ ಪ್ರಧಾನ ಮಂತ್ರಿಗಳಿಗೆ ಸಲ್ಲಿಸಿದ ಮನವಿ ಪತ್ರದ ಒಕ್ಕಣಿಕೆ ಹೀಗಿದೆ:

"ಸಿಪಿಐ(ಎಂ) ಪೊಲಿಟ್‌ಬ್ಯುರೊ ತ್ರಿಪುರಾ ವಿಧಾನ ಸಭಾ ಚುನಾವಣೆಯ ಫಲಿತಾಂಶಗಳು ಹೊರಬಿದ್ದ ನಂತರ ಬಿಜೆಪಿಯ ಗೂಂಡಾಗಳು ಭಯೋತ್ಪಾದನೆಯ ರಾಜ್ಯಭಾರವನ್ನು, ರಾಜ್ಯಾದ್ಯಂತ ಸಿಪಿಐ(ಎಂ) ಸದಸ್ಯರು ಮತ್ತು ಬೆಂಬಲಿಗರ ಮೇಲೆ, ಅವರ ಮನೆಗಳ ಮೇಲೆ, ಪಕ್ಷದ ಕಚೇರಿಗಳು ಮತ್ತು ಸಾಮೂಹಿಕ ಸಂಘಟನೆಗಳ ಕಚೇರಿಗಳ ಮೇಲೆ ಸರ್ವಮುಖಿ ದಾಳಿಗಳನ್ನು ಹರಿಯ ಬಿಟ್ಟಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತದೆ. 514 ವ್ಯಕ್ತಿಗಳು ಗಾಯಗೊಂಡಿದ್ದಾರೆ, 1539 ಮನೆಗಳ ಮೇಲೆ ದಾಳಿಗಳು ನಡೆದಿವೆ, 196 ಮನೆಗಳನ್ನು ಬೆಂಕಿಗೆ ಆಹುತಿ ಮಾಡಲಾಗಿದೆ, 134 ಪಕ್ಷದ ಕಚೇರಿಗಳ ಮೇಲೆ ದಾಳಿ ನಡೆದಿದೆ ಮತ್ತು 208 ಪಕ್ಷದ ಕಚೇರಿಗಳನ್ನು ಕಬ್ಜಾ ಮಾಡಿದ್ದಾರೆ. ಹಲವು ಸಾಮೂಹಿಕ ಸಂಘಟನೆಗಳ ಕಚೇರಿಗಳ ಮೇಲೂ ದಾಳಿ ನಡೆದಿದೆ ಮತ್ತು ಕಬ್ಜಾಗಳಾಗಿವೆ. ದಾಳಿಗಳು ಮುಂದುವರೆಯುತ್ತಿವೆ.

ನೀವು ತಕ್ಷಣ ಮಧ್ಯಪ್ರವೇಶಿಸಿ ಈ ದಾಳಿಗಳನ್ನು ಮತ್ತು ಹಿಂಸಾಚಾರವನ್ನು ನಿಲ್ಲಿಸಬೇಕು ಮತ್ತು ಪರಿಸ್ಥಿತಿ ಹದಗೆಡುವ ಮೊದಲು ಶಾಂತಿ ಮತ್ತು ಸಾಮಾನ್ಯ ಪರಿಸ್ಥಿತಿಯನ್ನು ಕಾಯ್ದುಕೊಳ್ಳಬೇಕು ಎಂದು ನಾವು ಕೋರುತ್ತೇವೆ."

ರೈತ–ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರ ಮೇಲೆ ಹಿಂಸಾಚಾರ – ಎಐಕೆಎಸ್ ಖಂಡನೆ

ತ್ರಿಪುರಾದಲ್ಲಿ ಚುನಾವಣಾ ಫಲಿತಾಂಶಗಳು ಪ್ಕರಕಟವಾದೊಡನೆ ಆರೆಸ್ಸೆಸ್–ಬಿಜೆಪಿ ಕಿಸಾನ್ ಸಭಾ ಮತ್ತು ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರುಗಳ ಮೇಲೆ ಭೀಷಣ ಹಿಂಸಾಚಾರವನ್ನು ಹರಿಯ ಬಿಟ್ಟಿದ್ದಾರೆ. ಕೇಸರಿ ಗೂಂಡಾಗಳು ಹಳ್ಳಿಗಳಲ್ಲಿಯೂ ರೈತ ಸಂಘ ಮತ್ತು ಕಾರ್ಮಿಕಸ ಂಘಗಳ ಕಚೇರಿಗಳನ್ನು ಆಕ್ರಮಿಸಿಕೊಮಡಿದ್ದಾರೆ, ಧ್ವಂಸಗೊಳಿಸಿದ್ದಾರೆ, ಹಲವು ಕಾರ್ಯಕರ್ತರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂದಿರುವ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಈ ಹಿಂಸಾಚಾರವನ್ನು ಬಲವಾಗಿ ಖಂಡಿಸಿದೆ.

ರಾಷ್ಟ್ರವಾದಿಗಳೆಂದು ಹೇಳಿಕೊಳ್ಳುತ್ತಿರುವ ಈ ಮಂದಿ ಪ್ರತ್ಯೇಕತಾವಾದಿ ಮತ್ತು ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿರುವ, ಅದಕ್ಕಾಗಿ ವಿದೇಶಗಳಿಂದ ಹಣ ಪಡೆಯುತ್ತಿರುವ ರಾಷ್ಟ್ರ–ವಿರೋಧಿಗಳೊಂದಿಗೆ ಯಾವುದೇ ನಾಚಿಕೆಯಿಲ್ಲದೆ ಮೈತ್ರಿ ಮಾಡಿಕೊಂಡಿದ್ದಾರೆ. ಜನಗಳ ಗಮನವನ್ನು ಈ ರಾಷ್ಟ್ರ–ವಿರೋಧಿ ನೀತಿಬಾಹಿರ ಕೃತ್ಯದಿಂದ ಬೇರೆಡೆಗೆ ಸೆಳೆಯಲ್ಲಿ ಈ ಹಿಂಸಾಚಾರದ ರಾಜಕೀಯವನ್ನು ನಡೆಸುತ್ತಿದ್ದರೆ ಎಂದು ಎಐಕೆಎಸ್ ಹೇಳಿದೆ.

ಈ ಹಿಂಸಾಚಾರವನ್ನು ತಕ್ಷಣವೇ ನಿಲ್ಲಿಸಲು ಕ್ರಮ ಕೈಗೊಳ್ಳಬೇಕು ಎಂದು ಎಐಕೆಎಸ್ ತ್ರಿಪುರಾ ಸರಕಾರವನ್ನು ಮತ್ತು ಕೇಂದ್ರ ಸರಕಾರವನ್ನು ಆಗ್ರಹಿಸಿದೆ. ಎಐಕೆಎಸ್‌ನ ಸದಸ್ಯರು ಮತ್ತು ಘಟಕಗಳು ದೇಶಾದ್ಯಂತ ಸ್ವತಂತ್ರವಾಗಿಯೂ ಮತ್ತು ಇತರ ಎಡ–ಪ್ರಜಾಪ್ರಭುತ್ವವಾದಿ ಶಕ್ತಿಗಳೊಂದಿಗೂ ಆರೆಸ್ಸೆಸ್–ಬಿಜೆಪಿಯ ಸರ್ವಾಧಿಕಾರಶಾಹಿ ಮತ್ತು ಅರೆಫ್ಯಾಸಿಸ್ಟ್ ಭಯೋತ್ಪಾದನೆಯ ವಿರುದ್ಧ ವಿವಿಧ ಸ್ವರೂಪಗಳ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಅದು ಹೇಳಿದೆ.



ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿರುವ ಒಬ್ಬ ರೈತ ಕಾರ್ಯಕರ್ತನೊಡನೆ ಎಐಕೆಎಸ್‌ನ ಕೇಂದ್ರೀಯ ಕಿಸಾನ್ ಮಂಡಳಿ ಸದಸ್ಯ ಹಾಗು ತ್ರಿಪುರಾದ ಮಾಜಿ ಸ್ಪೀಕರ್ ಪಬಿತ್ರ ಕರ್

ಪ್ರತಿಮೆಗಳನ್ನು ನಾಶಪಡಿಸುವ ವಿಧ್ವಂಸಕ ಕೃತ್ಯಗಳು–ಕೃಷಿ ಕೂಲಿಕಾರ ಸಂಘಟನೆ ಖಂಡನೆ

ತ್ರಿಪುರಾದಲ್ಲಿ ಬಿಜೆಪಿ– ಐಪಿಎಫ್‌ಟಿ ಪ್ರತ್ಯೇಕತಾವಾದಿಗಳು ಲೆನಿನ್ ಪ್ರತಿಮೆಯನ್ನು ಧ್ವಂಸಗೊಳಿಸಿದ ನಂತರ ತಮಿಳುನಾಡಿನಲ್ಲಿ ದಲಿತರು ಮತ್ತು ದುಡಿಯುವ ಜನಗಳ 'ಸ್ವಾಭಿಮಾನ' ಆಂದೋಲನದ ಹರಿಕಾರ ಪೆರಿಯಾರ್ ಪ್ರತಿಮೆಯ ಮೇಲೆ ವಿಧ್ವಂಸಕ ಕೃತ್ಯ, ನಂತರ ಉತ್ತರಪ್ರದೇಶದಲ್ಲಿ ಅಂಬೇಡ್ಕರ್ ಪ್ರತಿಮೆಯ ಮೇಲೆ ದಾಳಿ ನಡೆಸಿರುವುದು ಬರ್ಬರ ವಿಧ್ವಂಸಕ ಕೃತ್ಯಗಳು ಎಂದು ಅಖಿಲ ಭಾರತ ಕೃಷಿಕೂಲಿಕಾರರ ಸಂಘ (ಎಐಎಡಬ್ಲ್ಯುಯು) ಬಲವಾಗಿ ಖಂಡಿಸಿದೆ.

ಪ್ರಧಾನ ಮಂತ್ರಿಗಳೇನೋ ಈಗ ಈ ಕೃತ್ಯಗಳಿಗೆ ತನ್ನ ಅನುಮೋದನೆ ಇಲ್ಲ ಎಂದಿದ್ದಾರೆ. ಆದರೆ ಉತ್ತರಪ್ರದೇಶದಲ್ಲಿ ಅಂಬೇಡ್ಕರ್ ಪ್ರತಿಮೆಯನ್ನು ಧ್ವಂಸ ಮಾಡಲು ಪ್ರಯತ್ನಿಸಿದವರ ಮೇಲೆ ಇನ್ನೂ ಕ್ರಮ ಕೈಗೊಂಡಿಲ್ಲ ಎಂದಿರುವ ಎಐಎಡಬ್ಲ್ಯುಯು ದಲಿತರು, ಅಲ್ಪಸಂಖ್ಯಾತರ ಬಗ್ಗೆ ಬಿಜೆಪಿ ಮುಖಂಡರ ನಿಲುವುಗಳನ್ನು ಬಲವಾಗಿ ಖಂಡಿಸುತ್ತ ರೈತರು ಮತ್ತು ಕಾರ್ಮಿಕರು ಇವರ ವಿರುದ್ಧ ಹೋರಾಟದಲ್ಲಿ ತಮ್ಮ ಐಕ್ಯತೆಯನ್ನು ಬಲಗೊಳಿಸಬೇಕು ಎಂದು ಕರೆ ನೀಡಿದೆ.

ದೇಶಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳಲ್ಲಿ ಭಾಗವಹಿಸಿ – ಮಹಿಳೆಯರಿಗೆ ಎಐಡಿಡಬ್ಲ್ಯುಎ ಕರೆ

ತ್ರಿಪುರಾದಲ್ಲಿ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಪ್ರಕಟವಾದ ಕೂಡಲೇ ಆರೆಸ್ಸೆಸ್–ಬಿಜೆಪಿ ಗೂಂಡಾಗಳು ಎಡ ಪಕ್ಷಗಳ ಕಾರ್ಯಕರ್ತರ ಮೇಲೆ ಅಮಾನುಷ ಹಿಂಸಾಚಾರವನ್ನು ಹರಿಯ ಬಿಟ್ಟಿದ್ದಾರೆ ಎಂದು ಅಖಿಲ ಭಾರತ ಜನವಾದಿ



ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಖಂಡಿಸಿದೆ. ಪ್ರತ್ಯೇಕತಾ ವಾದಿಗಳೊಂದಿಗೆ ಸಮಯಸಾಧಕ ಮೈತ್ರಿ ಮಾಡಿಕೊಂಡು ಅಪಾರ ಹಣಬಲ ಮತ್ತು ಭುಜಬಲದೊಂದಿಗೆ ಚುನಾವಣಾ ಲಾಭ ಪಡೆದು ಆರಂಭಿಸಿರುವ ಭಯೋತ್ಪಾದಲ ಆಳ್ವಿಕೆ ಮಹಿಳೆಯರನ್ನೂ ಬಿಟ್ಟಿಲ್ಲ, ಮಕ್ಕಳ ಸ್ಥಿತಿಯಂತೂ ಹೇಳತೀರದು, ವಿದ್ಯಾರ್ಥಿಗಳಿಗೆ ಪರೀಕ್ಷೆಗಳಿಗೆ ಹಾಜರಾಗಲು ಭಯವಾಗುತ್ತಿದೆ ಎಂದು ಅದು ಹೇಳಿದೆ.

ಆರೆಸ್ಸೆಸ್–ಬಿಜೆಪಿಗೆ ಪ್ರಜಾಪ್ರಭುತ್ವ ಸಂಘಟನೆಗಳ ಬಗ್ಗೆ ಗೌರವವಿಲ್ಲ. ತಮ್ಮ ಮುಖಂಡರ ಬೆಂಬಲದಿಂದಾಗಿ ಅವರು ಕಾನೂನನ್ನು ತಮ್ಮ ಕಥಗೆ ತಗೊಳ್ಳುತ್ತಿದ್ದಾರೆ, ದೇಶದ ವಿವಿಧ ಭಾಗಗಳಲ್ಲಿ ಮುಸ್ಲಿಮರು, ದಲಿತರು, ಹಿಂದುಳೀದ ವರ್ಗಗಳವರು, ಆದಿವಾಸಿಗಳು, ಕ್ರೈಸ್ತರು ಮತ್ತು ಮಹಿಳೆಯರ ಮೇಲೆ ಹಲ್ಲೆಗಳನ್ನು ನಡೆಸುತ್ತಿರುವವರು ಯಾರನ್ನೂ ಇದುವರೆಗೆ ಶಿಕ್ಷಿಸಿಲ್ಲ. ಈ ಭಯೋತ್ಪಾದಕ ಆಳ್ವಿಕೆಯನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಆಗ್ರಹಿಸಿರುವ ಎಐಡಿಡಬ್ಲ್ಯುಎ ತ್ರಿಪುರಾದಲ್ಲಿ ಈ ದಾಳಿಗಳನ್ನು ಧೈರ್ಯದಿಂದ ಎದುರಿಸುತ್ತಿರುವ ಎಲ್ಲ ಜನಗಳು ಮತ್ತು ಮಹಿಳೆತರೊಂದಿಗೆ ಸೌಹಾರ್ದ ವ್ಯಕ್ತಪಡಿಸಿದೆ, ದೇಶಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳಲ್ಲಿ ಭಾಗವಹಿಸಬೇಕು ಎಂದು ಎಲ್ಲ ಮಹಿಳೆಯರಿಗೆ ಕರೆ ನೀಡಿದೆ.

ತ್ರಿಪುರಾದಲ್ಲಿನ ದಾಳಿಗಳು ಪ್ರಜಾಪ್ರಭುತ್ವದ ಮೇಲಿನ ದಾಳಿಗಳು –ಸಿಐಟಿಯು ಖಂಡನೆ

ಪ್ರತ್ಯೇಕತಾವಾದಿ ಶಕ್ತಿಗಳೊಂದಿಗೆ ಕೈಜೋಡಿಸಿ ಹಣಬಲ ಮತ್ತು ತೋಳ್ಬಲಗಳನ್ನು ಬಳಸಿ ಚುನಾವಣೆಗಳಲ್ಲಿ ಗೆದ್ದಿರುವ ಆರೆಸ್ಸೆಸ್–ಬಿಜೆಪಿಯ ಗೂಂಡಾಪಡೆಗಳು ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರುಗಳೂ ಸೇರಿದಂತೆ ಎಡ ಕಾರ್ಯಕರ್ತರು ಮತ್ತು ಕಚೇರಿಗಳ ಮೇಲೆ ದಾಳಿ ನಡೆಸುತ್ತಿವೆ ಎಂದು ಸಿಐಟಯು ಬಲವಾಗಿ ಖಂಡಿಸಿದೆ.

ಈ ದಾಳಿಗಳು ಪ್ರಜಾಪ್ರಭುತ್ವದ ಮೇಲಿನ ದಾಳಿಗಳು. ಆರೆಸ್ಸೆಸ್–ಬಿಜೆಪಿ ಪ್ರಜಾಪ್ರಭುತ್ವ ಸಂಸ್ಥೆಗಳ ಬಗ್ಗೆ ಹೊಂದಿರುವ ತುಚ್ಛೀಕಾರದ ನಿಲುವು ಇಲ್ಲಿ ಮತ್ತೊಮ್ಮೆ ಪ್ರದರ್ಶನಗೊಳ್ಳುತ್ತಿದೆ. ಅಧಿಕಾರ ಗಿಟ್ಟಿಸಲು ಇವರು ಯಾವ ಮಟ್ಟಕ್ಕೂ ಇಳಿಯಬಲ್ಲರು ಎಂಬುದನ್ನು ಈ ಚುನಾವಣೆಗಳು ತೋರಿಸಿಕೊಟ್ಟಿವೆ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಮಧ್ಯಪ್ರವೇಶಿಸಬೇಕು, ಈ ಹೀನ ಕೃತ್ಯಗಳು ಕೂಡಲೇ ನಿಲ್ಲಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ತ್ರಿಪುರಾದಲ್ಲಿ ಸಿಐಟಿಯು ಕಾರ್ಯಕರ್ತರು ಮತ್ತು ಇತರ ಸಆಮೂಹಿಕ ಸಂಘಟನೆಗಳ ಕಾರ್ಯಕರ್ತರು ಈ ದಾಳಿಗಳನ್ನು ಧೈರ್ಯದಿಂದ ಎದುರಿಸುತ್ತಿದ್ದಾರೆ. ಸಿಐಟಿಯು ಇವರ ಬೆಂಬಲಕ್ಕೆ ನಿಲ್ಲುತ್ತದೆ ಎಂದಿರುವ ಅದು ಈ ಹಿಂದೆಯೂ ಇಂತಹ ಉಗ್ರ, ಭಯೋತ್ಪಾದಕ, ಪ್ರತ್ಯೇಕತಾವಾದಿ ಶಕ್ತಿಗಳು ಅಧಿಕಾರಕ್ಕೆ ಬಂದಾಗ ಜನತೆಯ ಬೆಂಬಲದಿಂದ ಅವರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲು ಸಾಧ್ಯವಾಗಿತ್ತು ಈ ಬಾರಿಯೂ ಜನತೆಯ ಬೆಂಬಲದಿಂದ ಇದು ಸಾಧ್ಯವಿದೆ ಎಂದಿರುವ ಸಿಐಟಿಯು ಪ್ರಜಾಪ್ರಭುತ್ವದ ಮೇಲಿನ ಈ ದಾಳಿಗಳನ್ನು ಪ್ರತಿಭಟಿಸಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಮತ್ತು ಸದಸ್ಯರಿಗೆ ಹಾಗೂ ಸಮಸ್ತ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ. ದೇಶಾದ್ಯಂತ ಎಡ ಮತ್ತು ಪ್ರಜಾಪ್ರಭುತ್ವವಾದಿ ಹಾಗೂ ಶಾಂತಿಪ್ರಿಯ ಶಕ್ತಿಗಳು ಸಂಘಟಿಸುತ್ತಿರುವ ಸೌಹಾರ್ದ ಕಾರ್ಯಾಚರಣೆಗಳಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು ಎಂದೂ ತನ್ನ ಸದಸ್ಯರಿಗೆ ಮತ್ತು ಸಂಯೋಜಿತ ಕಾರ್ಮಿಕ ಸಂಘಗಳಿಗಳಿಗೆ ಅದು ಮನವಿ ಮಾಡಿದೆ.

ಲೋಕಾಯುಕ್ತ ಮೇಲೆ ದಾಳಿ ಬರಿಯ ಭದ್ರತಾ ಲೋಪವೇ?

ಸಂಪಾದಕೀಯ

ಲೋಕಾಯುಕ್ತ ನ್ಯಾಯಮೂರ್ತಿ ವಿಶ್ವನಾಥ ಶೆಟ್ಟಿ ಅವರ ಮೇಲೆ ಮಾರಣಾಂತಿಕ ದಾಳಿಗೆ ಮಾರ್ಚ್ 7 ರಂದು ನಡೆದ ಪ್ರಯತ್ನ ಅತ್ಯಂತ ಗಂಭೀರ ಬೆಳವಣಿಗೆ. ಲೋಕಾಯುಕ್ತ ಕಚೇರಿ ಪ್ರವೇಶ ದ್ವಾರದಲ್ಲಿ ಅಳವಡಿಸಿರುವ ಮೆಟಲ್ ಡಿಟೆಕ್ಟರ್ ಕೆಟ್ಟುಹೋಗಿತ್ತು ಎನ್ನಲಾಗಿದೆ. ಆದರೆ ಕಚೇರಿಯೊಳಗೆ ಬರುವ ಆಗಂತುಕರ ಬಳಿ ಅಥವಾ ಅವರ ಬ್ಯಾಗುಗಳಲ್ಲಿ ಚಾಕುವಿನಂತಹ ಅಸ್ತ್ರಗಳಿಲ್ಲ ಎಂದು ಖಚಿತಪಡಿಸುವ ಕನಿಷ್ಠ ಪ್ರಾಥಮಿಕ ತಪಾಸಣೆ ಮಾಡಲು ಭದ್ರತಾ ಸಿಬ್ಬಂದಿ ಏಕೆ ವಿಫಲರಾದರು? ಹಲವು ಬಾರಿ ಲೋಕಾಯುಕ್ತ ಕಚೇರಿಗೆ ಬಂದು ಹಲವು ಅಧಿಕಾರಿಗಳ ವಿರುದ್ಧ (ಅಷ್ಟೇನೂ ಗಟ್ಟಿಯಿಲ್ಲದ) ಆಪಾದನೆಗಳಿರುವ ದೂರು ತಂದ ಆರೋಪಿಯ ಬಗ್ಗೆ ಯಾರಿಗೂ ಸಂಶಯವೂ ಬರಲಿಲ್ಲವೇ? ಆರೋಪಿಯ ಹಿನ್ನೆಲೆ ಸಹ ವಿಲಕ್ಷಣವಾಗಿದೆ. ತಿಪಟೂರಿನ ನಿವಾಸಿಯಾಗಿದ್ದ ಆರೋಪಿ ರಾಜಸ್ತಾನದ ಮೂಲದವನಾಗಿದ್ದು ತುಮಕೂರಿನ ವಿವಿಧ ಸರಕಾರಿ ಕಚೇರಿಗಳಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡುತ್ತಿದ್ದ. ಪೀಠೋಪಕರಣಗಳ ಖರೀದಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರದ ಆಪಾದನೆ ಮಾಡಿದ್ದ ಕೆಲವು ದೂರುಗಳನ್ನು ತನಿಖೆ ಮಾಡಿ ಮುಕ್ತಾಯಗೊಳಿಸಲಾಗಿತ್ತು. ಒಂದೆರಡು ದೂರು ಬಾಕಿ ಇತ್ತು. ನ್ಯಾ. ಶೆಟ್ಟಿ ಅವರನ್ನು ಕೊಲೆ ಮಾಡಲು ಪ್ರಯತ್ನ ಮಾಡುವಷ್ಟು ಅವರ ಮೇಲೆ ಆರೋಪಿಗೆ ವೈಯಕ್ತಿಕ ಆಕ್ರೋಶಕ್ಕೆ ಮೇಲುನೋಟಕ್ಕೆ ಪ್ರಬಲ ಕಾರಣಗಳು ಕಾಣುತ್ತಿಲ್ಲ. ಆರೋಪಿಯ ಹಿಂದೆ ಬೇರೆ ಯಾರಾದರೂ ಇದ್ದಾರಾ? ಈ ಪ್ರಯತ್ನದ ಹಿಂದೆ ರಾಜಕೀಯ ಆಯಾಮಗಳಿವೆಯೇ? ಈ ಘಟನೆ ಇಂತಹ ಗಂಭೀರ ಪ್ರಶ್ನೆಗಳನ್ನು ಎತ್ತುತ್ತದೆ.

ಮಾರಣಾಂತಿಕ ಹಲ್ಲೆಗೆ ಕಾರಣವಾದ ತಕ್ಷಣದ ಮಾತ್ರವಲ್ಲ, ದೀರ್ಘಕಾಲೀನ ಭದ್ರತಾ ವೈಫಲ್ಯ ಮೇಲುನೋಟಕ್ಕೆ ಕಣ್ಣಿಗೆ ರಾಚುತ್ತದೆ. ಲೋಕಾಯುಕ್ತ ಕಚೇರಿಯಲ್ಲಿ ಅಳವಡಿಸಿರುವ ಲೋಹಶೋಧಕ ಕೆಟ್ಟುಹೋಗಿ ನಾಲ್ಕು ವರ್ಷವಾಗಿದೆ. ಮಹತ್ವದ ದಾಖಲೆಗಳಿರುವ ಸಂಸ್ಥೆಯಲ್ಲಿ 2016ರ ಅಕ್ಟೋಬರ್‌ನಲ್ಲಿ ಬೆಂಕಿ ಬಿದ್ದ ಮೇಲೂ ಸಹ ಸೂಕ್ತ ಭದ್ರತೆ ಬಗ್ಗೆ ನಿರ್ಲಕ್ಷ್ಯ ಮುಂದುವರೆದಿದೆ. ವಿಧಾನ ಸೌಧ, ವಿಕಾಸ ಸೌಧ, ಶಾಸಕರ ಭವನ ಮತ್ತು ಲೋಕಾಯುಕ್ತ ಇರುವ ಬಹುಮಹಡಿ ಕಟ್ಟಡದ ಭದ್ರತೆಗೆ ವಿಶೇಷ ಭದ್ರತೆ ಒದಗಿಸುವ ವ್ಯವಸ್ಥೆ ಮಾಡಬೇಕು ಎಂಬ ಪ್ರಸ್ತಾವ ಗೃಹ ಇಲಾಖೆ ಮುಂದೆ ದೀರ್ಘಕಾಲದಿಂದ ಇದ್ದು, ಬಹುಮಹಡಿ ಕಟ್ಟಡವನ್ನು ಈ ವ್ಯವಸ್ಥೆಯಿಂದ ಕೈಬಿಡಲಾಗಿತ್ತು. ತಮ್ಮದೇ ಪೋಲಿಸ್ ಸಿಬ್ಬಂದಿ ಮತ್ತು ಹಿರಿಯ ಅಧಿಕಾರಿಗಳನ್ನು ಹೊಂದಿರುವ ಲೋಕಾಯುಕ್ತ ಸಂಸ್ಥೆ ಸಹ ಗೃಹ ಇಲಾಖೆಗೆ ಪತ್ರ ಬರೆಯುವುದು ಬಿಟ್ಟರೆ ಯಾವುದೇ ಗಂಭೀರ ಪ್ರಯತ್ನ ನಡೆಸಿಲ್ಲ. ಈ ಗಂಭೀರ ಬೆಳವಣಿಗೆಯ ನಂತರವೂ ಲೋಕಾಯುಕ್ತ ಮತ್ತು ಗೃಹ ಇಲಾಖೆ ಪರಸ್ಪರ ದೋಷಾರೋಪಣೆ ನಡೆದಿದೆಯಷ್ಟೇ.

ಕರ್ನಾಟಕ ಲೋಕಾಯುಕ್ತವು ದೇಶಕ್ಕೆ ಮಾದರಿ ಸಂಸ್ಥೆಯಾಗಿತ್ತು. ಆದರೆ, ಈ ಸಂಸ್ಥೆಯನ್ನು ಈಚಿನ ವರ್ಷಗಳಲ್ಲಿ ದುರ್ಬಲಗೊಳಿಸಲಾಗಿದೆ. ಭ್ರಷ್ಟಾಚಾರಕ್ಕೆ ಪ್ರತ್ಯೇಕ ನಿಗ್ರಹ ದಳ (ಎಸಿಬಿ) ರಚಿಸುವ ಮೂಲಕ ಕಾಂಗ್ರೆಸ್ ಸರಕಾರ ಲೋಕಾಯುಕ್ತದ ಹಲ್ಲು ಕಿತ್ತು ಹಾಕಿತ್ತು. ರಾಜ್ಯದ ಮುಖ್ಯಮಂತ್ರಿಯೊಬ್ಬರನ್ನು ಜೈಲಿಗೆ ಕಳಿಸಿದ ಸಂಸ್ಥೆಯ ಘನತೆಗೆ ಕುಂದು ತಂದಿತ್ತು. ರಾಜ್ಯದ ಗಣಿ ಹಗರಣಗಳ ಬಗ್ಗೆ ಅದು ಸಲ್ಲಿಸಿದ್ದ ಚಾರಿತ್ರಿಕ ವರದಿಯನ್ನು ಮೂಲೆಗುಂಪು ಮಾಡಿತ್ತು. ಹಳೆಯ ಲೋಕಾಯುಕ್ತ ವ್ಯವಸ್ಥೆ ಇರುವಾಗಲೇ ಬಿಜೆಪಿ ಮತ್ತು ಸಂಘಿ ಒಲವಿನ ರಾಜ್ಯಪಾಲರು ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತ ನೇಮಕದಲ್ಲಿ ಪದೇ ಪದೇ ಅಡೆ-ತಡೆಗಳನ್ನು ತಂದು ಅದು ನಡೆಯದಂತೆ ಮಾಡಿದ್ದರು. ಹೀಗೆ ಲೋಕಾಯುಕ್ತ ಸಂಸ್ಥೆಯ ಮೇಲೆ ದಾಳಿ ಮತ್ತು ಅದನ್ನು ದುರ್ಬಲಗೊಳಿಸುವಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಅಪರಾಧಿ ಸ್ಥಾನದಲ್ಲಿವೆ. ಈಗ ಲೋಕಾಯುಕ್ತರ ಮೇಲೆ ದಾಳಿ ಅದನ್ನು ಇನ್ನಷ್ಟು ದುರ್ಬಲಗೊಳಿಸುವ ಮತ್ತು ಅದನ್ನು ರಾಜಕೀಯ ದಾಳವಾಗಿ ಬಳಸುವ ಹುನ್ನಾರದ ಭಾಗವೇ ಎಂದು ಗಂಭೀರವಾಗಿ ಕೇಳಬೇಕಾಗಿದೆ.

ಬಿಜೆಪಿ ಈಗಾಗಲೇ ಈ ದಾಳಿಯನ್ನು ಬಳಸಿ ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಮುರಿದು ಬಿದ್ದಿದೆ ಎಂದು ಬಿರುಸಿನ ಪ್ರಚಾರ ಆರಂಭಿಸಿದೆ. ಬಿಜೆಪಿ ನಾಯಕರೊಬ್ಬರು ಮುಖ್ಯಮಂತ್ರಿಗಳ ಮೇಲೆ ಕೊಲೆ ಪ್ರಯತ್ನ ನಡೆದರೂ ಏನೂ ಆಶ್ಚರ್ಯವಿಲ್ಲ ಎಂದು ಹೇಳಿರುವುದರ ಅರ್ಥ ಏನು ಎಂಬುದು ಸ್ಪಷ್ಟವಿಲ್ಲ. ತ್ರಿಪುರಾ ಚುನಾವಣಾ ವಿಜಯದ ನಂತರ ಫ್ಯಾಸಿಸ್ಟ್ ಶಕ್ತಿಗಳು ಪ್ರತಿಮೆಗಳನ್ನು ಮಾತ್ರ ಒಡೆದಿದ್ದು ಅಲ್ಲ. ಸಿಪಿಐ(ಎಂ) ನಾಯಕರ, ಕಾರ್ಯಕರ್ತರ ಮತ್ತು ಬೆಂಬಲಿಗರ ಮೇಲೆ ಮಾರಣಾಂತಿಕ ದಾಳಿಗಳನ್ನು ಮಾಡಿದ್ದಾರೆ. ರಾಜಕೀಯ ಲಾಭ ಇದ್ದರೆ ಯಾವುದಕ್ಕೂ ಹೇಸದ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಕಾಣದ ಕೈಗಳನ್ನು ಹೊಂದಿರುವ ಫ್ಯಾಸಿಸ್ಟ್ ಶಕ್ತಿಗಳು ಪ್ರಬಲಗೊಳ್ಳುತ್ತಿರುವ ಇಂದಿನ ಸನ್ನಿವೇಶದಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ಈ ಬೆಳವಣಿಗೆಯ ಬಗ್ಗೆ ಕ್ಷಿಪ್ರ ಮತ್ತು ಗಂಭೀರ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಲೋಕಾಯುಕ್ತರಿಗೆ, ಎಲ್ಲಾ ಲೋಕಾಯುಕ್ತ ಸಿಬ್ಬಂದಿ ಮತ್ತು ಇಡೀ ಸಂಸ್ಥೆಗೆ ತಕ್ಷಣ ಭದ್ರತೆ ವ್ಯವಸ್ಥೆ ಗಟ್ಟಿಗೊಳಿಸಬೇಕು. ಈ ಘಟನೆ ಹಿಂದೆ ರಾಜಕೀಯ ಹುನ್ನಾರಗಳು, ದುರುದ್ದೇಶ ಇರುವ ಕಾಣದ ಕೈಗಳು ಇವೆಯೇ ಎಂಬುದರ ಬಗ್ಗೆ ಸಮಗ್ರ ತ್ವರಿತ ತನಿಖೆ ನಡೆಸಬೇಕು.

ಬಾಬಾಬುಡನ್ ಗಿರಿ ಸಂಘಪರಿವಾರದ ವಿತಂಡವಾದಗಳನ್ನು ತಿರಸ್ಕರಿಸಿದ ಪರಿಣತರ ಸಮಿತಿ

ಎಸ್. ವೈ. ಗುರುಶಾಂತ್

ಶ್ರೀ ಇನಾಂ ದತ್ತಾತ್ರೆಯ ಬಾಬಾಬುಡನ್ ಸ್ವಾಮಿ ದರ್ಗಾ - ಪೀಠದ ವಿವಾದಕ್ಕೆ ಸಂಬಂಧಿಸಿ ಕರ್ನಾಟಕ ಸರ್ಕಾರ ಬಹು ಮಹತ್ವದ ನಿರ್ಧಾರವನ್ನು ಕೈಗೊಂಡಿದೆ. ಇಲ್ಲಿನ ಧಾರ್ಮಿಕ ಸ್ವರೂಪ, ಆಚರಣೆಗಳು, ಯಾವ ಇಲಾಖೆ ಅಥವಾ ಯಾರ ಸುಪರ್ದಿನಲ್ಲಿ ಈಗ ಶ್ರದ್ಧಾಕೇಂದ್ರದ ನಿರ್ವಹಣೆ ನಡೆಯಬೇಕು ಎಂಬಂತಹ ಮಹತ್ವದ ಪ್ರಶ್ನೆಗೆ 'ಪರಿಣತರ ಸಮಿತಿ' ಯು ನೀಡಿದ ವರದಿಯನ್ನು ಸಚಿವ ಸಂಪುಟ 2018 ಮಾರ್ಚ್ 3 ರಂದು ಒಪ್ಪಿಕೊಳ್ಳುವ ಮೂಲಕ ವಿವಾದದ ಇತ್ಯಾರ್ಥಕ್ಕೆ ಪ್ರಮುಖ ಹೆಜ್ಜೆ ಇರಿಸಿದೆ.

ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿಯಲ್ಲಿರುವ ದರ್ಗಾ-ಪೀಠದ ಗುಹೆ ಕೋಮು ಸೌಹಾರ್ದತೆ, ಹಿಂದೂ-ಮುಸ್ಲಿಮರನ್ನೂ ಒಳಗೊಂಡು ವಿವಿಧ ಧರ್ಮಿಯರ ಭಾವೈಕ್ಯತೆಯ ಧಾರ್ಮಿಕ ಶ್ರದ್ಧಾ ಕೇಂದ್ರ. ಈ ಅನನ್ಯತೆಯನ್ನು ದೇಶದ ಸರ್ವೋಚ್ಚ ನ್ಯಾಯಾಲಯ ಮುಕ್ತ ಕಂಠದಿಂದ ಪ್ರಶಂಸಿಸಿ, ಈ ದೃಷ್ಟಿ-ಆಚರಣೆಗಳನ್ನು ಪಾಲಿಸಿದರೆ ಬಹುತೇಕ ವಿವಾದಗಳೇ ಇರುವುದಿಲ್ಲ ಎಂಬ ಇಂಗಿತವನ್ನು ಅದು ವ್ಯಕ್ತಪಡಿಸಿದೆ. ಆದರೆ ಭಾರತೀಯ ಸಂಸ್ಕೃತಿ ಜನ ಪರಂಪರೆಯ ಬಗ್ಗೆ ಕಿಂಚಿತ್ತೂ ಗೌರವ ಇಲ್ಲದ ಫ್ಯಾಶಿಸ್ಟ್ ಶಕ್ತಿಗಳು ಬಹುವೈವಿಧ್ಯತೆಯ ಸಂಸ್ಕೃತಿ-ಪರಂಪರೆಯನ್ನೂ ಧ್ವಂಸಗೊಳಿಸಲು ಕಾರ್ಯಾಚರಣೆಗೆ ಇಳಿದಿವೆ. ಭಾವೈಕ್ಯತೆಯ, ಸೂಫಿ ಸಂತರ ಧಾರ್ಮಿಕತೆಗೆ ಎದುರಾಗಿ ಅಸಹಿಷ್ಣುತೆಯ, ಹಿಂದುತ್ವದ ಯಜಮಾನಿಕೆಯ ಹೇರಿಕೆಗೆ ವಿಶ್ವ ಹಿಂದೂ ಪರಿಷತ್, ಭಜರಂಗದಳದಂತಹ ಸಂಘಪರಿವಾರದ ಘಟಕಗಳು ಸತತವಾಗಿ ಯತ್ನ ನಡೆಸುತ್ತಲೇ ಇವೆ. ಹೀಗಾಗಿ ನೆಲದ ಕಾನೂನುಗಳನ್ನು, ಸಂವಿಧಾನವನ್ನೂ, ಪರಂಪರೆಯನ್ನೂ ಗೌರವಿಸದ, ಪರಿಪಾಲಿಸದ ಹಿಂದುತ್ವದ ಫ್ಯಾಶಿಸ್ಟ್ ಶಕ್ತಿಗಳು ಹಲವು ಬಗೆಯಲ್ಲಿ ದಾಳಿ ನಡೆಸಿಕೊಂಡೇ ಬಂದಿವೆ. ಇದರೊಟ್ಟಿಗೆ ಸರ್ಕಾರಗಳ ತಪ್ಪು ಕ್ರಮಗಳು ಸಮಸ್ಯೆಯನ್ನು ಇನ್ನಷ್ಟು ಗೋಜಲಾಗಿಸಿರುವುದು ಸಹ ಗಮನಾರ್ಹ.

ಇದು ಸೂಫಿ ಸಂತರ ಪರಂಪರೆಯ ಶ್ರದ್ಧಾಕೇಂದ್ರವಾಗಿರಬೇಕೋ ಅಥವಾ ವೈದಿಕಶಾಹಿ ಆಚರಣೆಯ ಕೇಂದ್ರವಾಗಬೇಕೋ ಎಂಬ ವಿವಾದಕ್ಕೆ ಹಲವು ದಶಕಗಳ ಇತಿಹಾಸವಿದೆ. ನಿಜ, ವಿವಾದ ಪುರಾತನವಲ್ಲ, ತೀರಾ ಇತ್ತೀಚಿನದು. 1964 ರಲ್ಲಿ ಕರ್ನಾಟಕ ಸರ್ಕಾರ ಈ ದರ್ಗಾ ಗುಹೆಯನ್ನು ವಕ್ಫ್ ಬೋರ್ಡಿನ ಸುಪರ್ದಿಗೆ ಒಪ್ಪಿಸುವ ನಿರ್ಧಾರ ಕೈಗೊಂಡ ನಂತರದಲ್ಲಿ ಹುಟ್ಟಿ ಬಳಿಕ ವಿವಿಧ ತಿರುವುಗಳನ್ನು ಪಡೆದು 1992 ರಲ್ಲಿ ಬಾಬ್ರಿ ಮಸೀದಿ ಧ್ವಂಸದ ನಂತರ 'ಹಿಂದುತ್ವ'ದ ಶಕ್ತಿಗಳ ರಣರಂಗವಾಗಿತ್ತು.

ಈ ವಿವಾದ ಮತ್ತೆ ಸುಪ್ರಿಂ ಕೋರ್ಟ್‌ನ ಮೆಟ್ಟಿಲೇರಿದ ಬಳಿಕ ದರ್ಗಾದ ಮುಖ್ಯಸ್ಥರಾದ 'ಶೇಖಾದ್ರಿ'ಯವರು ಮಾಡಿದ ಮನವಿಗೆ ಸ್ಪಂದಿಸಿ, ಸೆಪ್ಟಂಬರ್ 3, 2015 ರಂದು ನ್ಯಾಯಾಲಯವು ಪರಿಹಾರ ಕಾಣುವಂತೆ ನಿರ್ಧಾರ ಕೈಗೊಳ್ಳಲು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿತು. ಸರ್ಕಾರ ವಿಳಂಬ ಮಾಡುತ್ತಿದೆಯೆಂದು ಮನಃ ಸುಪ್ರಿಂ ಕೋರ್ಟ್‌ಗೆ ಶೇಖಾದ್ರಿಯವರು ಮನವಿ ಮಾಡಿದಾಗ, ನ್ಯಾಯಾಲಯದ ಸೂಚನೆಯಂತೆ ರಾಜ್ಯ ಸರ್ಕಾರವು ಕಾನೂನು ಸಚಿವ ಟಿ. ಜಯಚಂದ್ರರವರ ನೇತೃತ್ವದಲ್ಲಿ ಉಪ ಸಮಿತಿಯನ್ನು ರಚಿಸಿತು. ಈ ಉಪಸಮಿತಿಯು 'ಪರಿಣತರ ಅಭಿಪ್ರಾಯ' ಪಡೆಯಲು ಒಂದು ಕಾನೂನು ಸಂಸ್ಕೃತಿ, ಇತಿಹಾಸ ಕ್ಷೇತ್ರಗಳ ಸಮಿತಿಯೊಂದನ್ನು 2017 ರಲ್ಲಿ ರಚಿಸಿತು. ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್, ವಿದ್ವಾಂಸ ಡಾ. ರಹಮತ್ ತರಿಕೆರೆ, ಇತಿಹಾಸಕಾರ ಪ್ರೊ. ಎಸ್. ಶೆಟ್ಟರ್ ಉಳ್ಳ ಸಮಿತಿಯು ವಿವರವಾಗಿ ಅಧ್ಯಯನ ವಸ್ತು ಸ್ಥಿತಿಗಳ

ಪುಟ 6 ಕ್ಕೆ

ಪರಿಣತರ ಸಮಿತಿಯ ವರದಿಯ ಸಾರಾಂಶ

ರಾಜ್ಯ ಸಂಪುಟವು ಬಾಬಾಬುಡನ್ ದರ್ಗಾ ವಿಷಯದ ಬಗ್ಗೆ ರಚಿಸಲಾಗಿದ್ದ ಪರಿಣತರ ಸಮಿತಿಯ ವರದಿಯನ್ನು ಇಡಿಯಾಗಿ ಒಪ್ಪಿಕೊಂಡಿದೆ. ವರದಿಗಳ ಪ್ರಕಾರ ಪರಿಣತರ ಸಮಿತಿಯ ನೀಡಿದ ವರದಿಯ ಸಾರಾಂಶ ಈ ಕೆಳಗಿನಂತಿದೆ:

ಸಮಿತಿಯು ಮೂರು ಮುಖ್ಯ ಶಿಫಾರಸ್ಸುಗಳನ್ನು ಮಾಡಿದೆ:

1. ಬಾಬಾಬುಡನ್ ದರ್ಗಾದಲ್ಲಿ ಈಗಿರುವ ಮುಜಾವರರ ಜೊತೆಗೆ ಹಿಂದೂ ಅರ್ಚಕರನ್ನು ನೇಮಕ ಮಾಡಿ ಆಗಮ ಪದ್ಧತಿಯ ಪೂಜಾ ವಿಧಾನವನ್ನು ಶಿಫಾರಸ್ಸನ್ನು ಮಾಡಿದ್ದ 2010ರ ಧಾರ್ಮಿಕ ದತ್ತಿ ಆಯುಕ್ತರ ವರದಿಯನ್ನು ತಿರಸ್ಕರಿಸಬೇಕು.
2. ದರ್ಗಾದ ಧಾರ್ಮಿಕ ಸ್ವರೂಪದಲ್ಲಿ ಮಾಡುವ ಯಾವುದೇ ಬದಲಾವಣೆಯು 1991ರ ಧಾರ್ಮಿಕ ಶ್ರದ್ಧಾ ಕೇಂದ್ರಗಳ ಕಾಯಿದೆಯ ಉಲ್ಲಂಘನೆಯಾಗುತ್ತದೆ. (ಆ ಕಾಯಿದೆಯ ಪ್ರಕಾರ ಬಾಬ್ರಿ ಮಸೀದಿಯನ್ನು ಹೊರತು ಪಡಿಸಿ ದೇಶದ ಮಿಕ್ಕೆಲ್ಲಾ ಧಾರ್ಮಿಕ ಕೇಂದ್ರಗಳ ಸ್ವರೂಪವನ್ನು 1947ರ ಆಗಸ್ಟ್ 15ರಂದು ಯಾವ ಸ್ವರೂಪದಲ್ಲಿತ್ತೋ ಅದೇ ಸ್ವರೂಪದಲ್ಲಿ ಕಾಪಾಡಿಕೊಳ್ಳತಕ್ಕದ್ದೆಂದು ಹೇಳುತ್ತದೆ.) ಹೀಗಾಗಿ ಬಾಬಾಬುಡನ್ ದರ್ಗಾವನ್ನು ದರ್ಗಾ ಆಗಿಯೇ ಉಳಿಸಿಕೊಳ್ಳಬೇಕು.
3. ದರ್ಗಾದ ಮುಖ್ಯಸ್ಥರಾದ ಶೇಖಾದ್ರಿಯು ಒಂದು ವೇಳೆ ಹಣಕಾಸು ಅವ್ಯವಹಾರ ಮಾಡಿದಲ್ಲಿ ಸರ್ಕಾರ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು.

ಇವಲ್ಲದೆ:

- ಹೈದರಾಲಿಯ ಕಾಲದಲ್ಲಿ ಈ ಕೇಂದ್ರವು ಒಂದು ದೇವಸ್ಥಾನವಾಗಿತ್ತೆಂದು ರುಜುವಾತು ಮಾಡಬಲ್ಲ ಯಾವುದೇ ದಾಖಲೆಯನ್ನು ಒದಗಿಸಿಲ್ಲ. ಬದಲಿಗೆ ದರ್ಗಾ ಎಂಬ ಬಗ್ಗೆ ಸಾಕಷ್ಟು ದಾಖಲೆಗಳನ್ನು ಒದಗಿಸಲಾಗಿದೆ.
- ಇಲ್ಲಿ ವೀರಶೈವ ಪರಂಪರೆ ಇತ್ತೆಂಬ ಸೂರ್ಯನಾಥ ಕಾಮತರ ಲೇಖನವಾಗಲೀ, ಜಬ್ಬಾರ್ ಅವರ ಖಲಂದರ್ ಎ ಬರ್ಹಾಕ್ ಪುಸ್ತಿಕೆಯಾಗಲೀ, ಐತಿಹಾಸಿಕ ದಾಖಲೆಯಲ್ಲ.
- ಬಾಬಾಬುಡನ್ ದರ್ಗಾ ಇರುವುದು ನಾಗೇನಹಳ್ಳಿಯಲ್ಲಿ ಮತ್ತು ಇನಾಂ ದತ್ತಾತ್ರೇಯ ಪೀಠದಲ್ಲಿರುವುದು ದತ್ತಾತ್ರೇಯ ದೇವಸ್ಥಾನ ಎಂಬ ವಾದಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ಬದಲಿಗೆ ನಾಗೇನಹಳ್ಳಿಯೂ ಸಹ ಬಾಬಾಬುಡನ್ ದರ್ಗಾಗೆ ಕೊಡಲಾಗಿರುವ ಉಂಬಳಿಯಷ್ಟೆ ಎಂದು ಐತಿಹಾಸಿಕ ದಾಖಲೆಗಳು ಸಾಬೀತು ಮಾಡುತ್ತವೆ.

ಸುರತ್ಕಲ್ ಮಾರುಕಟ್ಟೆ ಹಂಚಿಕೆ ಭ್ರಷ್ಟಾಚಾರ ವಿರೋಧಿಸಿ ಡಿವೈಎಫ್ಐ ಪ್ರತಿಭಟನೆ:



ಸುರತ್ಕಲ್‌ನಲ್ಲಿ ರೂ.120 ಕೋಟಿ ವೆಚ್ಚದಲ್ಲಿ ನೂತನ ಮಾರುಕಟ್ಟೆ ನಿರ್ಮಾಣವಾಗಲಿದ್ದು ಅದಕ್ಕೆ ಪೂರ್ವಭಾವಿಯಾಗಿ ರಚಿಸಿರುವ ತಾತ್ಕಾಲಿಕ ಮಾರುಕಟ್ಟೆಯಲ್ಲಿ ಮಳಿಗೆಗಳ ಹಂಚಿಕೆ ಮಾಡಲಾಗಿತ್ತು. ತಾತ್ಕಾಲಿಕ ಮಾರುಕಟ್ಟೆಯಲ್ಲಿ ಮಳಿಗೆಗಳನ್ನು ಗುತ್ತಿಗೆಗೆ ಪಡೆದಿರುವವರು ಕೆಲವರು ಕಟ್ಟಡದ ಗೋಡೆಗಳನ್ನು ಒಡೆದು ವಿಸ್ತರಿಸಿ ಕಾಮಗಾರಿ ಮಾಡುತ್ತಿರುವುದು ಸ್ಥಳೀಯ ಶಾಸಕಿ ಮೊಯ್ದಿನ್ ಬಾವಾರವರ ಬೆಂಬಲದಿಂದ ಎಂದು ತಿಳಿದು ಬಂದಿದೆ. ಹಳೆಯ ಮಾರುಕಟ್ಟೆಯಲ್ಲಿ 238 ಅಂಗಡಿಗಳಿದ್ದವು. ತಾತ್ಕಾಲಿಕ ಮಾರುಕಟ್ಟೆಯಲ್ಲಿ 285 ಮಂದಿಗೆ ಹಂಚಿಕೆ ನಡೆದಿದೆ. ಇದರಲ್ಲಿ ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತ ನಡೆದಿದೆ ಎಂದು ಆರೋಪಿಸಿ ಡಿವೈಎಫ್ಐ ನಗರ ಸಮಿತಿ ನೇತೃತ್ವದಲ್ಲಿ ಮಾರ್ಚ್ 3 ರಿಂದ ಅಹೋರಾತ್ರಿ ಪ್ರತಿಭಟನೆಯನ್ನು ತಾತ್ಕಾಲಿಕ ಮಾರುಕಟ್ಟೆಯ ಮುಂದೆಯೇ ನಡೆಸಲಾಗುತ್ತಿದೆ.

ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಸ್ಥಳಕ್ಕೆ ಬಂದ ಮಂಗಳೂರು ಮಹಾನಗರ ಪಾಲಿಕೆ ಆಯುಕ್ತರು ಸ್ಥಳಕ್ಕೆ ಬಂದಾಗ ಅವರ ವಿರುದ್ಧವೇ ಪ್ರತಿಭಟನಾಕಾರರು ಘೋಷಣೆ ಕೂಗಿದರು. ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ಪಾಲಿಕೆ ಆಯುಕ್ತರು ಮತ್ತು ಅಧಿಕಾರಿಗಳು ಶಾಸಕರೊಂದಿಗೆ ಶಾಮೀಲಾಗಿದ್ದಾರೆ ಎಂದು ದೂರಿದರು.

ಕರಾವಳಿ ಕಥೆ

ಕಾಮಗಾರಿಯನ್ನು ಗುತ್ತಿಗೆ ಪಡೆದು ಬೇಕಾಬಿಟ್ಟಿ ಮಾಡುತ್ತಿರುವ ಗುತ್ತಿಗೆದಾರರ ವಿರುದ್ಧ ಅಧಿಕಾರಿಗಳು ಸುರತ್ಕಲ್ ಪೋಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರತಿಭಟನಾಕಾರರು 6 ರಾತ್ರಿಗಳಲ್ಲೂ ಧರಣಿ ಮುಂದುವರಿಸಿದರು. ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್, ಜಿಲ್ಲಾ ಸಮಿತಿಯ ಶ್ರೀನಾಥ್ ಕಾಟಿಪಳ್ಳ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅಮಾಯಕ ಇರ್ಷಾದ್‌ನ ಬಂಧನ ವಿರುದ್ಧ ಡಿವೈಎಫ್ಐ ಪ್ರತಿಭಟನೆ:

ಬಿಜೆಪಿ ರಾಜ್ಯಾಧ್ಯಕ್ಷ ಅಮಿತ್ ಶಾ ಇತ್ತೀಚೆಗೆ ಮಲ್ಪೆಗೆ ಭೇಟಿ ನೀಡಿದ್ದು, ಅಲ್ಲಿ ಮೀನುಗಾರ ಸಮುದಾಯವನ್ನು ಉದ್ದೇಶಿಸಿ ಭಾಷಣ ಮಾಡಿದ್ದರು. ಮಂಗಳೂರು ಬೆಂಗ್ರೆಯ ಮೊಗವೀರ ಬಿಜೆಪಿ ಕಾರ್ಯಕರ್ತರು ಆ ಸಮಾವೇಶದಿಂದ ರಾತ್ರಿ ಊರಿಗೆ ವಾಪಾಸಾಗುವಾಗ ತಾವು ಮನೆಮಾಡಿರುವ ತೋಟ ಬೆಂಗ್ರೆಗೆ ವಾಹನದಲ್ಲಿ ಬರಬೇಕಿದ್ದರೆ ಮುಸ್ಲಿಮರೇ ವಾಸವಾಗಿರುವ ಕಸ್ಬಾ ಬೆಂಗ್ರೆ ದಾಟಿ ಬರಬೇಕಿತ್ತು. ಹಾಗೆ ಬರುವಾಗ ಆ ಸಮಾವೇಶಕ್ಕೆ ಹೋದ ಗುಂಪು ಮತ್ತು ಕಸ್ಬಾದ ಮುಸ್ಲಿಮರ ಮಧ್ಯೆ ಸಣ್ಣ ಮಟ್ಟದ ಕಲ್ಲು ತೂರಾಟ ನಡೆದಿದೆ. ಪಣಂಬೂರು ಪೋಲೀಸ್ ಠಾಣೆಯವರು ವಿಚಾರಣೆಗಾಗಿ ಸಂಶಯಿತ ಕೆಲವರ ತನಿಖೆ ನಡೆಸಲು ಒಯ್ದಿದ್ದಾರೆ. ಇರ್ಷಾದ್ ಎಂಬ ಅಮಾಯಕ ತರುಣನನ್ನು ಒಯ್ದು ನಾಲ್ಕು ದಿನದಿಂದ ಇಟ್ಟುಕೊಂಡಿರುವ ಬಗ್ಗೆ ಜನರಿಗೆ ಆಕ್ರೋಶ ಉಂಟಾಗಿದೆ.

ಮಾರ್ಚ್ 4 ರಂದು ಡಿವೈಎಫ್ಐ ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಬೆಂಗ್ರೆ ನಾಗರಿಕರು ಪ್ರತಿಭಟನೆ ನಡೆಸಿ ಅಮಾಯಕ ಇರ್ಷಾದ್‌ನನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು. ಬಳಿಕ ಪೋಲೀಸ್ ಕಮೀಷನರಿಗೆ ಮನವಿ ನೀಡಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಜತೆ ಕಾರ್ಯದರ್ಶಿ ನಿತಿನ್ ಕುತ್ತಾರ್ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡಿದರು.

ಬೈಂದೂರು : ಆರೋಗ್ಯ ಕೇಂದ್ರವನ್ನು ತಾಲೂಕು ಆಸ್ಪತ್ರೆಯಾಗಿ ಮಾರ್ಪಾಡಿಸಲು ಆಗ್ರಹ

ಬೈಂದೂರಿನ ಸುತ್ತಲಿನ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಅತ್ಯಗತ್ಯವಾಗಿ ಬೇಕಾಗಿರುವ ಹೆರಿಗೆ ವಿಭಾಗ ಆರಂಭಿಸಿ, ಮಹಿಳಾ ತಜ್ಞೆ ವೈದ್ಯರನ್ನು ನೇಮಕಮಾಡಬೇಕು. ಸರಕಾರದ ಮಂಜೂರಾತಿ ಹುದ್ದೆ 48 ರಲ್ಲಿ ಕೇವಲ 20 ಮಂದಿ ಹುದ್ದೆಯಲ್ಲಿ ಕಾರ್ಯನಿರತ ಸಿಬ್ಬಂದಿಗಳಿದ್ದಾರೆ. ಉಳಿದ 28 ಹುದ್ದೆ ತೆರವು ಗೊಂಡಿರುವುದನ್ನು ಈ ಕೂಡಲೇ ಭರ್ತಿ ಮಾಡಲು ಕ್ರಮ ವಹಿಸಬೇಕು. ಹೊರಗುತ್ತಿಗೆ ನೌಕರರಿಗೆ ಸರಕಾರಿ ನೌಕರರಿಗೆ ಸಿಗುವ ಎಲ್ಲಾ ಕಾನೂನು ಬದ್ಧ ಸೌಲಭ್ಯ ಕೊಡಿಸಬೇಕು. ಹೊರಗುತ್ತಿಗೆ ಪದ್ಧತಿ ರದ್ದುಗೊಳಿಸಬೇಕು.

ಅರವಳಿಕೆ ತಜ್ಞರು, ಕಛೇರಿ ಅಧೀಕ್ಷಕರು, ಗುಮಾಸ್ತ/ ಟೈಪಿಸ್ಟ್ ನೇತ್ರಾಧಿಕಾರಿ, ಕಿರಿಯ ವೈದ್ಯಕೀಯ, ಕ್ಷಕಿರಣ ತಂತ್ರಜ್ಞರು, ಹಿರಿಯ ಪುರುಷ ಆರೋಗ್ಯ ಸಹಾಯಕ, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ (5 ಹುದ್ದೆ) ಪುರುಷ ಆರೋಗ್ಯ ಸಹಾಯಕ ಒಟ್ಟು 27 ಹುದ್ದೆಯನ್ನು ಕೂಡಲೇ ಭರ್ತಿ ಮಾಡಬೇಕು ಎಂದು ಸಿಪಿಐ(ಎಂ) ಬೈಂದೂರು ವಲಯ ಸಮಿತಿ ನೇತೃತ್ವದಲ್ಲಿ 9 ಮಾರ್ಚ್ 2018 ಬೈಂದೂರು ಸಮುದಾಯ ಆರೋಗ್ಯ ಕೇಂದ್ರದ ಎದುರುಗಡೆ ಹಕ್ಕೊತ್ತಾಯ ಪ್ರತಿಭಟನೆ ನಡೆಸಿತು. ಸಿಪಿಐ(ಎಂ) ಪಕ್ಷದ ಮುಖಂಡರಾದ ಸುರೇಶ್ ಕಲ್ಲಾಗರ, ವೆಂಕಟೇಶ ಕೋಣಿ, ಗಣೇಶ ತೊಂಡೆಮಕ್ಕಿ, ಭಾಗವಹಿಸಿದ್ದರು.

ವಿಶ್ವ ಮಹಿಳಾ ದಿನಾಚರಣೆ:



ಮಂಗಳೂರು:

ದ.ಕ.ಜಿಲ್ಲಾ ಜನವಾದಿ ಮಹಿಳಾ ಸಂಘಟನೆ ಮತ್ತು ದುಡಿಯುವ ಮಹಿಳೆಯರ ಸಮನ್ವಯ ಸಮಿತಿ (ಸಿಐಟಿಯು) ನೇತೃತ್ವದಲ್ಲಿ ಮಂಗಳೂರಿನ ಬೋಳಾರದಲ್ಲಿ ಹಂಚು ಕಾರ್ಮಿಕರ ಸಂಘದ ಸಭಾಂಗಣದಲ್ಲಿ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.

ಬರಹಗಾರ್ತಿ ಹಾಗೂ ಮಹಿಳಾಪರ ಚಿಂತಕಿ ಬಿ.ಎಂ.ರೋಹಿಣಿ ಅವರು ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು. ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಜಯಂತಿ ಬಿ.ಶೆಟ್ಟಿ, ಉಪಾಧ್ಯಕ್ಷೆ ಹೇಮಲತಾ, ಕಾರ್ಯದರ್ಶಿ ರಾದಾ ಮೂಡಬಿದರೆ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ (ಸಿಐಟಿಯು) ಸಂಚಾಲಕಿ ಪದ್ಮಾವತಿ ಶೆಟ್ಟಿ ಸಮಾರಂಭದ ವೇದಿಕೆಯಲ್ಲಿದ್ದರು.

ದಾಂಡೇಲಿ:

"ಎಲ್ಲಾ ಮಹಿಳೆಯರಿಗೂ ಕೆಲಸದ ಪ್ರದೇಶದಲ್ಲಿ, ವಾಸಿಸುವ ಸಮಾಜದಲ್ಲಿ ಜೀವನದದ ಪ್ರತಿಯೊಂದು ಹಂತದಲ್ಲಿ ನಾವು ಸಮಾನತೆಗಾಗಿ ಹೋರಾಡೋಣ" ಎಂದು ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ ಅವರು ಹೇಳಿದರು. ಅವರು ದಾಂಡೇಲಿಯಲ್ಲಿ ಮಹಿಳಾ ದಿನಾಚರಣೆ ಉದ್ದೇಶಿಸಿ ಮಾತನಾಡುತ್ತಿದ್ದರು. ದಿನಾಚಣೆಯನ್ನು ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು), ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ರಿ), ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ(ರಿ) ಜಂಟಿಯಾಗಿ ಸಂಘಟಿಸಿತು. ಸಂಜೆ ಜನವಾದಿ ಮಹಿಳಾ ಸಂಘಟನೆಯಿಂದ ಪ್ರಸಕ್ತ ವಿಚಾರಗಳ ಕುರಿತು ಚರ್ಚೆ ಹಮ್ಮಿಕೊಳ್ಳಲಾಗಿತ್ತು.



ಮಾತೆಂದರೆ ಇದು

"ಕೇವಲ ರಾಜಕೀಯ ಕ್ಷೇತ್ರವೊಂದೇ ಅಲ್ಲದೇ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ ಮಾಡದಿದ್ದರೆ ಸಮಾಜವಾದವಲ್ಲ ಪ್ರಜಾಪ್ರಭುತ್ವವೂ ಸ್ಥಿರವಾಗಲಾರದು. ಎಲ್ಲ ವಿಮೋಚನಾ ಸಮರಗಳ ಅನುಭವವೂ ಇದನ್ನೇ ಹೇಳುತ್ತದೆ. ಕ್ರಾಂತಿಯಲ್ಲಿ ಮಹಿಳೆಯರು ವಹಿಸಿದ ಪಾತ್ರದ ಆಧಾರದಲ್ಲಿ ಅದರ ಯಶಸ್ಸು ಇರುತ್ತದೆ."

– ವಿ.ಐ.ಲೆನಿನ್, ನವೆಂಬರ್ 20, 1918



ಜನವಾದಿ ನಾಯಕಿ ಸವಿತಾ ಇನ್ನಿಲ್ಲ

ಜನವಾದಿ ಮಹಿಳಾ ಸಂಘಟನೆಯ ಕೋಲಾರ ಜಿಲ್ಲಾ ಅಧ್ಯಕ್ಷರು ಹಾಗೂ ರಾಜ್ಯ ಸಮಿತಿ ಸದಸ್ಯರಾಗಿ ಸವಿತಾ ಅವರು ಕೋಲಾರದಲ್ಲಿ ಮಹಿಳಾ ಚಳುವಳಿ ಬಲಿಷ್ಠ ವಾಗಿ ಕಟ್ಟಲು ನಿರಂತರವಾಗಿ ತೊಡಗಿಸಿಕೊಂಡಿದ್ದರು. ಅವರ ಸಾವಿನಿಂದ ಮಹಿಳಾ ಚಳುವಳಿಗೆ ಅಪಾರ ನಷ್ಟ ವಾಗಿದೆ ಎಂದು ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಲೆನಿನ್

ಧಮನಿಯಲಿ ಬಿಸಿನೆತ್ತರುಕ್ಕದೆ ನೆನೆಯಲಾರೆ
  ನಿನ್ನಂ, ಲೆನಿನ್ ! ನಿನ್ನ ಹೆಸರದು ಸಿಡಿಲ್‌ಸದ್ದು
  ದೊರೆಗಿವಿಗೆ; ನಿನ್ನ ಸಮತಾಬೋಧೆ ಸಿಡಿಮದ್ದು
ನರನ ಸಂಗ್ರಹ ಬುದ್ಧಿ ಸ್ವಾರ್ಥತೆಯನುರಿದೋರೆ
ದಹಿಸಿ, ನಿಃಸ್ವಾರ್ಥತೆಯ ಬೆಂಕಿಯಿಂ ಹೃತ್ಕುಂಡ
  ಸರ್ವದಾ ಪ್ರಜ್ವಲಿಸುವಂತೆಸಗೆ. ಜಮದಗ್ನಿ
  ಸುತನಂತೆ ನೀನು ಪಾರ್ಥಿವ ಕುಲಕೆ ಬಡಬಾಗ್ನಿ !
ದುಡಿವ ದೀನರ ದೈವವನ್ಯರ್ಗೆ ಯಮದಂಡ!
ಗೆಯ್ಯುವರ್ಗ್ಗೇನಿಲ್ಲ, ಕುಳಿತುಂಬರಿಗೆ ಬೆಲ್ಲ ;
  ಮುಳ್ಳುನೋವಾಳಿಂಗೆ, ಕಂಪು ಹೂವೊಡೆಯಂಗೆ ;
ಗೋಳವಗೆ, ಸೊಂಪಿವಗೆ. ಈ ತರತಮವನೆಲ್ಲ
  ಮುರಿಯೆ ಬಹನಲ್ಲಲ್ಲಿ ಕಲ್ಕಿ. ರಕ್ತದ ಗಂಗೆ
ಸಿರಿ ನಾಳದಿಂ ಮರಳಿ ಬಡತನದೊಣಗು ಮೈಗೆ
ಹರಿದಕ್ಕೆ ದೊರೆಗಳಸಿ ಕೂಲಿರೈತರ ಕೈಗೆ !

- ಕುವೆಂಪು


ಬೆಂಗಳೂರು

ತ್ರಿಪುರಾ ದೌರ್ಜನ್ಯಗಳ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆ


ಚಿಕ್ಕಬಳ್ಳಾಪುರ

ತ್ರಿಪುರಾದಲ್ಲಿ ಚುನಾವಣಾ ಗೆಲುವಿನ ಬಳಿಕ ಬಿಜೆಪಿ–ಐಪಿಎಫ್‌ಟಿ ಒಕ್ಕೂಟದ ಕಾರ್ಯಕರ್ತರು ಸಿಪಿಐ(ಎಂ) ಕಾರ್ಯಕರ್ತರ ಮೇಲೆ ದಾಳಿ, ಮನೆ ಮೇಲೆ ದಾಳಿ, ಮನೆಗೆ ಬೆಂಕಿ ಹಚ್ಚಿದ್ದು, ಪಕ್ಷದ ಕಚೇರಿಗೆ ದಾಳಿ ಮತ್ತು ವಶೀಕರಿಸಿದ್ದು, ಲೆನಿನ್ ಪ್ರತಿಮೆ ಕೆಡವಿದ್ದು ಇತ್ಯಾದಿ ದೌರ್ಜನ್ಯಗಳನ್ನು ಖಂಡಿಸಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗಿದೆ. ಬೆಂಗಳೂರು, ಮಂಗಳೂರು, ಬೆಳ್ತಂಗಡಿ, ಚಿಕ್ಕಬಳ್ಳಾಪುರ, ಕೋಲಾರ, ಕಲಬುರ್ಗಿ, ದಾವಣಗೆರೆ, ಹುಬ್ಬಳ್ಳಿ, ಬಿಜಾಪುರ, ದೇವದುರ್ಗ, ಹಟ್ಟಿಯಲ್ಲಿ ನಡೆದ ವರದಿಗಳು ಬಂದಿವೆ. ಬೆಂಗಳೂರಿನ ಪ್ರತಿಭಟನೆ ಸಭೆಯಲ್ಲಿ ಹೆಚ್ಚಿನವರು ಲೆನಿನ್ ಮುಖವಾಡ ಧರಿಸಿ ಪ್ರತಿಭಟಿಸಿದ್ದು ವಿಶೇಷವಾಗಿತ್ತು. ಬೆಂಗಳೂರು, ದಾವಣಗೆರೆ ಯಲ್ಲಿ ಸಿಪಿಐ(ಎಂ) ಜತೆ ಸಿಪಿಐ ಮುಂತಾದ ಎಡ ಪಕ್ಷಗಳೂ ಸೇರಿದ್ದೂ ವಿಶೇಷವಾಗಿತ್ತು. ಕೆಲವು ಕಡೆ ಜಿಲ್ಲಾ/ತಾಲೂಕು ಅಧಿಕಾರಿಗಳಿಗೆ ಆರೆಸ್ಸೆಸ್ ನಿಷೇಧ ಮಾಡಲು ಮನವಿ ಸಲ್ಲಿಸಲಾಯಿತು. ಬಿಜಾಪುರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿಕೃತಿಯನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.



ದಾವಣಗೆರೆ

ಗ್ರಾಮ ಪಂಚಾಯಿತಿ ನೌಕರರಿಂದ ವಿಜಯೋತ್ಸವ



ಕೊನೆಗೂ ರಾಜ್ಯ ಸರ್ಕಾರ ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ ಹೋರಾಟಕ್ಕೆ ಮಣಿದು 50,114 ಗ್ರಾಮ ಪಂಚಾಯತ್ ನೌಕರರಿಗೆ ನೇರವಾಗಿ ಮಾರ್ಚ್ ತಿಂಗಳಿನಿಂದಲೇ ವೇತನ ಪಾವತಿಸಲು ಒಪ್ಪಿ ಆದೇಶ ಹೊರಡಿಸಿದೆ. ನೌಕರರ ಸಂಘದಿಂದ 1988 ರಿಂದ ಸತತವಾಗಿ ಇಲ್ಲಿಯವರೆಗೆ ಜಿಲ್ಲೆಯಿಂದ ಬೆಂಗಳೂರು ತನಕ ಬೇಡಿಕೆಗಳ ಒತ್ತಾಯಿಸಿ ಅನೇಕ ಹೋರಾಟ ಮಾಡಿದ ಫಲವಾಗಿ ಕರ್ನಾಟಕ ರಾಜ್ಯ ಗ್ರಾಮೀಣ ಸಚಿವ ಎಚ್.ಕೆ.ಪಾಟೀಲ ಅವರು ನೌಕರರ ವೇತವನ್ನು ನೇರವಾಗಿ ಸರ್ಕಾರದ ನಿಗದಿ ಪಡಿಸಿದ ವೇತನವನ್ನು ಗ್ರಾಮ ಪಂಚಾಯತ ಸಿಬ್ಬಂದಿಗಳ ಬ್ಯಾಂಕ್ ಖಾತೆ ಜಮಾ ಮಾಡಲಿಕ್ಕೆ ಆದೇಶ ನೀಡಿದ್ದನ್ನು ನೌಕರರ ಸಂಘ ಹಾಗೂ ರೈತ ಸಂಘಟನೆ ಹರ್ಷ ವ್ಯಕ್ತಪಡಿಸಿದೆ.

ಈ ಸಂದರ್ಭದಲ್ಲಿ ಕೆಲವು ಕಡೆ ಗ್ರಾಮ ಪಂಚಾಯತ್ ನೌಕರರ ಸಂಘ ವಿಜಯೋತ್ಸವ ಏರ್ಪಡಿಸಿದ ವರದಿಗಳು ಬಂದಿವೆ. ಇಂತಹ ಒಂದು ವರದಿ ಬಿಜಾಪುರದಿಂದ ಬಂದಿದೆ.

ವಿಜಯಪುರ: ಗ್ರಾಮ ಪಂಚಾಯಿತಿ ತಾಲೂಕಾ ನೌಕರರ ಸಂಘದ ಸಮಿತಿ ವತಿಯಿಂದ ರಾಜ್ಯ ಸರ್ಕಾರವು ಬೇಡಿಕೆ ಈಡೇರಿಸಿದ್ದರಿಂದ ಸಿಹಿ ವಿತರಿಸಿ ವಿಜಯೋತ್ಸವ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಕ.ರಾ.ಗ್ರಾ.ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ ಮಾತನಾಡಿ ಸರಕಾರದ ಈ ಆದೇಶವನ್ನು ಸ್ವಾಗತಿಸಿದರು. ಆದರೆ ಗ್ರಾಪಂ ನೌಕರರ ವೇತನ ಎರಡು ವರ್ಷದಿಂದ ವೇತನ ಕೊಡುತ್ತಿಲ್ಲ. ಸರ್ಕಾರದಿಂದ ಅನುದಾನ ಬಂದಿದ್ದು ಅದನ್ನು ದುರುಪಯೊಗ ಮಾಡಲಾಗುತ್ತಿದೆ. ಸರಕಾರಿ ನೌಕರರ ಸೌಲಭ್ಯಗಳು ಗ್ರಾ.ಪಂ. ನೌಕರರಿಗೂ ಸಿಗಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

ಗ್ರಾಮ ಪಂಚಾಯಿತಿ ನೌಕರರ ಸಂಘ ಮುಖಂಡರಾದ ಅಣ್ಣಾರಾಯ ಈಳಗೇರ ಮಾತನಾಡಿ, ಭವಿಷ್ಯ ನಿಧಿ, ಎ.ಎಸ್.ಐ., ಪಿಂಚಣಿ ಇನ್ನಿತರ ಸೌಲಬ್ಯದ ಒದಗಿಸಬೇಕೆಂದು ಸರಕಾರಕ್ಕೆ ಒತ್ತಾಯಿಸಿದರು. ಅಲ್ಲದೇ ಕೇಂದ್ರ ಹಾಗೂ ರಾಜ್ಯ ಸರ್ಕಾರ ಕಾರ್ಮಿಕ ವಿರೋಧಿ ನೀತಿಯಿಂದ ಕೆಟ್ಟ ದಿನಗಳ ಬರಲಿವೆ. ಇದಕ್ಕಾಗಿ ಕಾರ್ಮಿಕರೆಲ್ಲರೂ ಸಂಘಟಿತರಾಗಿ ಎದುರಿಸಲು ಸಿದ್ಧರಾಗಬೇಕೆಂದು ಕರೆ ನೀಡಿದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಲ್.ವೈ.ಹಂದ್ರಾಳ ಮಾತನಾಡಿದರು. ರಂಗಪ್ಪ ದಳವಾಯಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಜು ಜಾಧವ ಸ್ವಾಗತಿಸಿದರು. ರಫೀಕ ಬಂಡಾರಿ ಅಭಿನಂದನೆ ಸಲ್ಲಿಸಿದರು. ಪುಂಡಲೀಕ ಹಂದಿಗನೂರ, ಲಕ್ಷ್ಮೀಬಾಯಿ ಪಾಟೀಲ, ಇಸಾಕ ಜಮಾದಾರ, ಸಲೀಂ ನಾಯ್ಕೋಡಿ ಮುಂತಾದ ಮುಖಂಡರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ಮನೆ ನಿವೇಶನದ ಮಂಜೂರಾತಿಗೆ ಆಗ್ರಹಿಸಿ ಕೃಷಿಕೂಲಿಕಾರರ ಪ್ರತಿಭಟನೆ

ಕಲಬುರ್ಗಿಯ ಜಗತ್ ಸರ್ಕಲಿನಲ್ಲಿ ಮನೆ ನಿವೇಶನದ ಮಂಜೂರಾತಿಗೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ಕೃಷಿಕೂಲಿಕಾರರು ಪ್ರತಿಭಟನೆ ನಡೆಸಿದರು. ಮನೆ ನಿವೇಶನಕ್ಕೆ ಹಲವು ವರ್ಷಗಳಿಂದ ಮನವಿಪತ್ರ ಸಲ್ಲಿಸಿ ಆಗ್ರಹಿಸುತ್ತಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ಸಂಘದ ನಾಯಕರು ದೂರಿದರು. ಸಂಘದ ಅಧ್ಯಕ್ಷ ನಿತ್ಯಾನಂದಸ್ವಾಮಿ, ಉಪಾಧ್ಯಕ್ಷ ಜಿ.ಎನ್.ನಾಗರಾಜ್, ಜಿಲ್ಲಾ ಘಟಕದ ಅಧ್ಯಕ್ಷ ಭಿಮಶೆಟ್ಟಿ ಯಂಪಳ್ಳಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ತೊಗರಿ ಖರೀದಿಗೆ ಆದೇಶ : ಉಪವಾಸ ಸತ್ಯಾಗ್ರಹ ಅಂತ್ಯ

15 ನೆ ದಿನಕ್ಕೆ ಕಾಲಿಟ್ಟ ಅಮರಣಾಂತ ಉಪವಾಸ ಸತ್ಯಾಗ್ರಹಕ್ಕೆ ಮಣಿದು 1 ಲಕ್ಷ್ ಟನ್ನ್ ತೋಗರಿ ಖರೀದಿಗೆ ಆದೇಶವಾಗಿದೆ. ಜಗತ್ ಸರ್ಕಲ್ ನಲ್ಲಿ ಸಿಹಿ ಹಂಚಿ ಪಟಾಕಿ ಸಿಡಿಸಿ, ತೊಗರಿ ರೈತರು ವಿಜಯೋತ್ಸವ ಆಚರಿಸಿದರು. ಸಾರಂಗಧರ ದೇಶಿ ಕೇಂದ್ರ. ಸುಲಫಲ ಮಠ ಸ್ವಾಮಿ, ಆರ್.ಜಿ. ಶೆಟಗಾರ, ಎಸ್ ಕೆ ಕಾಂತಾ. ಅಲ್ಲಮ ಪ್ರಭು ಪಾಟೀಲ, ಮಾರುತಿ ಮಾನಪಡೆ, ಮೌಲಾ ಮೂಲ್ಲಾ, ಬಸವರಾಜ ಪವಾಡಶೆಟ್ಟಿ, ಮಂಜುನಾಥ ಗೌಡ, ಶರಣಬಸಪ್ಪಾ ಗಣಜಲಖೆಡ, ಶಾಂತಪ್ಪಾ ಪಾಟೀಲ, ಶರಣಬಸಪ್ಪಾ ಮಮಶೆಟ್ಟಿ ಮುಂತಾದ ಎಲ್ಲಾ ಸಾಮೂಹಿಕ ಸಂಘಟನೆಯ ಮುಖಂಡರು ತಾತ್ಕಾಲಿಕವಾಗಿ ಉಪವಾಸ ಸತ್ಯಾಗ್ರಹ ಹಿಂದಕ್ಕೆ ಪಡೆದರು. ಇನ್ನುಳಿದ ರೈತರ ತೊಗರಿ ಖರಿದೀಗಾಗಿ ಮುಂದಿನ ದಿನಗಳಲ್ಲಿ ಹೋರಾಟ ಕಟ್ಟಲು ಜಂಟಿಯಾಗಿ ಪ್ರಯತ್ನಿಸಲು ನಿರ್ಧರಿಸಿದರು.



“ಬನ್ನಿ ಪಲ್ಟಿ ಮಾಡೋಣ” ಎಂದಿದ್ದು ಮೂರ್ತಿಗಳ ಬಗ್ಗೆಯೇ?!

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಇಲ್ಲಿ ಗೊಂದಲವೇ ಬೇಡ. ಫ್ಯಾಸಿಜಮ್ ಪ್ರಜಾಪ್ರಭುತ್ವವನ್ನು ಬಳಸಿಕೊಂಡೇ ಅಧಿಕಾರಕ್ಕೆ ಬರುತ್ತದೆ. ಹೀಗಾಗಿ ಅದು ಪ್ರಜಾಪ್ರಭುತ್ವದ ಅಂಗವಾಗಿರುವ ಚುನಾವಣೆಗಳನ್ನು ಹೇಗೆ ದುರ್ಬಳಕೆಗೊಳಿಸುತ್ತದೆ ಎನ್ನುವುದರ ಬಗ್ಗೆ ಎಚ್ಚರವಾಗಿರಬೇಕು. ಅಂದರೆ ಜನರು ತಪ್ಪು ಆಯ್ಕೆಯನ್ನು ಮಾಡಿದಾಗ ನೀವು ತಪ್ಪು ಆಯ್ಕೆ ಮಾಡಿದ್ದೀರಿ ಎಂದು ನಿರ್ಭಿಢೆಯಾಗಿ ಹೇಳಿದರೆ ಮಾತ್ರ ಪ್ರಜಾಪ್ರಭುತ್ವವು ಉಳಿಯುತ್ತದೆ. ಇಂದಿನ ಸಂದರ್ಭದಲ್ಲಿ ಸಾಮೂಹಿಕ ಸನ್ನಿಗೆ ಒಳಪಟ್ಟವರಂತೆ ಸಾಮಾನ್ಯ ಮತದಾರರು ಫ್ಯಾಸಿಸ್ಟ್ ಶಕ್ತಿಗಳನ್ನು ಅಧಿಕಾರಕ್ಕೆ ತರುತ್ತಿದ್ದರೆ ಅದನ್ನು ಪವಿತ್ರ ಜನಾದೇಶವೆಂದು ಕರೆಯಲಾಗದು. ಅದು ತಪ್ಪು, ಅದನ್ನು ತಪ್ಪೆಂದು ಹೇಳಿ ನಮ್ಮ ಹೋರಾಟಗಳನ್ನು ಮುಂದುವರೆಸಬೇಕು.

ಭಾರತದಲ್ಲಿ ಮುಸ್ಲಿಮರ ವಿರುದ್ಧ ದ್ವೇಷವನ್ನು ಬೆಳೆಸಲು ಆರ್.ಎಸ್.ಎಸ್ ಹೇಳುತ್ತ ಬಂದಿರುವ ಇತಿಹಾಸದ ಕಥಾನಕವೆಂದರೆ ಹೊರಗಿನಿಂದ ಬಂದ ಈ ದಾಳಿಕೋರರು ಇಲ್ಲಿಯ ದೇವಾಲಯಗಳನ್ನು ಹಾಗೂ ಮೂರ್ತಿಗಳನ್ನು ಭಗ್ನಗೊಳಿಸಿದರು ಎಂದು. ಈ ಕಥಾನಕದ ಆಧಾರದ ಮೇಲೆ ಮುಸ್ಲಿಮರೆಂದರೆ ಮೂರ್ತಿ ಭಂಜಕರು ಎನ್ನುವ ದುಷ್ಟ ಪೂರ್ವಗ್ರಹವನ್ನು ಬಲಪಂಥೀಯರು ಹುಟ್ಟಿಸಿದ್ದಾರೆ. ಮೊನ್ನೆ ಈಶಾನ್ಯ ರಾಜ್ಯಗಳಲ್ಲಿ ಬಿ.ಜೆ.ಪಿ ಪಕ್ಷವು ಗೆದ್ದ ಕೂಡಲೇ ತ್ರಿಪುರಾದಲ್ಲಿ ಲೆನಿನ್‌ನ ಮೂರ್ತಿಗಳನ್ನು ಭಗ್ನ ಮಾಡಲಾಯಿತು. ಅಲ್ಲದೇ ಒಬ್ಬ ಬಿಜೆಪಿ ನಾಯಕರಾದ ರಾಜಾ ಹೀಗೆಯೇ ತಮಿಳುನಾಡಿನ ವಿಚಾರವಾದಿ ನಾಯಕ ಪೆರಿಯಾರ್ ಅವರ ಮೂರ್ತಿಯನ್ನು ನಾಶ ಮಾಡುತ್ತೇವೆ ಎಂದು ಸಾಮಾಜಿಕ ತಾಣದಲ್ಲಿ ಹೇಳಿಕೊಂಡರು. ಮೂರ್ತಿ ಭಂಜಕ ಕೆಲಸವು ಪೂರ್ವ ನಿಯೋಜಿತವಾಗಿತ್ತು. ಹಾಗೂ ಆರ್.ಎಸ್.ಎಸ್.ನ ಈ ಯೋಜನೆಗೆ ಬಿ.ಜೆ.ಪಿಯ ನಾಯಕತ್ವದ ಸಂಪೂರ್ಣ ಬೆಂಬಲವಿತ್ತು ಎನ್ನುವುದಕ್ಕೆ ಈ ಹೇಳಿಕೆಯೇ ಸಾಕ್ಷಿ. ಏಕೆಂದರೆ ಮರುದಿನವೇ ಪೆರಿಯಾರ್ ಮೂರ್ತಿಯನ್ನು ಹಾಳುಗೆಡುವ ಪ್ರಯತ್ನ ನಡೆಯಿತು. ಅದೇ ಹೊತ್ತಿಗೆ ಡಾ. ಬಿ.ಆರ್. ಅಂಬೇಡ್ಕರ್ ರ ಮೂರ್ತಿಯ ಮೇಲೆಯೂ ಹಲ್ಲೆ ನಡೆಯಿತು. ಪೂರ್ವ ಯೋಜನೆಯ ಪ್ರಕಾರ ಇದೆಲ್ಲವೂ ಕೆಲವು ಗುಂಪುಗಳು ಮಾಡಿದ ಕೆಲಸ, ತಾನು ಇದರ ವಿರೋಧಿಯೆಂದು ಬಿ.ಜೆ.ಪಿ ಹೇಳಿಕೊಂಡಿದೆ.

ನಾನು ಹಿಂದೆ ಈ ಅಂಕಣದಲ್ಲಿ ಬರೆದಿದ್ದೇನೆ. ಇಂಥ ಘಟನೆಗಳು ನಡೆದ ಕೂಡಲೇ, ಇದಕ್ಕೆ ಕಾರಣ “ಈಡಿಟಿರಜ ಜಟಜಟಜಟಿಣ” ಗಳು. ಇದು ತನ್ನ ಕಾರ್ಯಸೂಚಿಯಲ್ಲಿ ಇಲ್ಲ ಎಂದು ಆರ್.ಎಸ್.ಎಸ್ ಬಿಜೆಪಿ ಹೇಳಿಕೊಳ್ಳುತ್ತವೆ ಆದರೆ ಈ ಫ್ಯಾಸಿಸ್ಟ್ ಸಂಘಟನೆಗಳಲ್ಲಿ ಜಿಡಿಟಿರಜ ಜಟಜಟಜಟಿಣ ಗಳು ಇರುವುದಿಲ್ಲ. ಅಲ್ಲಿ ಒಂದು ಕಲ್ಲು ಎಸೆಯುವ ಸ್ವಾತಂತ್ರ್ಯವೂ ಯಾರಿಗೂ ಇರುವುದಿಲ್ಲ. ಗಲಭೆ ಮಾಡಲು, ದೊಂಬಿ ಮಾಡಲು ಹಿಂಸೆ ಹಾಗೂ ಕೊಲೆಗಳನ್ನು ಮಾಡಲು ನೇರವಾಗಿ ಮೇಲಿನ ನಾಯಕತ್ವದಿಂದಲೇ ಆದೇಶ ಬರಬೇಕಾಗುತ್ತದೆ. ಹೀಗಾಗಿ ಈಗ ಆರಂಭವಾಗಿರುವ ಮೂರ್ತಿಭಂಜಕ ಕೆಲಸವು ಸಂಪೂರ್ಣವಾಗಿ ಪೂರ್ವನಿಯೋಜಿತ ಮತ್ತು ಈ ಘಟನೆಗಳು ಸೈದ್ಧಾಂತಿಕ ಹಲ್ಲೆಗಳು. ಏಕೆಂದರೆ ಹಾಳುಗೆಡವುವ ಮೂರ್ತಿಗಳ ಪಟ್ಟಿಯನ್ನು ಈಗಾಗಲೇ ಸಿದ್ಧಪಡಿಸಲಾಗಿದೆ. ಅದರಲ್ಲಿ ಕಮ್ಯೂನಿಜಮ್‌ನ ಸಂಕೇತಗಳಾದ ಲೆನಿನ್, ಮಾರ್ಕ್ಸ್ ಇವರುಗಳು. ದಲಿತ ಚೈತನ್ಯದ ಮಹಾನ್ ಸಂಕೇತವಾದ ಬಾಬಾ ಸಾಹೇಬ ಅಂಬೇಡ್ಕರ್, ಬ್ರಾಹ್ಮಣ ವಿರೋಧಿ ಚಳುವಳಿ ಹಾಗೂ ವಿಚಾರವಾದದ ಅತ್ಯಂತ ಪ್ರಖರ ಪ್ರತಿನಿಧಿಯಾದ ಪೆರಿಯಾರ್ ಇದ್ದಾರೆ. ಅನುಮಾನವೇ ಬೇಡ.



ಕೃಪೆ: ಸತೀಶ್ ಆಚಾರ್ಯ

ಕರ್ನಾಟಕದಲ್ಲಿ ಬಲಪಂಥೀಯರು ಮುಂಬರುವ ಚುನಾವಣೆಯಲ್ಲಿ ಗೆದ್ದರೆ ಬಸವಣ್ಣನ ಮೂರ್ತಿಯೇ ಮುಂದಿನ ಟಾರ್ಗೆಟ್. ಏಕೆಂದರೆ ಭಾರತದಲ್ಲಿ ವೈದಿಕ–ಬ್ರಾಹ್ಮಣಶಾಹಿಗೆ ಬಸವಣ್ಣನ ನಾಯಕತ್ವದಲ್ಲಿ ವಚನಕಾರರು ಕೊಟ್ಟಂಥ ಪೆಟ್ಟನ್ನು ಇನ್ನಾವ ಧರ್ಮವೂ, ಚಿಂತನೆಯೂ ಕೊಡಲಿಲ್ಲ. ಅಲ್ಲದೇ ಪುರೋಹಿತಶಾಹಿಯನ್ನು ಅವರ ಹಾಗೆ ಇನ್ಯಾರೂ ತಿರಸ್ಕರಿಸಿ ನಗೆಪಾಟಲಾಗಿಸಿಲ್ಲ. ಇಲ್ಲಿಯವರೆಗೆ ಲಿಂಗಾಯತರು ಕರ್ನಾಟಕದಲ್ಲಿ ಬಿ.ಜೆ.ಪಿಯನ್ನು ಸಮರ್ಥಿಸಿದ್ದಾರೆ ಎನ್ನುವ ಜಾತಿ ಲೆಕ್ಕಾಚಾರದಿಂದಾಗಿ ಆರ್.ಎಸ್.ಎಸ್. ಬಸವಣ್ಣನ ತಂಟೆಗೆ ಹೋಗಿಲ್ಲ. ಬದಲಾಗಿ ಅದರ ಸಹೋದರ ಸಂಸ್ಥೆಗಳು ಆಧುನಿಕ ಕರ್ನಾಟಕದ ಇಬ್ಬರು ವಿಚಾರವಾದಿ ಲಿಂಗಾಯತರ ಕೊಲೆಗಳನ್ನು ಮಾಡಿಸಿವೆ. ಕಲಬುರ್ಗಿಯವರು, ಗೌರಿ ಲಂಕೇಶ್ ಅವರು ಹುಟ್ಟಿನಿಂದ ಲಿಂಗಾಯತರು ಎನ್ನುವುದು ಜಾತ್ಯಾತೀತ ಎಡಪಂಥೀಯರಾದ ನಮಗೆ ಮುಖ್ಯ ವಿಷಯವೇ ಅಲ್ಲ. ಆದರೆ ಬಲಪಂಥೀಯ ಲೆಕ್ಕಾಚಾರದಲ್ಲಿ ಇದು ಬಹಳ ಮುಖ್ಯ. ಬಲಪಂಥೀಯ ರಾಜಕೀಯವು ಲಿಂಗಾಯತ ಜಾತಿಯ ಬೆಂಬಲವನ್ನು ಬಯಸುತ್ತದೆ. ಆದರೆ ಬಸವಣ್ಣ ಹಾಗೂ ವಚನಕಾರರ ಜಾತ್ಯಾತೀತ ವಿಚಾರವಾದವನ್ನು ಬ್ರಾಹ್ಮಣಶಾಹಿ ವಿರೋಧವನ್ನು ಆಂತರ್ಯದಲ್ಲಿ ದ್ವೇಷಿಸುತ್ತದೆ. ಆದ್ದರಿಂದಲೇ ಕರ್ನಾಟಕದಲ್ಲಿ ಬಿ.ಜೆ.ಪಿ ಗೆದ್ದರೆ ಟಾರ್ಗೆಟ್ ಆಗುವುದು ಬಸವಣ್ಣನ ಮೂರ್ತಿಯೇ. ಏಕೆಂದರೆ ಮೂರ್ತಿಭಂಜಕ ಕೆಲಸವು ಜಿಡಿಟಿರಜ ಜಟಜಟಜಟಿಣ ಗಳ ಕೆಲಸವಲ್ಲ. ಬಹಳ ದೀರ್ಘವಾದ ಚಿಂತನೆಯ ನಂತರ ಆರ್.ಎಸ್.ಎಸ್. ನ ಬ್ರಾಹ್ಮಣಶಾಹಿ ನಾಯಕರು ತಮ್ಮ ಸಿದ್ಧಾಂತಗಳ ಮೂಲಕ ಈ ಮೂರ್ತಿಗಳ ಪಟ್ಟಿಯನ್ನು ಸಿದ್ಧಪಡಿಸಿದ್ದಾರೆ. ಈ ಸಿದ್ಧಾಂತಗಳ ಪ್ರಕಾರ ಬಲಪಂಥೀಯ ಚಿಂತನೆಯ ಕಡುವೈರಿಗಳೆಂದರೆ ಬ್ರಾಹ್ಮಣಶಾಹಿಯನ್ನು, ಜಾತಿ ವ್ಯವಸ್ಥೆಯನ್ನು ವಿರೋಧಿಸುವ ವಿಚಾರವಾದಿ ಚಿಂತಕರು; ಕ್ರೂರವಾದ ದ್ವೇಷದ ಟಾರ್ಗೆಟ್ ಗಳೆಂದರೆ ಮುಸ್ಲಿಮರು ಹಾಗೂ ದಲಿತರು. “ಬನ್ನಿ ಪಲ್ಟಿ ಮಾಡೋಣ” ಎನ್ನುವ ಘೋಷಣೆಗೆ ಬಲಿಬಿದ್ದು ಬಿ.ಜೆ.ಪಿ ಯನ್ನು ಅಧಿಕಾರಕ್ಕೆ ತಂದಿರುವ ಜನರಿಗೆ ಸಿಕ್ಕಿರುವ ಮಹಾನ್ ಅಭಿವೃದ್ಧಿಯ ಕಾಣಿಕೆ ಎಂದರೆ ಭಗ್ನಗೊಂಡ ಲೆನಿನ್ ಮೂರ್ತಿಗಳು. ಪೆರಿಯಾರ್, ಅಂಬೇಡ್ಕರ್ ಮೂರ್ತಿಗಳು. ‘ಬನ್ನಿ ಪಲ್ಟಿ ಹೊಡೆಯೋಣ’ ಎನ್ನುವ ಸಾಮೂಹಿಕ ಆತ್ಮಹತ್ಯೆಗೆ ಬಲಿಯಾದ ಜನರು ಈ ಬಗ್ಗೆ ಯೋಚಿಸಲಿ.

ಈಶಾನ್ಯ ರಾಜ್ಯಗಳ ಚುನಾವಣ ಫಲಿತಾಂಶಗಳ ವಿಶ್ಲೇಷಣೆಗಳು ನಿರೀಕ್ಷಿತವಾದ ರೀತಿಯಲ್ಲಿ ಮುಂದುವರೆದಿವೆ. ಇದರಲ್ಲಿ ಮುಖ್ಯವಾದುದೆಂದರೆ ‘ನಾವು ಜನಾದೇಶವನ್ನು ಪವಿತ್ರವೆಂದು ಒಪ್ಪಿಕೊಳ್ಳಬೇಕು” ಎನ್ನುವುದು. ಹೀಗೆ ಹೇಳುವವರಿಗೆ ಆಧುನಿಕ ಜಗತ್ತಿನ ಇತಿಹಾಸದಲ್ಲಿ ಫ್ಯಾಸಿಜಮ್ ಹೇಗೆ ಅಧಿಕಾರಕ್ಕೆ ಬಂದಿತು ಹಾಗೂ ಬಂದ ಮೇಲೆ ಏನು ಮಾಡಿತು ಎನ್ನುವುದರ ಪರಿಚಯವೇ ಇಲ್ಲ. ಜರ್ಮನಿಯಲ್ಲಿ ಹಿಟ್ಲರ್ ಕೂಡ ಒಂದು ರಾಜಕೀಯ ಪಕ್ಷವನ್ನೇ ಕಟ್ಟಿದ್ದ. ಅದು ನಾಜಿ ಪಕ್ಷ–ರಾಷ್ಟ್ರೀಯ ಸಮಾಜವಾದಿ ಪಕ್ಷ ! ಅವನ ಪಕ್ಷ ಚುನಾವಣೆಗಳಲ್ಲಿ ಭಾಗವಹಿಸಿತು. ಬಹುಮತವನ್ನು ಪಡೆಯದಿದ್ದರೂ ಪ್ರಜಾಪ್ರಭುತ್ವದ ಸಂಕೇತವಾದ ಚುನಾವಣಾ ರಾಜಕೀಯದ ಹಂದರವನ್ನು ಬಳಸಿಕೊಂಡೇ ಅಧಿಕಾರಕ್ಕೆ ಬಂದಿತು. ಆ ಜರ್ಮನಿಯ ಸಾಮಾನ್ಯ ಮತದಾರರೂ ಕೂಡ “ಬನ್ನಿ ಪಲ್ಟಿ ಮಾಡೋಣ” ವೆಂದು ಕೊಂಡೇ ಅವನನ್ನು ಅಧಿಕಾರಕ್ಕೆ ತಂದರು. ಮುಂದೆ ನಡೆದದ್ದು ಗೊತ್ತೇ ಇದೆಯಲ್ಲವೆ? ಪ್ರಜಾಪ್ರಭುತ್ವದ ದುರ್ಬಳಕೆಯ ಮೂಲಕ ಅಧಿಕಾರಕ್ಕೆ ಬಂದ ನಾಜಿ ಪಕ್ಷವು ಯಹೂದಿಗಳ ಮಾರಣಹೋಮವನ್ನು ಮಾಡಿತು. ಎರಡನೇ ಮಹಾಯುದ್ಧವನ್ನು ಆರಂಭಿಸಿ ಮಿಲಿಯನ್ ಗಟ್ಟಲೇ ಜನರನ್ನು ಕೊಂದಿತು. ಅದು ಅಧಿಕಾರಕ್ಕೆ ಬಂದಿದ್ದು “ಪವಿತ್ರವಾದ ಜನಾದೇಶ”ದಿಂದಲೇ.

ಇಲ್ಲಿ ಗೊಂದಲವೇ ಬೇಡ. ಫ್ಯಾಸಿಜಮ್ ಪ್ರಜಾಪ್ರಭುತ್ವವನ್ನು ಬಳಸಿಕೊಂಡೇ ಅಧಿಕಾರಕ್ಕೆ ಬರುತ್ತದೆ. ಹೀಗಾಗಿ ಅದು ಪ್ರಜಾಪ್ರಭುತ್ವದ ಅಂಗವಾಗಿರುವ ಚುನಾವಣೆಗಳನ್ನು ಹೇಗೆ ದುರ್ಬಳಕೆಗೊಳಿಸುತ್ತದೆ ಎನ್ನುವುದರ ಬಗ್ಗೆ ಎಚ್ಚರವಾಗಿರಬೇಕು. ಅಂದರೆ ಜನರು ತಪ್ಪು ಆಯ್ಕೆಯನ್ನು ಮಾಡಿದಾಗ ನೀವು ತಪ್ಪು ಆಯ್ಕೆ ಮಾಡಿದ್ದೀರಿ ಎಂದು ನಿರ್ಭಿಢೆಯಾಗಿ ಹೇಳಿದರೆ ಮಾತ್ರ ಪ್ರಜಾಪ್ರಭುತ್ವವು ಉಳಿಯುತ್ತದೆ. ಇಂದಿನ ಸಂದರ್ಭದಲ್ಲಿ ಸಾಮೂಹಿಕ ಸನ್ನಿಗೆ ಒಳಪಟ್ಟವರಂತೆ ಸಾಮಾನ್ಯ ಮತದಾರರು ಫ್ಯಾಸಿಸ್ಟ್ ಶಕ್ತಿಗಳನ್ನು ಅಧಿಕಾರಕ್ಕೆ ತರುತ್ತಿದ್ದರೆ ಅದನ್ನು ಪವಿತ್ರ ಜನಾದೇಶವೆಂದು ಕರೆಯಲಾಗದು, ಅದು ತಪ್ಪು ಅದನ್ನು ತಪ್ಪೆಂದು ಹೇಳಿ ನಮ್ಮ ಹೋರಾಟಗಳನ್ನು ಮುಂದುವರೆಸಬೇಕು. ಪ್ರಜಾಪ್ರಭುತ್ವವನ್ನು ಬಿಟ್ಟರೆ ಬೇರೆ ದಾರಿಯೆ ಇಲ್ಲ. ನಮ್ಮ ಸಂವಿಧಾನ, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗಳು ನಮಗೆ ಮುಖ್ಯ. ಆದರೆ ಫ್ಯಾಸಿಜಮ್ ನಿಂದಾಗಿ ಪ್ರಜಾಪ್ರಭುತ್ವದಲ್ಲಿನ ಚುನಾವಣೆಗಳು ಆ ಪ್ರಜಾಪ್ರಭುತ್ವದ ಕಡುವೈರಿಗಳನ್ನೇ ಆಯ್ಕೆ ಮಾಡಲು ಬಳಕೆಯಾದಾಗ ಜನರು ಮಾಡುವ ತಪ್ಪುಗಳನ್ನು ತಪ್ಪು ಎಂದು ಹೇಳುವುದು ನಮ್ಮ ನೈತಿಕ ಜವಾಬ್ದಾರಿಯಾಗಿದೆ. ■

ಸಂಘಪರಿವಾರದ ವಿತಂಡವಾದಗಳನ್ನು ತಿರಸ್ಕರಿಸಿದ........ ಪುಟ 3 ರಿಂದ

ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿಯನ್ನು ನೀಡಿತ್ತು. ಈ ವರದಿಯನ್ನು ಇಡಿಯಾಗಿ ಸರ್ಕಾರದ ಸಚಿವ ಸಂಪುಟವನ್ನು ಒಪ್ಪಿದೆ ಮತ್ತು ಅದನ್ನು ತನ್ನ ಅಭಿಪ್ರಾಯದ ಜೊತೆ ಸುಪ್ರಿಂ ಕೋರ್ಟ್‌ಗೆ ಸಲ್ಲಿಸಲಿದೆ.

ಸಂಘಪರಿವಾರವು, ಗಿರಿಯಲ್ಲಿರುವ ‘ದರ್ಗಾ–ಪೀಠ’ವು ಹೈದರಾಲಿಯ ಕಾಲಕ್ಕೆ ದೇವಾಲಯವಾಗಿತ್ತೆಂದೂ ಸೂಫಿಸಂತ ದಾದಾಹಯಾತ್ ಮೀರ್ ಖಲಂದರ್‌ರವರ ದರ್ಗಾ ನಾಗೇನಹಳ್ಳಿಯಲ್ಲಿ ಇದೆಯೆಂದೂ ವಾದಿಸುತ್ತಿದೆ. ಇದನ್ನು ಪರಿಣತರ ಸಮಿತಿಯು ದಾಖಲೆಗಳ ಸಮೇತ ಪರಿಶೀಲಿಸಿದ್ದು ಅವನ್ನು ಸಮರ್ಥಿಸುವ ಯಾವ ಗಟ್ಟಿ ದಾಖಲೆಗಳೂ ಇಲ್ಲವೆಂದು ತಿಳಿಸಿದೆ. ಗುಹೆಯ ದರ್ಗಾಪೀಠ ಅತ್ಯಂತ ಪುರಾತನ ಕಾಲದ್ದೆಂದು ಅಭಿಪ್ರಾಯ ಪಟ್ಟಿದೆ. ಅಲ್ಲಿಯ ಪ್ರಾರ್ಥನೆಯ ಸ್ವರೂಪ ಸೂಫಿ ಪರಂಪರೆಯಂತೆಯೇ ನಡೆದು ಬಂದಿದ್ದು ಆ ಧಾರ್ಮಿಕ ಸ್ವರೂಪವನ್ನು ಪ್ರತಿಪಾದಿಸಿದೆ. ದರ್ಗಾದಲ್ಲಿ ವೈದಿಕ ಪುರೋಹಿತರ ನೇಮಕ, ಆಗಮ ಪದ್ಧತಿಯಲ್ಲಿ ಪೂಜೆ ಸಲ್ಲಿಸುವುದು ಹಿಂದೆ ಇಲ್ಲ ಎಂದೂ, ಸೂಫಿ ಪರಂಪರೆಯಂತೆ ನಡೆದು ಬಂದ ಕ್ರಮದಂತೆ ಮುಝಾವರ್ ನಡೆಸುವವರು ಎಂಬುದನ್ನು ಸಮರ್ಥಿಸಿದೆ. ಈ ದರ್ಗಾದ ಧರ್ಮಾಧಿಕಾರಿ ಶೇಖಾದ್ರಿಯವರೇ ಆಗಿದ್ದಾರೆ. ಕೇಂದ್ರ ಸರ್ಕಾರದ ಕಾಯ್ದೆಯಂತೆ 1947ರ ಹಿಂದಿನ ಎಲ್ಲಾ ಪುರಾತನ ಸ್ಮಾರಕಗಳನ್ನು ಅವುಗಳ ಸ್ವರೂಪದಲ್ಲಿಯೇ ಕಾಯ್ದುಕೊಳ್ಳುವಂತೆ ತಿಳಿಸಿದೆ. ಅಲ್ಲದೇ ಕರ್ನಾಟಕ ಹೈಕೋರ್ಟ್, ನಂತರ ಸುಪ್ರೀಂಕೋರ್ಟ್‌ಗಳು, 1975ರ ಹಿಂದಿದ್ದ ಆಚರಣೆಗಳನ್ನು ಮಾತ್ರ ಪಾಲಿಸಬೇಕೆಂದು ಸ್ಪಷ್ಟವಾಗಿ ನಿರ್ದೇಶಿಸಿ ಗುಹೆಯ ಆವರಣದಲ್ಲಿ ಯಜ್ಞಯಾಗ, ದತ್ತಪೂಜೆ, ದತ್ತ ಮಾಲೆ, ದತ್ತ ಜಯಂತಿ, ಶೋಭಾಯಾತ್ರೆ ಯಂತಹ ಹೊಸ ಆಚರಣೆಗಳನ್ನು ತಂದ ಸಂಘ ಪರಿವಾರಕ್ಕೆ ಕಪಾಳ ಮೋಕ್ಷ ಮಾಡಿತ್ತು. ಆದರೂ ಈ ಶಕ್ತಿಗಳು ಕಾನೂನಿಗೆ ಗೌರವ ನೀಡುತ್ತಿಲ್ಲ. ವಿವಾದ ಹೊಸ ಸ್ವರೂಪದಲ್ಲಿ ಮುಂದುವರೆಸುತ್ತಾ ಬಂದಿವೆ. ಬಾಬಾಬುಡನ್‌ಗಿರಿಯನ್ನು ಮತ್ತೊಂದು ಅಯೋಧ್ಯೆಯನ್ನಾಗಿಸುವ ಬೆದರಿಕೆ ಒಡುತ್ತಾ ಅದನ್ನು ಕೋಮುವಾದಿ ರಾಜಕೀಯಕ್ಕೆ ಬಳಸುತ್ತಿವೆ.

ಇಂತಹ ಹುನ್ನಾರಗಳನ್ನು ಎದುರಿಸುವ ರಾಜಕೀಯ ಇಚ್ಛಾ ಶಕ್ತಿಯನ್ನು ಹಿಂದಿನ ಸರ್ಕಾರಗಳು ವಹಿಸದೆ ಇರುವುದು ಈ ಪರಂಪರೆಯ ವಿರೋಧಿ ಶಕ್ತಿಗಳಿಗೆ ಕುಮ್ಮಕ್ಕು ನೀಡಿದೆ ಎಂಬುದರಲ್ಲಿ ಅನುಮಾನವಿಲ್ಲ. ಹೀಗಾಗಿಯೇ 1992 ರಿಂದ, ವಿಶೇಷ ವಾಗಿ 1997 ರಿಂದ ಬಜರಂಗದಳ, ವಿಶ್ವಹಿಂದೂ ಪರಿಷತ್‌ಗಳು ಪ್ರತಿ ವರ್ಷವೂ ದತ್ತ ಜಯಂತಿ, ದತ್ತ ಮಾಲೆ, ದತ್ತ ಯಜ್ಞ ಇತ್ಯಾದಿಗಳ ಮೂಲಕ ಪರಿಸ್ಥಿತಿಯನ್ನೂ ಕ್ಷುಬ್ಧಗೊಳಿಸುತ್ತ ಬಂದಿವೆ. 2017 ರ ಡಿಸೆಂಬರ್ ನಲ್ಲಿ ‘ದತ್ತ ಮಾಲಾಧಾರಿ’ಗಳು ಗುಹೆಯ ಆವರಣದಲ್ಲಿ ಕೇಸರಿ ಧ್ವಜ ಹಾರಿಸಿದಲ್ಲದೇ, ಅಲ್ಲಿದ್ದ ಸಂತರ ಸಮಾಧಿಗಳನ್ನೂ ಧ್ವಂಸಗೊಳಿಸಲು ಯತ್ನಿಸಿದ್ದರು. ಇಂತಹ ಪುಂಡಾಟಿಕೆ ಇತ್ತೀಚಿನ ವರುಷಗಳಲ್ಲಿ ನಿರಂತರ ನಡೆಸಿಕೊಂಡು ಬರಲಾಗಿದೆ. ಈಗಲೂ ಅಲ್ಲಿನ ಬಿಜೆಪಿ ಶಾಸಕ ಸಿ.ಟಿ.ರವಿ ತಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಪರಿಣತರ ಸಮಿತಿಯ ವರದಿ ಒಪ್ಪಿರುವುದನ್ನು ರದ್ದು ಪಡಿಸುವುದಾಗಿ ಹೇಳಿದೆ. ಈ ಬಹಿರಂಗ ಬೆದರಿಕೆಯು ಶಾಂತಿ, ಸೌಹಾರ್ದತೆ, ಸಂವಿಧಾನ ಬದ್ಧತೆ ಬಯಸುವ ಶಕ್ತಿಗಳಿಗೆ ಒಂದು ಮುಖ್ಯ ಸವಾಲು. ■

ತ್ರಿಪುರಾದಲ್ಲಿನ ತೀರ್ಪು: ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ದೊಡ್ಡ ಹಿನ್ನಡೆ



ತ್ರಿಪುರಾದ ಚುನಾವಣೆ ಸೋಲು ಸಿಪಿಐ (ಎಂ) ಮತ್ತು ದೇಶದ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ದೊಡ್ಡ ಹಿನ್ನಡೆಯಾಗಿದೆ. ಜನತೆಯ ಕಲ್ಯಾಣಕ್ಕಾಗಿ ಹೋರಾಟ ನಡೆಸಿದ ಹಾಗೂ ಸಂಕಷ್ಟ ಕಾಲದಲ್ಲೂ ಜನರೊಂದಿಗಿದ್ದ ಹೆಮ್ಮೆಯ ದಾಖಲೆ ಇರುವ ಸಿಪಿಐ(ಎಂ) ತ್ರಿಪುರಾ ರಾಜ್ಯ ಘಟಕ ಈ ಗಂಭೀರ ಹಿನ್ನಡೆಯನ್ನು ವಿಮರ್ಶಿಸುತ್ತದೆ. ಚುನಾವಣೆ ಸೋಲು ಬಿಜೆಪಿ-ಆರ್‌ಎಸ್‌ಎಸ್ ಕೂಟದ ದಾಳಿಯನ್ನು ಎದುರಿಸಲು ನಮ್ಮ ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಕೆಲಸಗಳ ವಿಮರ್ಶಾಪೂರ್ಣ ಮೌಲ್ಯಮಾಪನಕ್ಕೆ ಹಾದಿ ಮಾಡಿಕೊಡಬೇಕು. ಪಕ್ಷದ ಮುಂಬರುವ ಮಹಾಧಿವೇಶನ ಮುಂದಿನ ಕಾಳಗಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಪಕ್ಷವನ್ನು ಸನ್ನದ್ಧಗೊಳಿಸಲು ನೆರವಾಗಬೇಕು.



ಪ್ರಕಾಶ ಕಾರಟ್

ತ್ರಿಪುರಾ ವಿಧಾನಸಭೆ ಚುನಾವಣೆ ಒಂದು ಅನಿರೀಕ್ಷಿತ ಫಲಿತಾಂಶವನ್ನು ನೀಡಿದೆ. ಬಿಜೆಪಿ-ಐಪಿಎಫ್‌ಟಿ ಕೂಟ 50.5 ಶೇಕಡಾ ಮತದೊಂದಿಗೆ (ಬಿಜೆಪಿ 43% ಹಾಗೂ ಐಪಿಎಫ್‌ಟಿ 7.5%) ಮೂರನೇ ಎರಡು ಬಹುಮತವನ್ನು ಗಳಿಸಿದೆ.

ಕಳೆದ 25 ವರ್ಷಗಳಿಂದ ಅಧಿಕಾರದಲ್ಲಿದ್ದ ಹಾಗೂ 1993ರಿಂದ ಸತತವಾಗಿ ಐದು ಚುನಾವಣೆಗಳನ್ನು ಗೆದ್ದಿದ್ದ ಎಡರಂಗ ಶೇಕಡಾ 45ರಷ್ಟು ಮತಗಳನ್ನು ಗಳಿಸಿದರೂ ಕೇವಲ 16 ಸ್ಥಾನಗಳನ್ನು ಗೆದ್ದಿದೆ.

ಈ ನಾಟಕೀಯ ವಿದ್ಯಮಾನ ಹೇಗೆ ಸಾಧ್ಯವಾಯಿತು?. ರಾಜ್ಯದಲ್ಲಿ ಮೈತ್ರಿಕೂಟದಲ್ಲಿ ಪಲ್ಲಟಗಳು ಆಗಿದ್ದು ಪ್ರಮುಖ ರಾಜಕೀಯ ಬೆಳವಣಿಗೆ. ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಪಾರಂಪರಿಕವಾಗಿ ಎರಡನೇ ದೊಡ್ಡ ರಾಜಕೀಯ ಪಕ್ಷ ಹಾಗೂ ಸಿಪಿಐ (ಎಂ) ಗೆ ಪ್ರಮುಖ ವಿರೋಧ ಪಕ್ಷ ಆಗಿತ್ತು. ಅದು ಕಮ್ಯೂನಿಸ್ಟ್-ವಿರೋಧಿ ಪ್ರಚಾರವನ್ನು ನಡೆಸಿತ್ತು ಹಾಗೂ 1988ರಲ್ಲಿ ನೃಪೇನ್ ಚಕ್ರವರ್ತಿ ನೇತೃತ್ವದ ಎಡರಂಗ ಸರಕಾರವನ್ನು ಪದಚ್ಯುತಗೊಳಿಸಲು ಹಿಂಸಾಚಾರ ಹರಿಯಬಿಟ್ಟಿತ್ತು ಹಾಗೂ ಚುನಾವಣೆ ಅಕ್ರಮಗಳನ್ನು ನಡೆಸಿತ್ತು. ಆಗ ಅಧಿಕಾರಕ್ಕೆ ಬಂದ ಕಾಂಗ್ರೆಸ್-ಟಿಯುಜೆಎಸ್ ಮೈತ್ರಿಕೂಟ ಸರಕಾರ ಅರೆ-ಫ್ಯಾಸಿಸ್ಟ್ ದಬ್ಬಾಳಿಕೆಗೆ ಕುಖ್ಯಾತವಾಯಿತು. ಅದು ನಡೆಸಿದ ಹಿಂಸಾಚಾರಗಳಲ್ಲಿ ಸಿಪಿಐ (ಎಂ)ನ 350 ಸದಸ್ಯರು ಮತ್ತು ಬೆಂಬಲಿಗರು ಹತರಾಗಿದ್ದರು.

ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್‌ನಿಂದ ಬಿಜೆಪಿಗೆ ಸಾರಾಸಗಟು ಪಕ್ಷಾಂತರ ಆಗಿದೆ. ಕಳೆದ ಎರಡು ವರ್ಷಗಳಲ್ಲಿ, ಮೇಲ್ಮಟ್ಟದಿಂದ ತಳಮಟ್ಟದವರೆಗೆ ಕಾಂಗ್ರೆಸ್ ನಾಯಕರನ್ನು ಮತ್ತು ಕಾರ್ಯಕರ್ತರನ್ನು ಬಿಜೆಪಿ ಸ್ವಾಹಾ ಮಾಡಿತು. ಕಾಂಗ್ರೆಸ್‌ನ 10 ಶಾಸಕರ ಪೈಕಿ ಏಳು ಮಂದಿ ಮೊದಲು ತೃಣಮೂಲ ಕಾಂಗ್ರೆಸ್‌ಗೆ ಸೇರಿದರು, ನಂತರ ಅಲ್ಲಿಂದ ಬಿಜೆಪಿಗೆ ಹಾರಿದರು.

ಇದರ ಪರಿಣಾಮವಾಗಿ, 2013ರ ಚುನಾವಣೆಯಲ್ಲಿ ಕಾಂಗ್ರೆಸ್ ಹೊಂದಿದ್ದ 36.54% ಮತ ಪಾಲು ಈ ಬಾರಿ 1.8%ಕ್ಕೆ ಕುಸಿಯಿತು. ಕಳೆದ ಚುನಾವಣೆಗಳಲ್ಲಿ ಕಾಂಗ್ರೆಸ್‌ನೊಂದಿಗೆ ಮೈತ್ರಿ ಹೊಂದಿದ್ದ ಐಎನ್‌ಪಿಟಿಯ ಮತಪಾಲು 8.1%ದಿಂದ 0.7%ಕ್ಕೆ ಇಳಿಯಿತು.

ಬಿಜೆಪಿ ಕಣಕ್ಕಿಳಿಸಿದ್ದ ಅನೇಕ ಅಭ್ಯರ್ಥಿಗಳು ಈ ಮಾಜಿ ಕಾಂಗ್ರೆಸ್ ನಾಯಕರೇ ಆಗಿದ್ದರು. ಅವರು ಕಟ್ಟಾ ಕಮ್ಯೂನಿಸ್ಟ್-ವಿರೋಧಿ ಧೋರಣೆ ಹೊಂದಿದವರಾಗಿದ್ದರು. ಅದರ ಪರಿಣಾಮವಾಗಿ, ಬಿಜೆಪಿಗೆ ಎಡ-ವಿರೋಧಿ ಮತಗಳನ್ನೆಲ್ಲ ಕ್ರೋಡೀಕರಿಸಲು ಸಾಧ್ಯವಾಯಿತು. ಅದೇ ರೀತಿ, ಅದರ ಮಿತ್ರ ಪಕ್ಷವಾದ ಇಂಡಿಜೀನಸ್ ಪೀಪಲ್ ಫ್ರಂಟ್ ಆಫ್ ತ್ರಿಪುರಾ (ಐಪಿಎಫ್‌ಟಿ)ಗೆ ಹಿಂದೆ ಕಾಂಗ್ರೆಸ್ ಮಿತ್ರಪಕ್ಷವಾಗಿದ್ದ ಇನ್ನೊಂದು ಬುಡಕಟ್ಟು ಪಕ್ಷವಾದ ಐಎನ್‌ಪಿಟಿಯನ್ನು ತಟಸ್ಥಗೊಳಿಸಲು ಹಾಗೂ ಅದರ ಸ್ಥಾನವನ್ನು ಪಡೆಯಲು ಸಾಧ್ಯವಾಯಿತು. ಆದರೆ ಬಿಜೆಪಿ ಕೂಟಕ್ಕೆ ಶೇಕಡಾ 50ರಷ್ಟು ಮತ ಪಡೆಯಲು ಈ ಅಂಶವೊಂದೇ ಕಾರಣವಲ್ಲ. ಬೇರೆ ಕಾರಣಗಳೂ ಇವೆ.

ಚುನಾವಣೆಗೆ ಮುನ್ನ ರಾಜ್ಯಕ್ಕೆ ಅಭೂತಪೂರ್ವ ಪ್ರವಾಹದಲ್ಲಿ ಹಣವನ್ನು ಹರಿಸಲಾಯಿತು. ಚುನಾವಣೆಗಳಿಗೂ ಎಷ್ಟೋ ಮುನ್ನ, ಇತರ ಬಂಡವಾಳಶಾಹಿ ಪಕ್ಷಗಳಿಂದ ಅಭ್ಯರ್ಥಿಗಳನ್ನು ತನ್ನತ್ತ ಸೆಳೆಯಲು ಭಾರೀ ಪ್ರಮಾಣದಲ್ಲಿ ಹಣವನ್ನು ಸುರಿಯಲಾಯಿತು. ಕೆಲವು ನಿರ್ದಿಷ್ಟ ಆಯ್ದ ಸ್ಥಳಗಳಲ್ಲಿ ಜನರಿಗೆ ಮೊಬೈಲ್ ಫೋನ್‌ಗಳು, ಮೋಟರ್ ಸೈಕಲ್‌ಗಳನ್ನು ವಿತರಿಸಲಾಯಿತು ಹಾಗೂ ಇತರ ಆಮಿಷಗಳನ್ನೂ ಒಡ್ಡಲಾಯಿತು. ರಾಜ್ಯದ ಇಡೀ ಬಂಡವಾಳಶಾಹಿ ಮಾಧ್ಯಮವನ್ನು ಬಿಜೆಪಿಯನ್ನು ಬಿಂಬಿಸುವಂತೆ ಎತ್ತಿಕಟ್ಟಲಾಯಿತು ಹಾಗೂ ಅದು ಎಡರಂಗ ಸರಕಾರದ ವಿರುದ್ಧ ನಕಾರಾತ್ಮಕ ಪ್ರಚಾರವನ್ನು ನಡೆಸಿತು.

ಬಿಜೆಪಿ ಪ್ರಚಾರವನ್ನು 'ಪರಿವರ್ತನೆ'ಯ ಹೆಸರಲ್ಲಿ ನಡೆಸಿತು. ಇದು ಯುವ ಮತದಾರರಲ್ಲಿ ಅದರಲ್ಲೂ ವಿಶೇಷವಾಗಿ ನಗರ ಹಾಗೂ ಬುಡಕಟ್ಟು ಯುವಜನರಲ್ಲಿ ಆಕರ್ಷಣೆ ಹುಟ್ಟಿಸಿದಂತೆ ಕಾಣುತ್ತದೆ. ಎಡರಂಗ ಸರಕಾರ ಸರ್ವಾಂಗೀಣವಾಗಿ ಸಕಾರಾತ್ಮಕವಾಗಿ ಕೆಲಸ ಮಾಡಿದ್ದರೂ ಶಿಕ್ಷಿತ ಯುವಜನತೆಗೆ ಉದ್ಯೋಗ ಸೃಷ್ಟಿಸುವಲ್ಲಿನ ಒಂದು ಸವಾಲು ಅಗಿದೆ ಎಂಬುದಂತೂ ನಿಜಸಂಗತಿ. ಎಡರಂಗ ಸರಕಾರಗಳು ಶಿಕ್ಷಣ ಸೌಲಭ್ಯಗಳನ್ನು ವಿಸ್ತರಿಸಿದ ಫಲವಾಗಿ ಶಿಕ್ಷಿತ ಯುವಜನರ ಸಂಖ್ಯೆ, ಅದರಲ್ಲೂ ಮುಖ್ಯವಾಗಿ ಬುಡಕಟ್ಟು ಶಿಕ್ಷಿತ ಯುವಜನರ ಸಂಖ್ಯೆ ಏರುತ್ತಲೇ ಬಂದಿದೆ. ಮೂರು ಕಡೆ ಬಾಂಗ್ಲಾ ದೇಶದಿಂದ ಸುತ್ತುವರಿದ ರಾಜ್ಯವಾಗಿದೆ ತ್ರಿಪುರಾ. ತೀರಾ ದೂರದ ಭೌಗೋಳಿಕ ಪರಿಸ್ಥಿತಿ ಮತ್ತು ಸಂಪರ್ಕ ಸಾಧನಗಳ ಕೊರತೆಯಿಂದಾಗಿ, ರಾಜ್ಯದಲ್ಲಿ ಹೂಡಿಕೆ ಮತ್ತು ಕೈಗಾರಿಕೆಗಳನ್ನು ಸೆಳೆಯಲು ಕಷ್ಟವಾಗಿದೆ. ಸರಕಾರಿ ನೌಕರಿಗಳೇ ಉದ್ಯೋಗದ ಮುಖ್ಯ ಮೂಲವಾಗಿವೆ. ಇದು ನಿಶ್ಚಯವಾಗಿಯೂ ಸಾಕಷ್ಟು ಮಿತಿಗಳಿಗೆ ಕಾರಣವಾಗಿದೆ.

ಎಡರಂಗ ಸರಕಾರ ಬಂಡುಕೋರತನವನ್ನು ಅಂತ್ಯಗೊಳಿಸಿದ ನಂತರ ರಾಜ್ಯದಲ್ಲಿ ದಶಕದ ಕಾಲ ಶಾಂತಿ ಮತ್ತು ಸ್ಥಿರತೆಯನ್ನು ಖಾತರಿಗೊಳಿಸಿತ್ತು. ಸಾಕ್ಷರತೆ ಮತ್ತು ಇತರ ಸಾಮಾಜಿಕ ಮಾನದಂಡಗಳಲ್ಲಿ ಅಗಾಧ ಪ್ರಗತಿ ಸಾಧಿಸಲಾಗಿತ್ತು.ಆದರೆ ಕಳೆದ ಮೂರು ವರ್ಷಗಳಿಂದ ಕೇಂದ್ರದ ನರೇಂದ್ರ ಮೋದಿ ಸರಕಾರ ರಾಜ್ಯ ಸರಕಾರದ ಜನಕಲ್ಯಾಣ ಕೇಂದ್ರಿತ ಕಾರ್ಯಗಳಿಗೆ ಉದ್ದೇಶಪೂರ್ವಕವಾಗಿ ತಡೆಯೊಡ್ಡಿತ್ತು. ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ನೀಡುವ ಅನುದಾನದಲ್ಲಿ ಭಾರೀ ಕಡಿತ ಮಾಡಿತ್ತು. ಇದರಿಂದಾಗಿ ದೇಶದಲ್ಲೇ ಉತ್ತಮವಾಗಿ ಅನುಷ್ಠಾನಗೊಳಿಸಲಾಗುತ್ತಿದ್ದ ಯೋಜನೆಗೆ ಪೆಟ್ಟು ಬಿದ್ದಿತು. ಅದೇ ರೀತಿ, ಪಡಿತರ ವ್ಯವಸ್ಥೆಯಲ್ಲಿ ನೀಡಲಾಗುತ್ತಿದ್ದ ಆಹಾರ ಸಾಮಗ್ರಿಗಳಲ್ಲಿ ಈ ವರ್ಷಗಳಲ್ಲಿ ಗಣನೀಯ ಕಡಿತವಾಯಿತು.

ಕಳೆದ ನಾಲ್ಕು ದಶಕಗಳಲ್ಲಿ ವಿಚ್ಛಿದ್ರಕಾರಿ ಹಾಗೂ ಪ್ರತ್ಯೇಕತಾವಾದಿ ದಾಳಿಗಳನ್ನು ಎದುರಿಸಿ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಒಗ್ಗಟ್ಟನ್ನು ಕಾಪಾಡುವಲ್ಲಿ ಸಿಪಿಐ (ಎಂ) ಮತ್ತು ಎಡ ರಂಗ ಸರಕಾರ ಐತಿಹಾಸಿಕ ಕೊಡುಗೆಯನ್ನು ನೀಡಿದೆ. ತ್ರಿಪುರಾ ರಾಜ್ಯ ಉತ್ತಮ ಆಡಳಿತ ಮತ್ತು ಬುಡಕಟ್ಟು ಏಕತೆ ಹಾಗೂ ಸೌಹಾರ್ದತೆಗೆ ಈಶಾನ್ಯ ಭಾರತದಲ್ಲಿ ಉತ್ತಮ ಮಾದರಿಯಾಗಿ ಹೊರಹೊಮ್ಮಿತ್ತು. ಇಷ್ಟೆಲ್ಲಾ ಇದ್ದರೂ ಬಿಜೆಪಿ-ಐಪಿಎಫ್‌ಟಿ ಬುಡಕಟ್ಟು ಜನರ ನಡುವೆ ಗಣನೀಯ ಬೆಂಬಲ ಪಡೆಯುವಲ್ಲಿ ಸಫಲವಾಗಿದೆ.

ಬುಡಕಟ್ಟು ಜನರ ವಿಭಾಗಗಳು ನಮ್ಮಿಂದ ದೂರವಾಗಲು ಕಾರಣವೇನು ಎಂಬುದನ್ನು ಪಕ್ಷ ತುಂಬಾ ಜಾಗರೂಕತೆಯಿಂದ ಪರಿಶೀಲಿಸಬೇಕಾಗಿದೆ. ಕೆಲವು ಕ್ಷೇತ್ರಗಳಲ್ಲಿ ಜನರೊಂದಿಗಿನ ಸಂಪರ್ಕ ದುರ್ಬಲವಾಯಿತೇ ಎಂಬುದನ್ನು ಕಂಡುಕೊಳ್ಳಲು ಎಡ ರಂಗ ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್‌ಗಳ ಕಾರ್ಯ ನಿರ್ವಹಣೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಬೇಕಾಗಿದೆ. ಪಕ್ಷ ಸಂಘಟನೆ ಮತ್ತು ಸಾಮೂಹಿಕ ಸಂಘಟನೆಗಳ ಕೆಲಸದ ವಿಚಾರದಲ್ಲೂ ಇಂಥ ಪರಿಶೀಲನೆ ಅಗತ್ಯವಾಗಿದೆ.

ಜನತೆಯ ಕಲ್ಯಾಣಕ್ಕಾಗಿ ಹೋರಾಟ ನಡೆಸಿದ ಹಾಗೂ ಸಂಕಷ್ಟ ಕಾಲದಲ್ಲೂ ಜನರೊಂದಿಗಿದ್ದ ಹೆಮ್ಮೆಯ ದಾಖಲೆ ಸಿಪಿಐ (ಎಂ) ತ್ರಿಪುರಾ ರಾಜ್ಯ ಘಟಕಕ್ಕಿದೆ. ಆದ್ದರಿಂದ ಪಕ್ಷ ಈ ಗಂಭೀರ ಹಿನ್ನಡೆಯನ್ನು ಪರಿಶೀಲಿಸುತ್ತದೆ ಹಾಗೂ ನಕಾರಾತ್ಮಕ ಪ್ರವೃತ್ತಿಗಳು ಮತ್ತು ದೌರ್ಬಲ್ಯಗಳನ್ನು ತೊಡೆದುಹಾಕಲು ಸೂಕ್ತ ರಾಜಕೀಯ ಮತ್ತು ಸಂಘಟನಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತದೆ.

ಮಾರ್ಚ್ 3ರಂದು ಫಲಿತಾಂಶ ಪ್ರಕಟಗೊಂಡ ಬೆನ್ನಲ್ಲೇ ತ್ರಿಪುರಾ ರಾಜ್ಯಾದ್ಯಂತ ಸಿಪಿಐ (ಎಂ) ಮತ್ತು ಟ್ರೇಡ್ ಯೂನಿಯನ್ ಕಚೇರಿಗಳ ಮೇಲೆ ವ್ಯಾಪಕ ದಾಳಿಗಳು ನಡೆದಿವೆ. ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಮನೆಗಳ ಮೇಲೆ ದಾಳಿಗಳಾಗಿವೆ. ನೂರಾರು ಜನರು ಗಾಯಗೊಂಡಿದ್ದಾರೆ. ಬಿಜೆಪಿ-ಆರ್‌ಎಸ್‌ಎಸ್ ಗ್ಯಾಂಗ್ ಪಕ್ಷ ಮತ್ತು ಎಡ ರಂಗವನ್ನು ಬಲವಂತದಿಂದ ದಮನಿಸಲು ಪ್ರಯತ್ನಿಸುತ್ತಿದೆ. ಲೆನಿನ್ ಮೂರ್ತಿಗಳನ್ನು ಕೆಡವಲಾಗುತ್ತಿದೆ. ಆದರೆ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಈ ದಾಳಿಗಳನ್ನು ಮೆಟ್ಟಿ ನಿಲ್ಲುತ್ತವೆ. ಹೊಸ ರಾಜಕೀಯ ವಾತಾವರಣದಲ್ಲಿ ಕೆಲಸ ಮಾಡಲು ತಮ್ಮನ್ನು ಹೊಂದಿಸಿಕೊಳ್ಳುತ್ತವೆ. ಅವರಿಗೆ ಇಡೀ ದೇಶದ ಎಲ್ಲಾ ಎಡ ಮತ್ತು ಪ್ರಗತಿಪರ ಶಕ್ತಿಗಳ ಬೆಂಬಲ ಮತ್ತು ಸೌಹಾರ್ದತೆಯಿದೆ.

ತ್ರಿಪುರಾದ ಚುನಾವಣೆ ಸೋಲು ಸಿಪಿಐ (ಎಂ) ಮತ್ತು ದೇಶದ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ದೊಡ್ಡ ಹಿನ್ನಡೆಯಾಗಿದೆ. ಎಡರಂಗವು ಪ್ರಮುಖ ವಿರೋಧಿಯಾಗಿ ಬಿಜೆಪಿ ವಿರುದ್ಧ ಹೋರಾಡಿದ್ದು ಇದೇ ಮೊದಲ ಸಲವಾಗಿದೆ. ಚುನಾವಣೆ ಸೋಲು ಬಿಜೆಪಿ-ಆರ್‌ಎಸ್‌ಎಸ್ ಕೂಟದ ದಾಳಿಯನ್ನು ಎದುರಿಸಲು ನಮ್ಮ ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಕೆಲಸಗಳ ವಿಮರ್ಶಾಪೂರ್ಣ ಮೌಲ್ಯಮಾಪನಕ್ಕೆ ಹಾದಿ ಮಾಡಿಕೊಡಬೇಕು. ಪಕ್ಷದ ಮುಂಬರುವ ಮಹಾಧಿವೇಶನ ಮುಂದಿನ ಕಾಳಗಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಪಕ್ಷವನ್ನು ಸನ್ನದ್ಧಗೊಳಿಸಲು ನಮಗೆ ನೆರವಾಗಬೇಕು.

ಅನು: ವಿಶ್ವ

ಅಚ್ಛೇ ದಿನ್, ಉದ್ಯೋಗಕ್ಕೆ ಬಿಜೆಪಿಗೆ ಮತ! ಸುರೇಂದ್ರನ್, ದಿ ಹಿಂದು



ಎಡರಂಗಕ್ಕೆ ಬೆಂಬಲ ನೀಡಿದ 45% ಮತದಾರರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿವಂದನೆ
ತ್ರಿಪುರಾದ ಜನತೆಗೆ ಬುಡಕಟ್ಟು-ಬುಡಕಟ್ಟೇತರ ಜನಗಳ ಐಕ್ಯತೆಯನ್ನು ಎತ್ತಿ ಹಿಡಿಯುವ ಭರವಸೆ

ತ್ರಿಪುರಾ ಜನತೆಯ ತೀರ್ಪಿನಿಂದ ರಾಜ್ಯದಲ್ಲಿ ಒಂದು ಬಿಜೆಪಿ-ಐಪಿಎಫ್‌ಟಿ ಸರಕಾರ ರಚನೆಗೊಳ್ಳುತ್ತದೆ. 25 ವರ್ಷ ಸರಕಾರದಲ್ಲಿದ್ದ ನಂತರ ಎಡರಂಗವನ್ನು ಮತದಾನದ ಮೂಲಕ ಅಧಿಕಾರದಿಂದ ಹೊರಕಳಿಸಲಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ತ್ರಿಪುರಾ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ಕೂಡಲೇ ಮಾರ್ಚ್ 3ರಂದು ನೀಡಿದ ಬಗ್ಗೆ ನೀಡಿರುವ ಹೇಳಿಕೆಯಲ್ಲಿ ತಿಳಿಸಿತು.

ಬೇರೆಲ್ಲ ಅಂಶಗಳಲ್ಲದೆ, ಬಿಜೆಪಿ ಚುನಾವಣೆಯ ಮೇಲೆ ಪ್ರಭಾವ ಬೀರಲು ಹಣ ಮತ್ತು ಇತರ ಸಂಪನ್ಮೂಲಗಳನ್ನು ಬೃಹತ್ ಪ್ರಮಾಣದಲ್ಲಿ ಬಳಸಿದೆ. ಹಿಂದಿನ ಪ್ರಧಾನ ಪ್ರತಿಪಕ್ಷವಾದ ಕಾಂಗ್ರೆಸನ್ನು ಸುಮಾರಾಗಿ ಸ್ವಾಧೀನ ಪಡಿಸಿಕೊಂಡು ಎಲ್ಲ ಎಡ-ವಿರೋಧಿ ಮತಗಳನ್ನು ಕ್ರೋಡೀಕರಿಸಲು ಬಿಜೆಪಿಗೆ ಸಾಧ್ಯವಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಸಿಪಿಐ(ಎಂ) ಮತ್ತು ಎಡರಂಗಕ್ಕೆ ಬೆಂಬಲ ನೀಡಿದ 45% ಮತದಾರರನ್ನು ಅಭಿವಂದಿಸಿದ ಪೊಲಿಟ್‌ಬ್ಯುರೊ, ಈ ಚುನಾವಣಾ ಹಿನ್ನಡೆಯ ಕಾರಣಗಳನ್ನು ಸಿಪಿಐ(ಎಂ) ಜಾಗರೂಕತೆಯಿಂದ ಪರೀಕ್ಷಿಸುತ್ತದೆ ಮತ್ತು ಅಗತ್ಯ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ತಿಳಿಸಿದೆ.

ಸಿಪಿಐ(ಎಂ) ದುಡಿಯುವ ಜನಗಳ ಎಲ್ಲ ವಿಭಾಗಗಳ ಹಿತಗಳನ್ನು ಪ್ರತಿಪಾದಿಸುವುದನ್ನು ಮುಂದುವರೆಸುತ್ತದೆ ಮತ್ತು ಬುಡಕಟ್ಟು-ಬುಡಕಟ್ಟೇತರ ಜನಗಳ ಐಕ್ಯತೆಯನ್ನು ಎತ್ತಿ ಹಿಡಿಯುತ್ತದೆ ಎಂದು ಪೊಲಿಟ್‌ಬ್ಯುರೊ ತ್ರಿಪುರಾದ ಜನತೆಗೆ ಭರವಸೆ ನೀಡಿದೆ.

ನಿಲ್ಲಿಸಿದ್ದ ಮತಗಣನೆ ಮುಂದುವರೆದು ಮಾಣಿಕ್ ಸರ್ಕಾರ್ ವಿಜೇತರೆಂದು ಘೋಷಣೆ

ಸಿಪಿಐ(ಎಂ) ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಸ್ಪರ್ಧಿಸಿದ್ದ ಧರಂಪುರ್ ಚುನಾವಣಾ ಕ್ಷೇತ್ರದಲ್ಲಿ ಮತಗಟ್ಟೆ ಸಂಖ್ಯೆ 42, 43 ಮತ್ತು 47ರಲ್ಲಿ ಬಿಜೆಪಿಯ ಆಕ್ಷೇಪದಿಂದಾಗಿ ಮತಗಣನೆಯನ್ನು ನಿಲ್ಲಿಸಲಾಗಿತ್ತು. ಈ ಮತಗಟ್ಟೆಗಳ ಯುನಿಟ್‌ಗಳಲ್ಲಿ ಬಿಜೆಪಿಯ ಚುನಾವಣಾ ಏಜೆಂಟರ ಸಹಿ ಇಲ್ಲದಿರುವುದರಿಂದಾಗಿ ಇಲ್ಲಿ ಮರು ಮತದಾನ ನಡೆಯಬೇಕು ಎಂಬುದು ಬಿಜೆಪಿ ಆಗ್ರಹವಾಗಿತ್ತು. ಆತನ ಸಹಿ ಬಿಟ್ಟು ಬೇರೆಲ್ಲ ರಾಜಕೀಯ ಪಕ್ಷಗಳ ಸಹಿ ಮತ್ತು ಅಲ್ಲಿನ ಪ್ರಿಸೈಡಿಂಗ್ ಆಫೀಸರ್‌ರವರ ಸಹಿಗಳು ಇದ್ದವು. ಬಿಜೆಪಿಯ ಅಭ್ಯರ್ಥಿ ಹಿಂದಿದ್ದದ್ದು ಇದಕ್ಕೆ ಕಾರಣ.

ಅಲ್ಲದೆ ಐಟಿಬಿಪಿ ಪಡೆಯ ನೆರವಿನಿಂದ ಸಿಪಿಐ(ಎಂ)ನ ಮತಗಣನೆ ಏಜೆಂಟರನ್ನು ಹೊರಗೋಡಿಸಿ ಏಕಾಂಗಿಯಾಗುಳಿದ ಮಾಣಿಕ್ ಸರ್ಕಾರ್ ರವರನ್ನು ಬಿಜೆಪಿ ಮಂದಿ ಘೇರಾವ್ ಮಾಡಿ ಛೇಡಿಸಿದರು. ಈ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ದಿಲ್ಲಿಯಲ್ಲಿ ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿಯಾಗಿ ಒಂದು ಪತ್ರವನ್ನು ಸಲ್ಲಿಸಿ ಇದರಲ್ಲಿ ಮಧ್ಯಪ್ರವೇಶಿಸಿ ಕೂಡಲೇ ಮತಗಣನೆಯನ್ನು ಪುನರಾರಂಭಿಸಬೇಕು ಎಂದು ಆಗ್ರಹಿಸಿದರು. ನಂತರ ಮತಗಣನೆ ಮುಂದುವರೆದು ಮಾಣಿಕ್ ಸರ್ಕಾರ್ ಅವರನ್ನು ವಿಜೇತರೆಂದು ಘೋಷಿಸಲಾಯಿತು.





ಪ್ರತಿಮೆಗಳ ಧ್ವಂಸ ಕಾರ್ಯಗಳು ಆರೆಸ್ಸೆಸ್‌ನ ‘ಸೈದ್ಧಾಂತಿಕ ವಿಜಯ’ದ ನಿಜಸ್ವರೂಪವನ್ನು ತೋರಿಸುತ್ತವೆ



ಲೆನಿನ್ ಪ್ರತಿಮೆಯ ಧ್ವಂಸ ಆರೆಸ್ಸೆಸ್‌ನಲ್ಲಿ ರಕ್ತಗತವಾಗಿರುವ ಕಮ್ಯುನಿಸ್ಟ್-ವಿರೋಧವನ್ನು ಮಾತ್ರವಲ್ಲ, ಇನ್ನೂ ಹೆಚ್ಚಿನದೊಂದನ್ನು ತೋರಿಸುತ್ತದೆ. ಆರೆಸ್ಸೆಸ್‌ನ ಸಿದ್ಧಾಂತಕ್ಕೆ ವಿರುದ್ಧವಾದ, ಅದಕ್ಕೆ ಸವಾಲು ಹಾಕುವ ಯಾವುದೇ ತತ್ವ -ಸಿದ್ಧಾಂತದ ಬಗ್ಗೆ ಸಂಘಪರಿವಾರದ ವಿಪರೀತ ಅಸಹಿಷ್ಣುತೆಯನ್ನು ಮತ್ತೊಮ್ಮೆ ತೋರಿಸಿದೆ. ಇದು ಲೆನಿನ್ ಮತ್ತು ಅವರ ಪರಂಪರೆಯ ಅಭಿಮಾನಿಗಳು ಮಾತ್ರವಲ್ಲ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ರಾಜಕೀಯ ಚರ್ಚೆಯಲ್ಲಿ ನಂಬಿಕೆಯಿರುವವರೂ ಹುಬ್ಬೇರಿಸುವಂತೆ ಮಾಡಿದೆ. ಆ ಅತಿರೇಕದ ವಿರುದ್ಧ ಆಕ್ರೋಶ ಸಾಕಷ್ಟು ಬಲಯುತವಾಗಿರದಿದ್ದರೆ ಅದು ಲೆನಿನ್ ಪ್ರತಿಮೆಗೇ ನಿಲ್ಲುವುದಿಲ್ಲ ಎನ್ನುತ್ತಾರೆ **ಬೃಂದಾ ಕಾರಟ್**.

ಅವರು ಹೇಳಿದ್ದು ಅವರ ಈ ಲೇಖನ ಎನ್‌ಡಿಟಿವಿ. ಕಾಂ ನಲ್ಲಿ ಪ್ರಕಟವಾಗುವ ಮೊದಲೇ ನಿಜವಾಗಿದೆ. ವೆಲ್ಲೂರಿನಲ್ಲಿ ಪೆರಿಯಾರ್ ಪ್ರತಿಮೆಯೊಂದರ ಮೇಲೆ ವಿಧ್ವಂಸಕ ಕೃತ್ಯ ನಡೆಸುವ ಪ್ರಯತ್ನ ನಡೆದ ವರದಿ ಬಂದಿದೆ

ತ್ರಿಪುರಾದ ಚುನಾವಣೆಗಳ ಫಲಿತಾಂಶಗಳನ್ನು ಪ್ರಕಟಿಸಿದ ನಂತರ ನವದೆಹಲಿಯಲ್ಲಿರುವ ಬಿಜೆಪಿಯ ಮುಖ್ಯ ಕಚೇರಿಯಲ್ಲಿ ಪ್ರಧಾನ ಮಂತ್ರಿ ಮೋದಿ ಮತ್ತು ಆಳುವ ಪಕ್ಷದ ಅಧ್ಯಕ್ಷರು ಭಾರತವನ್ನು ಕಮ್ಯುನಿಸ್ಟರಿಂದ ಮುಕ್ತಗೊಳಿಸುವ ಆಶ್ವಾಸನೆ ನೀಡಿದರು...ಒಂದು ‘ಕಮ್ಯುನಿಸ್ಟ್-ಮುಕ್ತ ಭಾರತ’. ಮೋದಿಯವರು ಇದೊಂದು ಕಮ್ಯುನಿಸ್ಟರ ಮೇಲೆ ‘ಸೈದ್ಧಾಂತಿಕ ವಿಜಯ’ ಎಂದು ಘೋಷಿಸಿದರು.

ತ್ರಿಪುರಾದಲ್ಲಿನ ಬಿಜೆಪಿ ಮಂದಿಗೆ ತಮ್ಮ ಮುಖಂಡರ ಮಾತುಗಳು ಗಟ್ಟಿಯಾಗಿಯೇ ಕೇಳಿಸಿದವು.

ತ್ರಿಪುರಾ ಫಲಿತಾಂಶಗಳು ಪ್ರಕಟವಾದ ಮರುದಿನದಿಂದಲೇ ದಾಳಿಗಳ ಒಂದು ಅಲೆಯೇ ಎದ್ದು ಬಂದಿದೆ-ಬಿಜೆಪಿ ಮಂದಿಗಳಿಂದ ಎಡಪಂಥೀಯರ ವಿರುದ್ಧ, ಅದರಲ್ಲೂ ಸಿಪಿಐ(ಎಂ) ಮೇಲೆ ಗುರಿ ಮಾಡಿ. (ಈ ಸಂಚಿಕೆಯ ಪುಟ 2ರಲ್ಲಿ ಪ್ರಕಟವಾಗಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆ ನೋಡಿ- ಅನು). ದಾಳಿಗಳು ಮುಂದುವರೆಯುತ್ತಿವೆ. ಈ ಅಂಕಿ-ಅಂಶಗಳನ್ನು ತ್ರಿಪುರಾದಲ್ಲಿ ಪೋಲಿಸ್ ಅಧಿಕಾರಿಗಳಿಗೆ ಮತ್ತು ಕೇಂದ್ರ ಸರಕಾರಕ್ಕೆ ನೀಡಲಾಗಿದೆ. ಎಡರಂಗದ 25 ವರ್ಷಗಳ ಆಳ್ವಿಕೆಯಲ್ಲಿ ಪ್ರತಿಪಕ್ಷಗಳ ಒಂದಾದರೂ ಕಚೇರಿಯನ್ನು ಸುಟ್ಟ ಅಥವ ಕಬ್ಜಾ ಮಾಡಿದ ಅಥವ ಆಗಿನ ಪ್ರತಿಪಕ್ಷಗಳ ಬೆಂಬಲಿಗರ ಮೇಲೆ ಸಾಮೂಹಿಕ ದಾಳಿಯ ಒಂದೇ ಒಂದು ಉದಾಹರಣೆ ಇಲ್ಲ. ಇದು ತಾವು ಮಾತ್ರ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವವರು, ಸಿಪಿಐ(ಎಂ)ಗೆ ಅದಿಲ್ಲ ಎಂಬ ಬಿಜೆಪಿ ಮುಖಂಡರುಗಳ ದಾವೆಗಳ ಟೊಳ್ಳುತನವನ್ನು, ಗೋಸುಂಬೆತನವನ್ನು ತೋರಿಸುತ್ತದೆ.

ಲೆನಿನ್ ಅವರ ಎರಡು ಪ್ರತಿಮೆಗಳನ್ನು ಧ್ವಂಸ ಮಾಡಲಾಗಿದೆ. ಬಿಜೆಪಿ-ಐಪಿಎಫ್‌ಟಿ ತ್ರಿಪುರಾದಲ್ಲಿ ಒಂದು ದೊಡ್ಡ ವಿಜಯ ಗಳಿಸಿದ್ದಾರೆ. ಬಿಜೆಪಿ ಸುಮಾರು 43% ಮತಗಳನ್ನು, ಐಪಿಎಫ್‌ಟಿ ಜತೆಗೂಡಿ ಸುಮಾರು 50% ಮತಗಳನ್ನು ಗಳಿಸಿದೆ. ಸಿಪಿಐ(ಎಂ) ಮತ್ತು ಇತರ ಒಂದೊಂದು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ ಮೂರು ಎಡಪಕ್ಷಗಳು ಕಳೆದ ಬಾರಿಯ 50ರಲ್ಲಿ ಕೇವಲ 16 ಸ್ಥಾನಗಳನ್ನು ಉಳಿಸಿಕೊಳ್ಳಲಷ್ಟೇ ಸಾಧ್ಯವಾದರೂ 45% ಮತಗಳನ್ನು ಪಡೆದಿವೆ. ನಿಜ, ಸಿಪಿಐ(ಎಂ) ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ, ಫಲಿತಾಂಶಗಳ ಪರಾಮರ್ಶೆ ಮಾಡಬೇಕಾಗಿದೆ.

ಆದರೆ ಬಿಜೆಪಿ-ಆರೆಸ್ಸೆಸ್ ತಮ್ಮ ಆಳ್ವಿಕೆಯ ಆರಂಭಿಕ ಹಂತದಲ್ಲೇ ಎಡಪಂಥೀಯರ ಈ ಗಮನಾರ್ಹ ನೆಲೆಯನ್ನು ನಿಗ್ರಹಿಸಲಿಕ್ಕಾಗಿಯೇ, ಅದನ್ನು ಅಧೀನ ಪಡಿಸಿಕೊಳ್ಳಲಿಕ್ಕಾಗಿಯೆ ಇಂತಹ ದಾಳಿಗಳಿಗೆ, ಬೆದರಿಸುವ, ಭಯದ ವಾತಾವರಣ ಮೂಡಿಸುವ ವಿಧಾನಗಳಿಗೆ ಕೈಹಾಕಿವೆ. ಕಮ್ಯುನಿಸ್ಟರ ಮೇಲೆ ಹಿಂಸಾಚಾರದ ಪ್ರಯೋಗ "ಕಮ್ಯುನಿಸ್ಟ್-ಮುಕ್ತ ಭಾರತ’ವನ್ನು ಸಾಧಿಸುವ ಒಂದು ವಿಧಾನ, ಅಥವ ಹಾಗೆಂದು ಬಿಜೆಪಿ ಭಾವಿಸಿದೆ.

ಮೋದಿಯವರು ಸಾರಿರುವ ಕಮ್ಯುನಿಸ್ಟರ ಮೇಲಿನ ಸೈದ್ಧಾಂತಿಕ ವಿಜಯಕ್ಕೆ 2013ರಲ್ಲಿ ದಕ್ಷಿಣ ತ್ರಿಪುರಾದ ಬೆಲೊನಿಯದಲ್ಲಿ ಸ್ಥಾಪಿಸಿದ ಲೆನಿನ್ ಪ್ರತಿಮೆಯ ಮೇಲೆ ಬುಲ್‌ಡೋಜರ್ ಹರಿಸುವ ಮೂಲಕ ಮೊಹರು ಹಾಕಬೇಕಾಗಿದೆ. ಅದು ಸ್ವಯಂಸ್ಫೂರ್ತಿಯಿಂದ ನಡೆದ ಘಟನೆಯೇನೂ ಅಲ್ಲ. ಬಿಜೆಪಿ ಮಂದಿಯ ಒಂದು ಗುಂಪು ಅದನ್ನು ಕೆಡವಲು ಬುಲ್‌ಡೋಜರ್ ತಂದರು. ಅದರ ತಲೆ ಕಡಿದು ಚೆಂಡಾಡಿದರು ಎಂದು ವರದಿಯಾಗಿದೆ. ನಾಝಿ ಜರ್ಮನಿಯನ್ನು ವೈಭವೀಕರಿಸಿದ ಮತ್ತು ಅದು ಅನುಸರಿಸಬೇಕಾದ ಒಂದು ಮಾದರಿ ಎಂದು ಪರಿಗಣಿಸಿದ ಸಾವರ್ಕರ್ ಮತ್ತು ಗೋಲ್ವಾಲ್ಕರ್‌ರಂತ ತಮ್ಮ ಸೈದ್ಧಾಂತಿಕ ತಾತಂದಿರ ಪಠ್ಯಗಳ ಪಠಣ ಮಾಡಿರುವ ಈ ಮಂದಿ ತಮಗೆ ನೀಡಿದ ತರಬೇತಿಯಂತೆಯೇ ಮಾಡಿದ್ದಾರೆ, ಇಂತಹ ದಡ್ಡ ಕೃತ್ಯಗಳನ್ನು ತಮ್ಮ ಮುಖಂಡರ ಬೆಂಬಲ ಇದೆ ಎಂಬ ಅಚಲ ನಂಬಿಕೆಯೊಂದಿಗೆ ಎಸಗಿದ್ದಾರೆ.

ಇದಕ್ಕೆ ತನ್ನ ಅನುಮೋದನೆಯನ್ನು ಮೊದಲು ಟ್ವೀಟ್ ಮಾಡಿದವರು ಆರೆಸ್ಸೆಸ್ ಮುಖಂಡ ರಾಮ ಮಾಧವ. ಅದನ್ನನುಸರಿಸಿ ತ್ರಿಪುರಾದ ರಾಜ್ಯಪಾಲ "ಒಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರಕಾರ ಇನ್ನೊಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರಕಾರ ಮಾಡಿದ್ದನ್ನು ಕಳಚಿ ಹಾಕಬಹುದು" ಎಂದರು. ಅಂದರೆ ಕಾನೂನನ್ನು ಎತ್ತಿ ಹಿಡಿಯುವ ಆದೇಶ ಇರುವ ಒಂದು ಮಹತ್ವದ ಸಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಯೊಬ್ಬನ ಪ್ರಕಾರ ಪ್ರತಿಮೆಯನ್ನು ಬೀಳಿಸಿದ ಗೂಂಡಾಗಳು "ಒಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರಕಾರ"ದ ಪ್ರತಿನಿಧಿಗಳು! ಇವರೆಲ್ಲ ಈ ಕೃತ್ಯದ ಹಿಂದಿರುವ ಪೋಷಕರು ಎಂಬುದಕ್ಕೆ ಬೇರೆ ಪುರಾವೆಗಳು ಬೇಕೇ?

ಕೆಲವು ಬಿಜೆಪಿ ಮುಖಂಡರು ಲೆನಿನ್ ಒಬ್ಬ ವಿದೇಶೀಯ, ಆತ ಒಬ್ಬ ಭಯೋತ್ಪಾದಕ ಎಂದು ಈ ಕೃತ್ಯವನ್ನು ಸಮರ್ಥಿಸಿಕೊಂಡಿದ್ದಾರೆ.

1917ರಲ್ಲಿ ರಷ್ಯದ ಝಾರ್‌ನ ನಿರಂಕುಶ ಆಳ್ವಿಕೆಯನ್ನು ಕಿತ್ತೆಸೆದ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಸವಾಲೆಸೆದ ಲೆನಿನ್ ನೇತೃತ್ವದ ರಷ್ಯನ್ ಕ್ರಾಂತಿ ಆಗ ಭಾರತದಂತಹ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ

ಪುಟ 10 ಕ್ಕೆ

“ಪ್ರಧಾನಿಗಳ ಖಂಡನೆಯು ಗೋಸುಂಬೆ ಮಾತುಗಳಿಗೆ ಏನೂ ಅರ್ಥವಿಲ್ಲ”- ಯೆಚುರಿ

“ಪ್ರಧಾನಮಂತ್ರಿಗಳು ದೇಶದ ಹಲವೆಡೆಗಳಿಂದ ಬಂದಿರುವ ಪ್ರತಿಮೆ ಧ್ವಂಸದ ವರದಿಗಳನ್ನು ಬಲವಾಗಿ ಖಂಡಿಸಿದ್ದಾರೆ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿರುವುದಾಗಿ ಪಿಐಬಿ(ಭಾರತ ಸರಕಾರದ ಅಡಿಯಿರುವ ಪತ್ರಿಕಾ ಮಾಹಿತಿ ಕಚೇರಿ) ಮಹಾನಿರ್ದೇಶಕರು ಪ್ರಕಟಿಸಿದ್ದಾರೆ. ಅವರು ತಮ್ಮ ಬಲವಾದ ಅಸಮ್ಮತಿಯನ್ನು ಗೃಹಮಂತ್ರಿಗಳಿಗೆ ತಿಳಿಸಿದ್ದಾರೆ. ಗೃಹಮಂತ್ರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ರಾಜ್ಯಸರಕಾರಗಳಿಗೆ ಈ ವಿಷಯದಲ್ಲಿ ಕಟ್ಟುನಿಟ್ಟಾಗಿ ವರ್ತಿಸುವಂತೆ, ಇದರಲ್ಲಿ ತೊಡಗಿರುವವರ ವಿರುದ್ಧ ಸಂಬಂಧಪಟ್ಟ ಕಾಯ್ದೆಗಳ ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದೆ ಎಂದೂ ಪಿಐಬಿ ತಿಳಿಸಿದೆ.

“ಮೋದಿಯವರು ನೇಮಿಸಿದ ರಾಜ್ಯಪಾಲರು, ಶಾಸಕರು ಮತ್ತು ಅವರ ಪಕ್ಷದ ಒಬ್ಬ ಪ್ರಧಾನ ಕಾರ್ಯದರ್ಶಿಯೇ ಈ ಧ್ವಂಸ ಕ್ರಿಯೆಗಳನ್ನು ಸಮರ್ಥಿಸಿರುವಾಗ ಅವರ ಗೋಸುಂಬೆ ಮಾತುಗಳಿಗೆ ಏನೂ ಅರ್ಥವಿಲ್ಲ" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ. "ಗಾಂಧೀಜಿಯ ಕೊಲೆಯಿಂದ ಹಿಡಿದು ಬಾಬ್ರಿ ಮಸೀಧಿ ಧ್ವಂಸದ ವರೆಗೆ ಸಂಘ ಪರಿವಾರದ ಪರಂಪರೆ ಎಲ್ಲರಿಗೂ ಗೊತ್ತಿರುವಂತದ್ದೇ. ಸಂಘ ಪರಿವಾರದ ಮಂದಿಯಿಂದ ಪ್ರತಿಮೆಗಳ ನಾಶ ಪ್ರಗತಿ ಮತ್ತು ಜ್ಞಾನೋದಯದ ವಿಚಾರಗಳನ್ನು ಧ್ವಂಸ ಮಾಡುವ ಪರಿವಾರದ ನಿಜ ಆಶಯಗಳನ್ನು ಮತ್ತು ಅವುಗಳ ಟೊಳ್ಳುತನವನ್ನು ಪ್ರದರ್ಶಿಸುತ್ತಿದೆ” ಎಂದು ಯೆಚುರಿಯವರು ಹೇಳಿದ್ದಾರೆ.

ಎಡಶಕ್ತಿಗಳು ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಕ್ರಿಯೆಯಲ್ಲೇ ದೇಶವನ್ನು ರಕ್ಷಿಸಬೇಕಾಗಿದೆ-ಪ್ರೊ. ಪ್ರಭಾತ್ ಪಟ್ನಾಯಕ್
‘ಆಪರೇಶನ್ ಧಕ್ಕಾ’ ಬಗ್ಗೆ ಎಚ್ಚರದಿಂದಿರಿ- ಗೋಪಾಲಕೃಷ್ಣ ಗಾಂಧಿ - ಪುಟ 10 ನೋಡಿ

“ನೀವೆಷ್ಟೇ ಪ್ರತಿಮೆಗಳನ್ನು ಧ್ವಂಸ ಮಾಡಿದರೂ ಲೆನಿನ್ ಸ್ಮರಣೆ ಶಾಶ್ವತ”

ಕೊಲ್ಕತಾದ ಬೀದಿಗಳಲ್ಲಿ ತ್ರಿಪುರಾದೊಂದಿಗೆ ಸೌಹಾರ್ದ

ಕೊಲ್ಕತೆಯಲ್ಲಿ ನಡೆಯುತ್ತಿರುವ ಸಿಪಿಐ(ಎಂ)ನ 25 ನೇ ರಾಜ್ಯ ಸಮ್ಮೇಳನದ ಪ್ರತಿನಿಧಿಗಳು ತಮ್ಮ ಚರ್ಚೆಗಳ ನಡುವೆಯೇ ಪಕ್ಷದ ಕೊಲ್ಕತಾ ಜಿಲ್ಲಾ ಸಮಿತಿ ಸಂಘಟಿಸಿದ್ದ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದರು. ಸ್ವತಃ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹಾಗೂ ಪೊಲಿಟ್‌ಬ್ಯುರೊ ಸದಸ್ಯರುಗಳಾದ ಪ್ರಕಾಶ ಕಾರಟ್ ಬಿಮನ್ ಬಸು, ಬೃಂದಾ ಕಾರಟ್, ಸೂರ್ಯಕಾಂತ್ ಮಿಶ್ರ, ಎಂ.ಎ.ಬೇಬಿ ಮತ್ತು ಕೇಂದ್ರ ಸಮಿತಿ ಸದಸ್ಯರು ನಗರದ ವಿವಿಧ ಜನವಿಭಾಗಗಳಿಂದ ಬಂದಿದ್ದ ಸಾವಿರಾರು ಮಂದಿ ಆಕ್ರೋಶಭರಿತ ಪ್ರತಿಭಟನಾಕಾರರಿಗೆ ನೇತೃತ್ವ ನೀಡಿದರು.



ಬಾಗೇಪಲ್ಲಿಯಲ್ಲಿ ಸಿಪಿಐ(ಎಂ) ರಾಜಕೀಯ ಸಮಾವೇಶ
ಹಣ ಹಂಚಿ ಗೆದ್ದವರಿಂದ ಅಭಿವೃದ್ಧಿ ಸಾಧ್ಯವೇ?: ಜಿ.ವಿ.ಎಸ್.

ಹೆಚ್.ಆರ್. ನವೀನ್ ಕುಮಾರ್





ಶ್ರೀನಿವಾಸ್ ರೆಡ್ಡಿ ನೆನಪಿನ ಸ್ತೂಪ

ಸಮಾವೇಶ ಪ್ರಾರಂಭಕ್ಕೂ ಮುನ್ನ ಪಕ್ಷದ ತಾಲ್ಲೂಕು ಮುಖಂಡರಾಗಿದ್ದ ಕಾಮ್ರೇಡ್ ಶ್ರೀನಿವಾಸ್ ರೆಡ್ಡಿಯವರ ನೆನಪಿಗಾಗಿ ಬಾಗೇಪಲ್ಲಿ ತಾಲ್ಲೂಕಿನ ಗೂಳೂರು ಹೋಬಳಿಯ ಮಾಡಪಲ್ಲಿಯಲ್ಲಿ ನಿರ್ಮಿಸಲಾಗಿರುವ ಸ್ತೂಪವನ್ನು ಉದ್ಘಾಟಿಸಲು ಗದ್ದರ್, ಜಿ.ವಿ.ಶ್ರೀರಾಮರೆಡ್ಡಿ ಮತ್ತು ಎಸ್.ವರಲಕ್ಷ್ಮಿಯವರು ಭಾಗವಹಿಸಿದರು.

ಎಲ್ಲಿ ನೋಡಿದರೂ ಜನ, ಎಲ್ಲಿ ನೋಡಿದರೂ ಕೆಂಬಾವುಟಗಳ ಹಾರಾಟ. ಇಡೀ ಪಟ್ಟಣವೇ ಕೃಷಿ ಕೂಲಿಕಾರರು, ರೈತರು, ದುಡಿಯುವ ಜನರಿಂದ ತುಂಬಿತ್ತು. ಈ ದೃಶ್ಯ ಕಂಡುಬಂದದ್ದು ಮಾರ್ಚ್ 5 ರಂದು ಬಾಗೇಪಲ್ಲಿಯಲ್ಲಿ ನಡೆದ ಸಿಪಿಐಎಂ ರಾಜಕೀಯ ಸಮಾವೇಶದ ಸಂದರ್ಭದಲ್ಲಿ.

ರಾಜ್ಯದಲ್ಲಿ ಕಮ್ಯೂನಿಸ್ಟರಿಗೆ ಬಾಗೇಪಲ್ಲಿ ಕ್ಷೇತ್ರ ಬಹಳ ಮಹತ್ವವಾದದ್ದು. ಇದಕ್ಕೆ ಮುಖ್ಯ ಕಾರಣ ಈ ನೆಲದಲ್ಲಿ ಬೆಳೆದು ಬಂದ ಧೀರೋದ್ಧಾತ ಕಮ್ಯೂನಿಸ್ಟ್ ಹೋರಾಟಗಳು. ಇಲ್ಲಿ ನಡೆದ ಭೂ ಹೋರಾಟಕ್ಕೆ ದೇಶದ ಅಪ್ರತಿಮ ಕಮ್ಯೂನಿಸ್ಟ್ ಮುಖಂಡ ಎ.ಕೆ. ಗೋಪಾಲನ್‌ರವರಂತವರೂ ಬಂದು ಭಾಗವಹಿಸಿದ ಉದಾಹರಣೆಗಳಿವೆ. ಈ ಚಳುವಳಿಯ ಮುಂದುವರೆದ ಭಾಗವಾಗಿ ಕರ್ನಾಟಕ ವಿಧಾನ ಸಭೆಗೆ ಈ ಕ್ಷೇತ್ರದಿಂದ ಮೂರು ಬಾರಿ ಸಿಪಿಐಎಂ ಪಕ್ಷವನ್ನು ಪ್ರತಿನಿಧಿಸಿ ಶಾಸಕರು ಆಯ್ಕೆಯಾಗಿದ್ದಾರೆ. ಆ ಮೂಲಕ ಕ್ಷೇತ್ರದ ಮತ್ತು ರಾಜ್ಯದ ರಾಜಕಾರಣದಲ್ಲಿ ಗಮನಾರ್ಹ ಪ್ರಭಾವ, ಪರಿಣಾಮವನ್ನು ಬೀರಿದ್ದಾರೆ. ಮಾತ್ರವಲ್ಲದೆ ಶಾಸನ ಸಭೆಯ ಒಳಗೂ ಹೊರಗೂ ದುಡಿವ ಜನರ ಧ್ವನಿಯಾಗಿದ್ದಾರೆ.



ಬೃಹತ್ ಮೆರವಣಿಗೆ

ಪಟ್ಟಣದ ಪ್ರವಾಸಿಮಂದಿರದಿಂದ ಹೊರಟ ಸಾವಿರಾರು ಜನರ ಬೃಹತ್ ಮೆರವಣಿಗೆ ಪಟ್ಟಣದಲ್ಲಿ ಜನಸಾಗರವನ್ನೇ ಸೃಷ್ಟಿಮಾಡಿತು. ರಸ್ತೆಯ ಇಕ್ಕೆಲಗಳಲ್ಲಿ ನಿಂತು ಈ ಸ್ಫೂರ್ತಿದಾಯಕ ಮೆರವಣಿಗೆಯನ್ನು ಜನ ಕಣ್ತುಂಬಿಕೊಂಡರು. ಮಾತ್ರವಲ್ಲ ಕೆಂಬಾವುಟದವರು ಎಂದಿಗೂ ಹಣ ಕೊಟ್ಟು ಜನರನ್ನು ಕರೆತರುವವರಲ್ಲ. ಇವರೆಲ್ಲ ಸ್ವಯಂ ಸ್ಫೂರ್ತಿಯಿಂದ ಕೆಂಬಾವುಟ ಹಿಡಿದು ಬಂದವರು ಮತ್ತು ಇತ್ತೀಚಿನ ವರ್ಷಗಳಲ್ಲಿ ಪಟ್ಟಣದಲ್ಲಿ ಇಷ್ಟು ದೊಡ್ಡಸಂಖ್ಯೆಯ ಜನರನ್ನು ನೋಡಿರಲಿಲ್ಲ ಎಂದು ಮಾತನಾಡಿಕೊಳ್ಳುತ್ತಿದ್ದರು. ರಸ್ತೆಯುದ್ದಕ್ಕೂ ಯರ್ರ ಜಂಡ ಜಿಂದಾಬಾದ್, ಸಿಪಿಐಎಂ ಜಿಂದಾಬಾದ್ ಎಂದು ಘೋಷಣೆಗಳನ್ನು ಕೂಗುತ್ತಾ ಸಮಾವೇಶದ ವೇದಿಕೆ ನಿರ್ಮಾಣವಾಗಿದ್ದ ಕ್ರೀಡಾಂಗಣಕ್ಕೆ ಸಾಗಿದರು.

ರಾಜಕೀಯ ಸಮಾವೇಶದಲ್ಲಿ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ಪ್ರಜಾಪ್ರಭುತ್ವದ ಮೌಲ್ಯಗಳು ದಿನದಿಂದ ದಿನಕ್ಕೆ ನಶಿಸಿ ಜನರ ಆಶೋತ್ತರಗಳಿಗೆ ವಿರುದ್ದವಾಗಿ ಜನಪ್ರತಿನಿಧಿಗಳು ನಡೆದುಕೊಳ್ಳುತ್ತಿದ್ದಾರೆ. ಹಣವಂತರು ಯಾರು ಬೇಕಾದರೂ ಚುನಾವಣೆಗಳಲ್ಲಿ ಸ್ಪರ್ಧಿಸಿ ಜನರಿಗೆ ಹಣದ ಆಮಿಷಗಳನ್ನು ಒಡ್ಡಿ ಮತಗಳನ್ನು ಖರೀದಿಸಿ ಚುನಾವಣೆಗಳಲ್ಲಿ ಗೆಲ್ಲಬಹುದಾದಂತಹ ವಾತಾವರಣ ನಿರ್ಮಾಣವಾಗುತ್ತಿದೆ. ಭೂಮಿ, ಗಣಿ, ಲಿಕ್ಕರ್, ಗ್ರಾನೈಟ್ ಮಾಫಿಯಾಕ್ಕೆ ಸೇರಿದ ವ್ಯಕ್ತಿಗಳು ಹಣ ಹಂಚಿ ಗೆದ್ದವರಿಂದ ಕ್ಷೇತ್ರದ ಅಭಿವೃದ್ಧಿ ಜನಪರ ನೀತಿಗಳನ್ನು ಹೇಗೆ ನಿರೀಕ್ಷಿಸಲು ಸಾಧ್ಯ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅತ್ಯಂತ ಅಪಾಯಕಾರಿ ಸನ್ನಿವೇಶ ಎಂದರು.

'ಕಪ್ಪು ಚುಕ್ಕೆ ಹೋಗಲಾಡಿಸಿ'

ಬಾಗೇಪಲ್ಲಿ ಕ್ಷೇತ್ರದಲ್ಲಿ ಈ ಹಿಂದೆ ಆಯ್ಕೆಯಾದ ಶಾಸಕರು ಕಳೆದ ಐದು ವರ್ಷಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಯಾವೊಂದು ಗಮನಾರ್ಹ ಕೆಲಸವನ್ನೂ ಮಾಡಿಲ್ಲ. ಅದಕ್ಕೆ ಸಾಕ್ಷಿ ದಕ್ಷ್–ಎಡಿಆರ್ ನಡೆಸಿದ ಸಮೀಕ್ಷೆಯಲ್ಲಿ ಶಾಸಕರು ಕೆಲಸಗಳಲ್ಲಿ ರಾಜ್ಯದ ಕೊನೆಯ ಸ್ಥಾನದಲ್ಲಿರುವ ಮೂಲಕ ಕ್ಷೇತ್ರದ ಜನತೆಯ ಗೌರವವನ್ನು ರಾಜ್ಯದಲ್ಲಿ ಹರಾಜಾಕಿದ್ದಾರೆ. ಬಾಗೇಪಲ್ಲಿಗೆ ಸಾಕಷ್ಟು ಹಣ ತೆಗೆದುಕೊಂಡು ಹೋದರೆ ಯಾರೂ ಬೇಕಾದರೂ ಶಾಸಕರಾಗಬಹುದು ಎಂದು ಕಪ್ಪುಚುಕ್ಕೆ ಕ್ಷೇತ್ರದ ಮೇಲೆ ಬಿದ್ದಿದೆ. ಇದನ್ನು ಹೋಗಲಾಡಿಸಬೇಕು ಎಂದರು. ಈ ಹಿಂದೆ ಸಿಪಿಐಎಂ ಶಾಸಕನಾಗಿ ಎರಡು ಬಾರಿ ಆಯ್ಕೆಯಾಗಿದ್ದಾಗ ಮಾಡಿದ ಶಾಲೆ, ಕಾಲೇಜು, ಎರಡು ಅಣೆಕಟ್ಟುಗಳು, ರಸ್ತೆಗಳು, ಮನೆ, ನಿವೇಶನ ಮುಂತಾದ ಅಭಿವೃದ್ಧಿ ಕೆಲಸಗಳೇ ಇಂದಿಗೂ ಬಾಗೇಪಲ್ಲಿಯಲ್ಲಿ ಶಾಶ್ವತವಾಗಿ ಉಳಿದುಕೊಂಡಿವೆ ಎಂದರು. ಈ ಹಿಂದೆ ನಾನು ಶಾಸಕನಾಗಿದ್ದಾಗ 11 ಸಾವಿರ ಜನರಿಗೆ ಭೂಮಿಯನ್ನು ಹಂಚಲು ಸಾಧ್ಯವಾಗಿದೆ. ಆದರೆ ಈ ಅವದಿಯಲ್ಲಿ ಶಾಸಕರು ಒಬ್ಬ ಬಗರ್‌ಹುಕುಂ ಸಾಗುವಳಿದಾರನಿಗೂ ಹಕ್ಕುಪತ್ರವನ್ನು ನೀಡಲು ಸಾಧ್ಯವಾಗಿಲ್ಲ ಎಂದು ದೂರಿದರು.



ಸಮಾವೇಶದಲ್ಲಿ ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿಯವರು ಮಾತನಾಡಿ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಮತ್ತು ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಎರಡೂ ಪಕ್ಷಗಳು ಅತ್ಯಂತ ಜನ ವಿರೋಧಿಯಾಗಿ ಕೆಲಸಮಾಡುತ್ತಿವೆ. ಇವುಗಳಿಂದ ಯಾವುದೇ ಕಾರಣಕ್ಕೂ ಜನಸಾಮಾನ್ಯರ ಏಳಿಗೆ ಸಾಧ್ಯವಿಲ್ಲ. ಕಮ್ಯುನಿಸ್ಟ್ ಪಕ್ಷಗಳು ಮಾತ್ರ ನಿರಂತರವಾಗಿ ಜನರ ನಡುವೆ ಇದ್ದು ಅವರ ಪ್ರಶ್ನೆಗಳ ಆಧಾರದಲ್ಲಿ ಚಳುವಳಿಗಳನ್ನು ರೂಪಿಸುತ್ತ ಅವರ ಹಕ್ಕುಗಳಿಗಾಗಿ ಹೋರಾಡುತ್ತುವೆ ಮತ್ತು ಸಂಸತ್, ವಿಧಾನ ಸಭೆಗಳಲ್ಲಿ ಜನರ ಬಗ್ಗೆ ಧ್ವನಿ ಎತ್ತುತ್ತಿವೆ. ಹಾಗಾಗಿ ಇಂದಿನ ವಿಧಾನ ಸಭಾ ಚುನಾವಣೆಯಲ್ಲಿ ರಾಜ್ಯದ ರಾಜಕಾರಣದಲ್ಲಿ ಬಾಗೇಪಲ್ಲಿಯಿಂದ ಸಿಪಿಐಎಂ ಶಾಸಕರನ್ನು ಕಳುಹಿಸಿಕೊಡುವುದರ ಮೂಲಕ ಮಹತ್ತರ ಪಾತ್ರ ವಹಿಸಬೇಕು ಎಂದು ಮನವಿ ಮಾಡಿದರು.

ಸಮಾವೇಶದಲ್ಲಿ ಸಿಐಟಿಯು ರಾಜ್ಯ ಹಿರಿಯ ಉಪಾಧ್ಯಕ್ಷರಾದ ವಿ.ಜೆ.ಕೆ.ನಾಯರ್ ಮಾತನಾಡಿದರು. ಕರ್ನಾಟಕ ಜನಪದ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಪಿಚ್ಚಳ್ಳಿ ಶ್ರೀನಿವಾಸ್ ಕ್ರಾಂತಿಕಾರಿ ಹಾಡುಗಳನ್ನು ಹಾಡಿ ಮಾತನಾಡಿದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ ವಿ.ಗೀತಾ ಹಾಗು ಪಕ್ಷದ ಸ್ಥಳೀಯ ಮುಖಡರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಮಾವೇಶದ ಅಧ್ಯಕ್ಷತೆಯನ್ನ ಪಕ್ಷದ ಜಿಲ್ಲಾ ಕಾರ್ಯದರ್ಶಿ ಜಯರಾಮರೆಡ್ಡಿ ವಹಿಸಿದ್ದರು, ಸ್ವಾಗತವನ್ನು ಪಕ್ಷದ ಬಾಗೇಪಲ್ಲಿ ತಾಲ್ಲೂಕು ಕಾರ್ಯದರ್ಶಿ ಚನ್ನರಾಯಪ್ಪ, ವಂದನಾರ್ಪಣೆಯನ್ನು ಪಕ್ಷದ ಗುಡಿಬಂಡೆ ತಾಲ್ಲೂಕು ಕಾರ್ಯದರ್ಶಿ ಎಚ್.ಪಿ.ಲಕ್ಷ್ಮಿನಾರಾಯಣ ಮತ್ತು ನಿರೂಪಣೆಯನ್ನು ಆಂಜನಯ್ಯರೆಡ್ಡಿ ನರವೇರಿಸಿದರು.

ಕಾರ್ಯಕ್ರಮ ಮುಕ್ತಾಯವಾಗುವುದು ಸಂಜೆ 5 ಗಂಟೆಯಾದರೂ ಕ್ರಿಡಾಂಗಣದಲ್ಲಿ ನೆರೆದಿದ್ದ ಯಾರೊಬ್ಬರೂ ಆಚೆ ಈಚೆ ಕದಲಲಿಲ್ಲ ಇದು ಮತ್ತೆ ಮತ್ತೆ ಇವರುಗಳಿಗೆ ಪಕ್ಷದ ಮೇಲಿರುವ ಪ್ರೀತಿ ಮತ್ತು ಅಭಿಮಾನವನ್ನ ತೋರಿಸುತ್ತಿತ್ತು. ಈ ಸಮಾವೇಶದೊಂದಿಗೆ ಸಿಪಿಐ(ಎಂ) ಭರದಿಂದ ತನ್ನ ಚುನಾವಣಾ ಪ್ರಚಾರ ಆರಂಭಿಸಿದೆ.

ಕೆಂಪು–ನೀಲಿ–ಹಸಿರು ಒಂದಾಗಿ ಹೋರಾಡಬೇಕು: ಗದ್ದರ್

ಪ್ರಜಾಕವಿ ಗದ್ದರ್ ಈ ರಾಜಕೀಯ ಸಮಾವೇಶದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಇವರ ಜೊತೆಗೆ ತೆಲಂಗಾಣದ ಪ್ರಜಾನಾಟ್ಯ ಮಂಡಳಿಯ ಕಲಾತಂಡ ಜೊತೆಯಾಗಿ ಜಾಗೃತಿ ಮೂಡಿಸುವ ಕ್ರಾಂತಿಗೀತೆಗಳು ಮತ್ತು ನಾಟಕವನ್ನು ಪ್ರದರ್ಶಿಸಿದರು. ಗದ್ದರ್ ವೇದಿಕೆಯ ಮೇಲೆ ನಿಂತರೆ ಸಾಕು ಜನ ಅವರನ್ನು ಸಂಭ್ರಮದಿಂದ ಸ್ವೀಕರಿಸುತ್ತಿದ್ದ ಪರಿಯನ್ನು ನೋಡಿದರೆ ನೆರದಿದ್ದ ಜನರಲ್ಲಿರುವ ಆ ಉತ್ಕಟ ಕ್ರಾಂತಿಕಾರಿ ಭಾವನೆ ವ್ಯಕ್ತವಾಗುತ್ತಿತ್ತು. ಗದ್ದರ್ ಮಾತನಾಡುತ್ತಾ ಎಡಪಕ್ಷಗಳು ಒಂದಾಗಿ ಕ್ರಾಂತಿಕಾರಿ ಹೋರಾಟಕ್ಕೆ ತೊಡಗಬೇಕು. ಕೆಂಪು–ನೀಲಿ–ಹಸಿರು ಬಾವುಟ ಒಂದಾಗಿ ಹೋರಾಡಬೇಕು ಎಂಬ ಆಶಯ ವ್ಯಕ್ತಪಡಿಸಿದರು.





ಆರೆಸ್ಸೆಸ್‌ನ 'ಸೈದ್ಧಾಂತಿಕ ವಿಜಯ'ದ ನಿಜಸ್ವರೂಪ

ಪುಟ 8 ರಿಂದ

ದೇಶಗಳ ಮೇಲೆ, ಗಾಂಧೀಜಿಯಿಂದ ನೆಹರೂ ವರೆಗೆ, ಭಗತ್‌ಸಿಂಗ್‌ರಿಂದ ರವೀಂದ್ರನಾಥ ಟಾಗೋರ್ ವರೆಗೆ ಇಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಆಳವಾದ ಪ್ರಭಾವ ಬೀರಿದ್ದ ಘಟನೆ.

ಭಗತ್ ಸಿಂಗ್ ಎಷ್ಟೊಂದು ಆಳವಾಗಿ ಲೆನಿನ್‌ರಿಂದ ಪ್ರಭಾವಿತರಾಗಿದ್ದರೆಂದರೆ ಅವರು ನೇತೃತ್ವ ನೀಡಿದ ನೌಜವಾನ್ ಸಭಾದಿಂದ ಹಿಡಿದು ಹಿಂದುಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್, ನಂತರ ಹಿಂದುಸ್ತಾನ್ ಸೋಶಲಿಸ್ಟ್ ರಿಪಬ್ಲಿಕ್ ಅಸೋಸಿಯೇಶನ್‌ವರೆಗೆ ಎಲ್ಲದರ ಪ್ರಣಾಳಿಕೆಗಳಲ್ಲೂ ಅದರ ಛಾಯೆಯನ್ನು ಕಾಣಬಹುದು. ಭಗತ್ ಸಿಂಗ್ ರವರ ಜೀವನ ಚರಿತ್ರೆ ಬರೆದ ಗೋಪಾಲ್ ಟಾಗೋರ್ ಅವರೆಲದಿಗೆ ನಡೆಸಿದ ಕೊನೆಯ ಸಂದರ್ಶನದ ವೇಳೆಯಲ್ಲಿ ತಾನು ಲೆನಿನ್‌ರವರ ಜೀವನದ ಬಗ್ಗೆ ಓದುತ್ತಿದ್ದೇನೆ, ನೇಣುಗಂಬಕ್ಕೆ ಏರುವ ಮೊದಲು ಅದನ್ನೋದಿ ಮುಗಿಸಬೇಕು ಎಂದಿದ್ದರಂತೆ.

ಲೆನಿನ್‌ರ ದೊಡ್ಡ ಅಭಿಮಾನಿಯಾಗಿದ್ದ ರವೀಂದ್ರನಾಥ ಟಾಗೋರ್ ಲೆನಿನ್ ಸಾವಿನ ನಂತರ ರಷ್ಯಾಕ್ಕೆ ಭೇಟಿ ನೀಡಿದರು. "ರಷ್ಯಾಕ್ಕೆ ಬರದಿದ್ದರೆ ನನ್ನ ಜೀವನದ ಯಾತ್ರೆ ಅಪೂರ್ಣವಾಗಿರುತ್ತಿತ್ತು" ಎಂದು ಬರೆದರು.

ಆರೆಸ್ಸೆಸ್ ಮತ್ತು ಅದು ರಚಿಸಿದ ರಾಜಕೀಯ ಮುಖವಾಡಗಳು ಎಂದೂ ಭಾರತದ ಈ ಇತಿಹಾಸದ ಭಾಗವಾಗಿದ್ದವುಗಳಲ್ಲ, ರಾಷ್ಟ್ರೀಯ ಸ್ವಾತಂತ್ರ್ಯ ಸಮರದಲ್ಲಿ ಎಂದೂ ಪಾತ್ರ ವಹಿಸದವುಗಳಲ್ಲ. ಭಾರತದ ಸ್ವಾತಂತ್ರ್ಯದ ಕನಸು ಕಂಡವರಿಗೆ, ಅದಕ್ಕಾಗಿ ತಮ್ಮೆಲ್ಲವನ್ನೂ ತ್ಯಾಗಮಾಡಿದವರಿಗೆ, ರಷ್ಯನ್ ಕ್ರಾಂತಿಯ ಎಷ್ಟು ಅರ್ಥಪೂರ್ಣವಾಗಿತ್ತು ಎಂದು ಹೇಗೆ ತಾನೇ ತಿಳಿಯಲು ಸಾಧ್ಯ?

ಆದರೂ, ಲೆನಿನ್ ಪ್ರತಿಮೆಯ ಧ್ವಂಸ ಆರೆಸ್ಸೆಸ್‌ನಲ್ಲಿ ರಕ್ತಗತವಾಗಿರುವ ಕಮ್ಯುನಿಸ್ಟ್–ವಿರೋಧವನ್ನು ಮಾತ್ರವಲ್ಲ, ಇನ್ನೂ ಹೆಚ್ಚಿನದೊಂದನ್ನು ತೋರಿಸುತ್ತದೆ. ಆರೆಸ್ಸೆಸ್‌ನ ಸಿದ್ಧಾಂತಕ್ಕೆ ವಿರುದ್ಧವಾದ, ಅದಕ್ಕೆ ಸವಾಲು ಹಾಕುವ ಯಾವುದೇ ತತ್ವ –ಸಿದ್ಧಾಂತದ ಬಗ್ಗೆ ಸಂಘಪರಿವಾರದ ವಿಪರೀತ ಅಸಹಿಷ್ಣುತೆಯನ್ನು ಮತ್ತೊಮ್ಮೆ ತೋರಿಸಿದೆ. ಇದು ಲೆನಿನ್ ಮತ್ತು ಅವರ ಪರಂಪರೆಯ ಅಭಿಮಾನಿಗಳು ಮಾತ್ರವಲ್ಲ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ರಾಜಕೀಯ ಚರ್ಚೆಯಲ್ಲಿ ನಂಬಿಕೆಯಿರುವವರೂ ಹುಬ್ಬೇರಿಸುವಂತೆ ಮಾಡಿದೆ. ಆ ಅತಿರೇಕದ ವಿರುದ್ಧ ಆಕ್ರೋಶ ಸಾಕಷ್ಟು ಬಲಯುತವಾಗಿರದಿದ್ದರೆ ಅದು ಲೆನಿನ್ ಪ್ರತಿಮೆಗೇ ನಿಲ್ಲುವುದಿಲ್ಲ.

ಈಗಾಗಲೇ ಬೇರೆಡೆಗಳಲ್ಲಿ ಬಿಜೆಪಿ ಮುಖಂಡರು ಇದನ್ನು ಅನುಸರಿಸುವ ಬಗ್ಗೆ ಯೋಚಿಸುತ್ತಿದ್ದಾರೆ. ತಮಿಳುನಾಡಿನಲ್ಲಿ ಬಿಜೆಪಿ ಮುಖಂಡ ಫೇಸ್‌ಬುಕ್‌ನಲ್ಲಿ "ಇಂದು ತ್ರಿಪುರಾದಲ್ಲಿ ಲೆನಿನ್, ನಾಳೆ ತಮಿಳುನಾಡಿನಲ್ಲಿ ಜಾತಿವಾದಿ ಪೆರಿಯಾರ್ ಪ್ರತಿಮೆ" ಎಂದು ಬರೆದಿದ್ದಾರಂತೆ. ದ್ರಾವಿಡ ಆಂದೋಲನದ ಸಿದ್ಧಾಂತಿ ಮತ್ತು ಸಾಮಾಜಿಕ ಸುಧಾರಕ ಪೆರಿಯಾರ್ ಅವರ ಪರಂಪರೆ ಮನುವಾದದ ಮೇಲೆ ನಿಂತಿರುವ ಸಂಘ ಪರಿವಾರದ ಹಿಂದುತ್ವ ಸಿದ್ಧಾಂತಕ್ಕೆ ಸವಾಲಾಗಿರುವಂತದ್ದು. ಆದ್ದರಿಂದಲೇ ಈ ಆಕ್ರಮಣ.

ಬಲಪ್ರಯೋಗದಿಂದ ಪ್ರತಿಮೆಗಳನ್ನು ಧ್ವಂಸಗೊಳಿಸಬಹುದು, ಒಂದು ತತ್ವ–ಸಿದ್ಧಾಂತವನ್ನಲ್ಲ.

ಆಳುವ ಪಕ್ಷಕ್ಕೆ ಯಾವ ರೀತಿಯ ಪ್ರತಿಮೆಗಳು ಬೇಕು ಎಂಬುದು ನಮಗೆ ಗೊತ್ತಿದೆ. ಬ್ರಿಟಿಶರಿಗೆ ತಮ್ಮ ವಿಧೇಯತೆಯ ಪಣ ತೊಟ್ಟು ಜೈಲು ಶಿಕ್ಷೆ ನೀಡದಂತೆ ಕ್ಷಮೆ ಯಾಚಿಸಿದವರ ಪ್ರತಿಮೆ, ಒಂದು ಹುಸಿ ಮಾನವತಾವಾದದ ಹೆಸರಿನಲ್ಲಿ ಭಾರತ ಎಂದೂ ಒಂದಾಗದು ಎಂದವರ ಪ್ರತಿಮೆ, ಮತ್ತು ತೀರಾ ಇತ್ತೀಚೆಗೆ, ಮಹಾತ್ಮ ಗಾಂಧೀಜಿಯನ್ನು ಕೊಂದವನ ಪ್ರತಿಮೆ. ಹಿಂದೂ ಮಹಾಸಭಾ ತನ್ನ ಕಚೇರಿಗಳಲ್ಲಿ ಮತ್ತು ತನ್ನ ಹತೋಟಿಯಲ್ಲಿರುವ ದೇವಸ್ಥಾನಗಳಲ್ಲಿ ನಾಥುರಾಂ ಗೋಡ್ಸೆಯ ಪ್ರತಿಮೆಗಳನ್ನು ಸ್ಥಾಪಿಸುವ ಅಸಹ್ಯಕರ ಯೋಜನೆಯನ್ನು ಹಾಕಿರುವುದನ್ನು ಯಾವುದಾದರೂ ಬಿಜೆಪಿ ಮುಖಂಡ ವಿರೋಧಿಸಿದ್ದಾರೆಯೇ?

ತ್ರಿಪುರಾದ ಹೊಸದಾಗಿ ಚುನಾಯಿತವಾದ ಸರಕಾರ ಲೆನಿನ್ ಪ್ರತಿಮೆಯನ್ನು ರಿಪೇರಿ ಮಾಡಬೇಕು, ಎಲ್ಲಿಂದ ಅದನ್ನು ಬೀಳಿಸಲಾಯಿತೋ ಅಲ್ಲಿಯೇ ಮತ್ತೆ ಸ್ಥಾಪಿಸಬೇಕು. ಅದು ಎಡ ಬೆಂಬಲಿಗರ ಮೇಲೆ ಹರಿಯಬಿಟ್ಟಿರುವ ಹಿಂಸಾಚಾರವನ್ನು ನಿಲ್ಲಿಸಬೇಕು. ಬಲಪ್ರಯೋಗದಿಂದ ಪ್ರತಿಮೆಗಳನ್ನು ಧ್ವಂಸಗೊಳಿಸಬಹುದು, ಒಂದು ತತ್ವ–ಸಿದ್ಧಾಂತವನ್ನಲ್ಲ.

ಇದು ಈಶಾನ್ಯ ಮಾರುತ!

ಈ ವಿಧಾನಸಭಾ ಚುನಾವಣೆಗಳಲ್ಲಿ ಮೋದಿಯವರ ಪ್ರಚಂಡ ಈಶಾನ್ಯ ಮಾರುತ ಬೀಸಿದೆ ಎಂದು ಮಾಧ್ಯಮಗಳು ಹಾಡಿ ಹೊಗಳುತ್ತಿವೆ. ನಿಜವೇ? ಅದರ ನಿಜಸ್ವರೂಪ ಇಲ್ಲಿದೆ.

ಮೂರು ರಾಜ್ಯಗಳಲ್ಲಿ ಒಟ್ಟು 177 ಕ್ಷೇತ್ರಗಳಲ್ಲಿ ನಡೆದ ಒಟ್ಟು ಮತದಾನ	49,04,296
ಬಿಜೆಪಿಗೆ ಸಿಕ್ಕಿದ್ದು	49 ಸೀಟುಗಳು
ಅಂದರೆ	27.68%
ಒಟ್ಟು ಮತಗಳು	13,04,174
ಅಂದರೆ	26.59%.

ಇವೆರಡರಲ್ಲೂ ತ್ರಿಪುರಾದ್ದೇ ಸಿಂಹಪಾಲು ಎಲ್ಲವೂ ಸ್ಥಳೀಯ/ಪ್ರತ್ಯೇಕತಾವಾದಿ ಶಕ್ತಿಗಳೊಡನೆ ಕೈಜೋಡಿಸಿದ್ದರಿಂದ. ರಾಜ್ಯವಾರು ವಿವರಹೀಗಿದೆ:

ಪಕ್ಷ	ಗೆದ್ದ ಸಿಟುಗಳು	%ಮತ
ಮೇಘಾಲಯ		
ಕಾಂಗ್ರೆಸ್	21	28.5
ಎನ್‌ಪಿಪಿ	19	20.6
ಯುಡಿಪಿ	6	11.6
ಪಿಡಿಎಫ್	4	8.2
ಬಿಜೆಪಿ	**2**	**9.6**
ಹೆಎಸ್‌ಪಿಡಿಪಿ	2	5.3
ಎನ್‌ಸಿಪಿ	1	1.6
ಕೆಹೆಚ್‌ಎನ್‌ಎಎಂ	1	0.9
ಪಕ್ಷೇತರರು	3	
ನಾಗಾಲ್ಯಾಂಡ್		
ಎನ್‌ಪಿಎಫ್	27	38.8
ಎನ್‌ಡಿಪಿಪಿ	16	25.2
ಬಿಜೆಪಿ	**12**	**15.3**
ಎನ್‌ಪಿಪಿ	2	6.9
ಜೆಡಿ(ಯು)	1	4.5
ಪಕ್ಷೇತರರು	1	
ತ್ರಿಪುರಾ		
ಬಿಜೆಪಿ	**35**	**43**
ಐಪಿಎಫ್‌ಟಿ	8	7.5
ಎಡರಂಗ		
ಸಿಪಿಐ(ಎಂ)	16	42.7
ಸಿಪಿಐ	–	0.8
ಆರ್‌ಎಸ್‌ಪಿ	–	0.8
ಫಾರ್ವರ್ಡ್ ಬ್ಲಾಕ್	–	0.6
ಒಟ್ಟು	16	44.9
ಕಾಂಗ್ರೆಸ್	–	1.8
ತೃಣಮೂಲ	–	0.3

ಎಡಶಕ್ತಿಗಳು ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಕ್ರಿಯೆಯಲ್ಲೇ ದೇಶವನ್ನು ರಕ್ಷಿಸಬೇಕಾಗಿದೆ

ಕೋಮುಗಲಭೆಗಳ,ಸುಳ್ಳು ಸುದ್ದಿಗಳ, 'ರಾಷ್ಟ್ರದ ಶತ್ರು'ಗಳ ಸೃಷ್ಟಿ ಇತ್ಯಾದಿಗಳ ಮೂಲಕ ಮತದಾನರ ವರ್ತನೆಯನ್ನು ತನಗೆ ಅನುಕೂಲವಾಗುವಂತೆ ತಿರುಗಿಸಿ ಸೋಲುವ ಸಂದರ್ಭಗಳನ್ನೂ ಗೆಲುವಿನ ಸಂದರ್ಭಗಳಾಗಿ ಬದಲಿಸುವ ಹಿಂದುತ್ವ ಶಕ್ತಿಗಳ ಸಾಮರ್ಥ್ಯವನ್ನು ಕೀಳಂದಾಜು ಮಾಡಲು ಸಾಧ್ಯವಿಲ್ಲ.–ಪ್ರೊ. ಪ್ರಭಾತ್ ಪಟ್ನಾಯಕ್

ತ್ರಿಪುರಾ ಚುನಾವಣಾ ತೀರ್ಪಿನಿಂದ ಎರಡು ಸ್ಪಷ್ಟ ತೀರ್ಮಾನಗಳು ಹೊಮ್ಮುತ್ತವೆ. ಒಂದು, ಯಾವುದೇ ರಾಜ್ಯದಲ್ಲಿ ಅಧಿಕಾರದಲ್ಲಿರುವ ಒಂದು ಪ್ರತಿಪಕ್ಷ ಬಿಜೆಪಿಯ ಪ್ರಹಾರಗಳನ್ನು ಎದುರಿಸುವುದು ವಿಪರೀತ ಕಷ್ಟಕರವಾಗುತ್ತಿದೆ. ಈ ಪಕ್ಷ ತನ್ನ ಒಳ್ಳೇ ಹಣಕಾಸು ಭರಿತ ಚುನಾವಣಾ ಪ್ರಯತ್ನವನ್ನು ಮತ್ತಷ್ಟು ಪುಷ್ಟಿಗೊಳಿಸಲು ತನ್ನ ಕೇಂದ್ರ ಸರಕಾರದ ಬಲವನ್ನು ತುಂಬಿಸಿಕೊಂಡು ಚುನಾವಣಾ ಅಖಾಡಕ್ಕೆ ಇಳಿಯುತ್ತದೆ.

ನಿಜ, ಮಾಣಿಕ್ ಸರ್ಕಾರ್ ಸರಕಾರವನ್ನು ಅದರ ಕೊನೆಯ ಅಧಿಕಾರಾವಧಿಯಲ್ಲಿ ಒಂದು ಹಣಕಾಸು ಹಿಂಡಿಕೆಯ ಮೂಲಕ ಕುಂಠಿತಗಳಿಸಲಾಯಿತು. ಇದು ಕೇಂದ್ರದ ದುರುದ್ದೇಶಪೂರಿತ ಜಿಪುಣತನದಿಂದ ಮಾತ್ರವಲ್ಲ, ತ್ರಿಪುರಾಕ್ಕೆ ತೀವ್ರ ಅನ್ಯಾಯ ಮಾಡಿದ ಹಣಕಾಸು ಆಯೋಗಗಳ ಶಿಫಾರಸುಗಳ ಮೂಲಕವೂ ಈ ಹಿಂಡಿಕೆ ನಡೆದಿದೆ. ಒಂದು ಪ್ರತಿಪಕ್ಷ ನಡೆಸುವ ಸರಕಾರ ಬಿಜೆಪಿ ತನ್ನ ಅಪಾರ ಸಂಪನ್ಮೂಲಗಳು ಮತ್ತು ತನ್ನ ಹತೋಟಿಯಲ್ಲಿರುವ ಕೇಂದ್ರ ಸರಕಾರದ ಕುತಂತ್ರಗಳ ಮೂಲಕ ತದೇಕಚಿತ್ತದಿಂದ ನಡೆಸುವ ಪ್ರಯತ್ನಗಳ ಎದುರು ಬದುಕುಳಿಯುವುದು ಕಷ್ಟಸಾಧ್ಯವಾಗುತ್ತಿದೆ.

ಎರಡನೆಯದಾಗಿ, ಸುಮಾರಾಗಿ ಪ್ರತಿಯೊಂದು ರಾಜ್ಯದಲ್ಲಿ ರಾಜಕಾರಣ ಬಿಜೆಪಿ ಮತ್ತು ಒಂದು ಬಿಜೆಪಿ–ವಿರೋಧಿ ಶಕ್ತಿಯ ನಡುವೆ ಧ್ರುವೀಕರಣ ಹೊಂದುತ್ತಿದೆ. ಮತದಾರರು ಬಿಜೆಪಿಯನ್ನು ಬೆಂಬಲಿಸುವುದು ಅಥವ ಅದನ್ನು ಅಧಿಕಾರದಿಂದ ಹೊರಗಿಡುವುದು ಇವೆರಡೇ ತಮ್ಮೆದುರು ಇರುವ ರಾಜಕೀಯ ಆಯ್ಕೆಯೆಂದು ಕಾಣುತ್ತಿದ್ದಾರೆ.

ಈ ಪ್ರವೃತ್ತಿ ಮುಂದುವರೆದರೆ ಅಂತಿಮ ಪರಿಣಾಮವೆಂದರೆ ಬಿಜೆಪಿ ಏಕಮಾತ್ರ ಸರ್ವವ್ಯಾಪಿ ರಾಷ್ಟ್ರೀಯ ಪಕ್ಷವಾಗುತ್ತದೆ, ಈ ಮೂಲಕ ಒಂದು ಪ್ರತಿಪಕ್ಷ–ಮುಕ್ತ ಭಾರತವನ್ನು ಸೃಷ್ಟಿಸುವ ಅದರ ಬಹಿರಂಗ ಗುರಿ ಈಡೇರುತ್ತದೆ, ಆಗ ಒಂದು ಹಿಂದೂರಾಷ್ಟ್ರ ಕಟ್ಟುವುದು ಅದಕ್ಕೆ ಕಷ್ಟದ ಕೆಲಸವೇನಲ್ಲ ಎಂದು ಬೇರೆ ಹೇಳಬೇಕಾಗಿಲ್ಲ.

ಈ ಅಂತಿಮ ಪರಿಣಾಮದ ಅಪಾಯವನ್ನು ಉತ್ಪ್ರೇಕ್ಷಿಸಿ ಹೇಳುತ್ತಿದ್ದೇವೆಯೋ ಎಂದು ಪ್ರಶ್ನಿಸಬಹುದು..........

ಆದರೆ ಕಳವಳಕ್ಕೆ ಹಲವು ಕಾರಣಗಳಿವೆ.... ಮತದಾನದ ವರ್ತನೆಯನ್ನು ತನಗೆ ಅನುಕೂಲವಾಗುವಂತೆ ತಿರುಗಿಸಿ ಸೋಲುವ ಸಂದರ್ಭಗಳನ್ನೂ ಗೆಲುವಿನ ಸಂದರ್ಭಗಳಾಗಿ ಬದಲಿಸುವ ಹಿಂದುತ್ವ ಶಕ್ತಿಗಳ ಸಾಮರ್ಥ್ಯವನ್ನು ಕೀಳಂದಾಜು ಮಾಡಲು ಸಾಧ್ಯವಿಲ್ಲ. ಇದರಲ್ಲಿ ಕೋಮುಗಲಭೆಗಳನ್ನು ನಡೆಸುವುದು, ಸುಳ್ಳು ಊಹಾಪೋಹಗಳನ್ನು ಹರಡುವುದು, ಮತ್ತು ಒಂದಿಲ್ಲೊಂದು 'ರಾಷ್ಟ್ರದ ಶತ್ರು'ವಿನ ವಿರುದ್ಧ 'ಮಿಂಚಿನ ಪ್ರಹಾರ'ಗಳ ಸುದ್ದಿಯನ್ನು ಸೃಷ್ಟಿಸುವುದು ಇತ್ಯಾದಿ ಸೇರಿರುತ್ತವೆ.

ಅಲ್ಲದೆ, ಮೂರನೆಯದಾಗಿ, ಸಂಸದೀಯ ಪ್ರತಿಪಕ್ಷಗಳು ಪ್ರತಿರೋಧ ಒಡ್ಡದೆ ಅದು ಜನಪ್ರಿಯತೆ ಕಳಕೊಳ್ಳುವ ವರೆಗೆ 'ದೀರ್ಘಕಾಲ'ದ ವರೆಗೆ ಕಾಯೋಣ ಎಂದು ಕೂತರೆ, ಅವರಿಗೆ ವಿರುದ್ಧವಾದ ಅದರ ಪ್ರತಿಸ್ಪರ್ಧಿ ಫ್ಯಾಸಿಸಂನ ಸಂಸದೇತರ ಶಕ್ತಿಗಳು ಎದ್ದು ಬರಬಹುದು. ಆಗ ದೇಶ ದುಷ್ಟ ತಿಕ್ಕಾಟಗಳಿಂದ ಚಿಂದಿಯಾಗಬಹುದು.

ಆದ್ದರಿಂದ ಮಧ್ಯಪ್ರವೇಶ ವಿಳಂಬವಿಲ್ಲದೆ ಈಗಲೇ ಆಗಬೇಕಾಗಿದೆ. ಬಿಜೆಪಿಯ ಪ್ರಹಾರಗಳಿಂದ ಅಂಜಿಗೆ ತಳ್ಳಲ್ಪಡುತ್ತಿರುವ ಎಡಶಕ್ತಿಗಳು ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಕ್ರಿಯೆಯಲ್ಲೇ ದೇಶವನ್ನು ರಕ್ಷಿಸಬೇಕಾಗಿದೆ. ಸಮಾಜದ ಎಲ್ಲ ಜಾತ್ಯತೀತ, ಪ್ರಜಾಪ್ರಭುತ್ವವಾದಿಗಳನ್ನು ಅಣಿನೆರೆಸಬೇಕಾಗಿದೆ.

ನಿಜ, ಹಲವು ಪಕ್ಷಗಳು ಬೇಕಾಬಿಟ್ಟಿಯಾಗಿ ಒಂದುಗೂಡಿದರೆ ಜನರ ಎದುರು ಅವರು ವಿಶ್ವಾಸಾರ್ಹರಾಗುವುದಿಲ್ಲ. ಜಾತ್ಯತೀತ, ಪ್ರಜಾಪ್ರಭುತ್ವವಾದಿ ಪಕ್ಷಗಳು ಕಾರ್ಯಸಾಧ್ಯವಾದ ಒಂದು ಸಮಾನ ಕನಿಷ್ಠ ಕಾರ್ಯಕ್ರಮದ ಮೇಲೆ ಒಟ್ಟುಗೂಡಬೇಕಾಗಿದೆ. ಈ ಕಾರ್ಯಕ್ರಮದಲ್ಲಿ ವಿಚಾರಗಳ ಮೇಲೆ ಪ್ರಹಾರದ ಭಯದಿಂದ ಮುಕ್ತಿ, ಕೋಮುವಾದಿ, ಪಾಳೆಯಗಾರೀ, ಜಾತಿವಾದಿ ನಿಲುವುಗಳಿಗೆ ವಿರೋಧ ಮಾತ್ರವೇ ಅಲ್ಲ, ಶಿಕ್ಷಣ, ಉದ್ಯೋಗ ಮತ್ತು ಆರೋಗ್ಯ ಮುಂತಾದ ರಂಗಗಳಲ್ಲಿ ಸಾರ್ವತ್ರಿಕ ಸರಕಾರೀ ಕಲ್ಯಾಣ ಕ್ರಮಗಳೂ ಇರಬೇಕು.

(ಇಂಡಿಯನ್ ಎಕ್ಸ್‌ಪ್ರೆಸ್ ದೈನಿಕದಲ್ಲಿ ಮಾರ್ಚ್ 6 ರಂದು ಪ್ರಕಟವಾದ ಲೇಖನದಿಂದ)

'ಆಪರೇಶನ್ ಧಕ್ಕಾ' ಬಗ್ಗೆ ಎಚ್ಚರದಿಂದಿರಿ– ಗೋಪಾಲಕೃಷ್ಣ ಗಾಂಧಿ, ನಿವೃತ್ತ ರಾಜತಾಂತ್ರಿಕರು, ರಾಜ್ಯಪಾಲರು

ಮಾರ್ಚ್ 5,2018, ಬೆಲೊನಿಯಾ, ತ್ರಿಪುರಾ. ರಷ್ಯನ್ ಕಮ್ಯುನಿಸ್ಟ್ ಕ್ರಾಂತಿಕಾರಿಯ ಪ್ರತಿಮೆಯನ್ನು ಉರುಳಿಸುತ್ತಿರುವಂತೆ ಕೇಸರಿ ಧರಿಸಿದ ಮಂದಿ ಕಿರುಚಿದರು– "ಭಾರತ್ ಮಾತಾಕೀ ಜೈ". ಅದೇ ಲೆನಿನ್ ಬ್ರಿಟಿಶ್ ಸಾಮ್ರಾಜ್ಯಶಾಹಿ ಮತ್ತು ದೇಶೀ ನೊಗಗಳಿಂದ ತನ್ನ ಬಿಡುಗಡೆಗೆ ಹೋರಾಡುತ್ತಿದ್ದ ಅದೇ ಭಾರತದ ಕ್ರಾಂತಿಕಾರಿ ಹುಮ್ಮಸ್ಸನ್ನು ಸ್ವಾಗತಿಸಿದ್ದರು, ಪ್ರಶಂಸಿಸಿದ್ದರು ಎಂದು ಅವರಿಗೆ ಬೇಕಿಲ್ಲ. ಒಂದು ನ್ಯಾಯಯುತ ಭಾರತಕ್ಕಾಗಿ ಹೋರಾಟದ ನೇತೃತ್ವ ವಹಿಸಿದ್ದ ಅವರನ್ನು ಅನುಸರಿಸಿದ್ದ ಹಲವು ತಲೆಮಾರುಗಳಿಗೆ ಆ ಲೆನಿನ್ ಸ್ಫೂರ್ತಿಯಾಗಿದ್ದರು ಎಂಬುದೂ ಅವರಿಗೆ ಬೇಕಿಲ್ಲ. ಈಶಾನ್ಯದ ಆ ರಾಜ್ಯದಲ್ಲಿ 25 ವರ್ಷಗಳ ಸತತ ಆಳ್ವಿಕೆಯ ನಂತರ ಅಧಿಕಾರದಿಂದ ಇಳಿಸಿರುವ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ನೇತೃತ್ವದ ಸರಕಾರಕ್ಕೆ ಆತ ಸ್ಫೂರ್ತಿ ಎಂಬುದಷ್ಟೇ ಅವರಿಗೆ ಬೇಕಾದ್ದು.

ಅದಾದ ಸ್ವಲ್ಪದರಲ್ಲೇ ಆ ರಾಜ್ಯದ ಇನ್ನೊಂದೆಡೆಯಲ್ಲಿ ಎರಡನೇ ಲೆನಿನ್ ಪ್ರತಿಮೆಯನ್ನು ಉರುಳಿಸಲಾಯಿತು. ಉರುಳಿದ ಪ್ರತಿಮೆಯ ರುಂಡವನ್ನು ಫುಟ್‌ಬಾಲ್ ಮಾಡಲಾಯಿತಂತೆ.....ಲಕ್ಷಾಂತರ ಮಂದಿ ಇದನ್ನು ನೋಡಿ ಹೌಹಾರಿದರು– "ತ್ರಿಪುರಾಕ್ಕೆ ಏನಾಯಿತು, ಭಾರತದ ಪ್ರಜಾಪ್ರಭುತ್ವ ಎತ್ತ ಸಾಗಿದೆ?"

ಯೋಚಿಸುವ, ನೆನಪಿಸಿಕೊಳ್ಳುವ ಮನಗಳಲ್ಲಿ ಇತರ ಧ್ವಂಸಗಳು ದ್ವೇಷದ, ಹಿಂಸಾಪೂರ್ಣ ದ್ವೇಷದ ಕುಟುಂಬಕ್ಕೆ ಸೇರಿದ ಧ್ವಂಸಗಳು ಬಿಚ್ಚಿಕೊಳ್ಳುತ್ತಿವೆ. ಬಾಬ್ರಿ ಮಸೀದಿ, ಅಯೋಧ್ಯೆ, ಡಿಸೆಂಬರ್ 6, 1992; ಅಹಮದಾಬಾದಿನ ಪೊಲಿಸ್‌ಕಮಿಶನರ್ ಕಚೇರಿಯ ಹೊರಗೇ ಇರುವ ವಾಲಿದಖಿಣಿ ಮಝಾರ್, ಮಾರ್ಚ್ 1, 2002; ನಂತರ ಆರು ದನಗಳ ಕಾಲ ಗುಜರಾತಿನ ಅಂದಾಜು 272 ಅಲ್ಪಸಂಖ್ಯಾತ ಪೂಜಾಸ್ಥಳಗಳು; ಸಂತ ಸಬಾಶಿಯನ್ ಚರ್ಚ್, ದಿಲ್ಷಾದ್ ಬಾಗ, ದಿಲ್ಲಿ, 2014 ಕ್ರಿಸ್ಮಸ್ ಮುನ್ನಾದಿನ.

"ಏಕ್ ಧಕ್ಕಾ ಜೋರ್‌ಸೆ"(ಇನ್ನೊಂದು ಏಟು, ಗಟ್ಟಿಯಾಗಿ ತಳ್ಳಿ)–ಬಾಬ್ರಿ ಮಸೀದಿ ಧ್ವಂಸದ ವೇಳೆ ಕೇಳಬಂದ ಪ್ರಚೋದಕ ಕೂಗು. ಈ ಧ್ವಂಸಗಳ ಪಟ್ಟಿಯನ್ನು ಒಟ್ಟಾಗಿ 'ಆಪರೇಶನ್ ಧಕ್ಕಾ' ಎನ್ನಬಹುದು.

ಈ ಸ್ನಾಪ್‌ಶಲ್ ತುಣುಕಿಗೆ ಏನೆನ್ನಬೇಕು? ಭಾರತದ ಜನಮಾನಸ ಈಗ ಬುಲ್‌ಡೋಝರ್‌ನಿಂದ ಸಂತುಷ್ಟವಾಗಿದೆ ಎಂದೇ? 'ಆ 'ಬೇರೆ'ಯವರನ್ನು ಕತ್ತರಿಸುವ, ಚಚ್ಚುವ, ನಾಶಪಡಿಸುವ ಅಲಗುಗಳನ್ನು ಅನುಮೋದಿಸುತ್ತದೆ ಎಂದೇ? ...

ಈ ವಿಧ್ವಂಸಕ ಕೃತ್ಯಕ್ಕೆ ದೇಶಾದ್ಯಂತ ಬಂದಿರುವ ಸ್ಪಂದನ ಈ ನಿರಾಶಾಪೂರ್ಣ ಪ್ರಮೇಯವನ್ನು ತಿರಸ್ಕರಿಸಿತು. ಪ್ರತಿಕ್ರಿಯೆಗಳು ಎಷ್ಟು ತ್ವರಿತವಾಗಿ ಬಂದವೆಂದರೆ, 'ಲೆನಿನ್ ಇಂದು, ಪೆರಿಯಾರ್ ನಾಳೆ' ಎಂದು ಟ್ವೀಟ್ ಮಾಡಿದ ಭಾರತೀಯ ಜನತಾ ಪಾರ್ಟಿಯ ಪದಾಧಿಕಾರಿಎಂತಹ ಮಿಂಚಿನ ವೇಗದಲ್ಲಿ ಆ ಟ್ವೀಟ್ ಮಾಡಿದರೋ, ಅಷ್ಟೇ ವೇಗದಲ್ಲಿ ಅದನ್ನು ಹಿಂತೆಗೆದುಕೊಳ್ಳಬೇಕಾಯಿತು.

(ದಿ ಹಿಂದು, ಮಾರ್ಚ್ 8 ರಂದು ಪ್ರಕಟಿಸಿದ ಲೇಖನದ ಆರಂಭದ ಭಾಗದಿಂದ)

ವಾಸುದೇವ್ ಉಚ್ಚಿಲ್





DAKSHINA KANNADA

ಕರ್ನಾಟಕ ವಿಧಾನಸಭೆ ಚುನಾವಣೆಗಳಿಗೆ ಇನ್ನು ಕೆಲವೇ ವಾರಗಳಿವೆ. ಏಪ್ರಿಲ್ ಕೊನೆಯ ವಾರದಲ್ಲಿ ಅಥವಾ ಮೇ ಮೊದಲ ವಾರದಲ್ಲಿ ಚುನಾವಣೆ ಜರುಗಲಿದೆ. ಈ ಚುನಾವಣೆಗಳಿಗೆ ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸುವ ಮತ್ತು ರಾಜ್ಯದ ಭವಿಷ್ಯತ್ತನ್ನೂ ರೂಪಿಸುವ ದೃಷ್ಟಿಯಿಂದ ವಿಶೇಷ ಮಹತ್ವವಿದೆ. ಮಾತ್ರವಲ್ಲ, ಮುಂಬರುವ 2019 ಚುನಾವಣೆಗಳು ಮತ್ತು ಅದರತ್ತ ರಾಷ್ಟ್ರೀಯ ಮಟ್ಟದ ರಾಜಕೀಯ ಬೆಳವಣಿಗೆಗಳ ದೃಷ್ಟಿಯಿಂದಲೂ ಮಹತ್ವಪೂರ್ಣ. ಕಾಂಗ್ರೆಸ್–ಮುಕ್ತ ಮತ್ತು ಎಲ್ಲಾ ವಿರೋಧ ಪಕ್ಷ–ಮುಕ್ತ ಭಾರತ ನಿರ್ಮಾಣ ಮಾಡುವ ಮತ್ತು ದಕ್ಷಿಣ ಭಾರತದಲ್ಲಿ ಕಾಲೂರಿ ಇಲ್ಲೂ ಯಜಮಾನಿಕೆ ಸ್ಥಾಪಿಸುವ ಆಸೆ ಹೊತ್ತ ಬಿಜೆಪಿಗಂತೂ ಇದು ಆದ್ಯತೆಯ ಚುನಾವಣೆ. ಪಂಜಾಬು ಬಿಟ್ಟರೆ ಯಾವುದೇ ಪ್ರಮುಖ ರಾಜ್ಯದ ಆಡಳಿತ ಹೊಂದಿರದ ಕಾಂಗ್ರೆಸಿಗಂತೂ ಇದು ಜೀವನ್ಮರಣದ ಪ್ರಶ್ನೆ. 2019ರ ಲೋಕಸಭಾ ಚುನಾವಣೆ ಹೊತ್ತಿಗೆ ಆಳುವ ವರ್ಗಗಳ ಎರಡನೇ ಆಯ್ಕೆಯ ಪಕ್ಷವಾಗಿಯಾದರೂ ಮುಂದುವರೆಯಲು ಕೊನೆಯ ನಿರ್ಣಾಯಕ ಅವಕಾಶ. ಜೆಡಿ(ಎಸ್)ಗಂತೂ ರಾಜ್ಯದಲ್ಲಿ 'ಕಿಂಗ್ ಮೇಕರ್' ಆಗಿಯಾದರೂ ಉಳಿಯುವ ಹರಸಾಹಸ. ಈ ಮೂರು ಪಕ್ಷಗಳ ಹಣ, ತೋಳ್ಬಲದಲ್ಲಿ ಮತ್ತು ಜನಮರುಳು ಪ್ರಚಾರದ ಭರಾಟೆಯಲ್ಲಿ ಪ್ರಜಾಪ್ರಭುತ್ವ ಕೊಚ್ಚಿ ಹೋಗುತ್ತಿರುವ ಅಪಾಯದ ಹಿನ್ನೆಲೆಯಲ್ಲಿ ರಾಜ್ಯದ ಜನತೆಗೆ ವಿಶ್ವಾಸ ಮೂಡಿಸಬಲ್ಲ ಜನಪರ ಪ್ರಗತಿಪರ ಬದಲಿ ಕೊಡುವ ತೀವ್ರ ಸವಾಲು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷ/ಶಕ್ತಿಗಳದ್ದು. ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಸ್ಪರ್ಧಿಸಲಿರುವ ಆಯ್ದ ಕ್ಷೇತ್ರಗಳ ಚುನಾವಣಾ ಪ್ರಕ್ರಿಯೆ ಬಗ್ಗೆ ವಿಶೇಷವಾಗಿ ವರದಿ ಮಾಡಲು 'ಜನಶಕ್ತಿ' ನಿರ್ಣಯಿಸಿದೆ. ಈ ವರದಿಗಳು ಪ್ರಮುಖವಾಗಿ ಮೂರು ಹಂತದ ಸಮೀಕ್ಷೆಗಳನ್ನು ಹೊಂದಿರುತ್ತವೆ. ಇವಲ್ಲದೆ ಕೆಲವು ಕ್ಷೇತ್ರಗಳ ವಿಶೇಷ ವರದಿಗಳು ಪ್ರಕಟವಾಗಲಿವೆ.

ಚುನಾವಣಾ–ಘೋಷಣೆಗೆ ಮೊದಲು: ಕ್ಷೇತ್ರದ ಸಾಮಾಜಿಕ–ಆರ್ಥಿಕ ಪರಿಸ್ಥಿತಿ, ಜನತೆ ಎದುರಿಸುತ್ತಿರುವ ಸಮಸ್ಯೆಗಳು, ಅವನ್ನು ಪರಿಹರಿಸಲು ಹಾಲಿ ಶಾಸಕನ ಪ್ರಯತ್ನಗಳು, ಸಾಫಲ್ಯ–ವೈಫಲ್ಯಗಳು, ಹಾಲಿ ಶಾಸಕನ ಹಗರಣಗಳು, ಈ ಅವಧಿಯಲ್ಲಿ ಹಾಲಿ ಶಾಸಕನ ಆಸ್ತಿ–ಪಾಸ್ತಿಯಲ್ಲಿ ಆದ ಹೆಚ್ಚಳದ ಮಾಹಿತಿ ಇತ್ಯಾದಿಗಳನ್ನು ಒಳಗೊಂಡ ಬರಹಗಳು ಇರುತ್ತವೆ

ಚುನಾವಣಾ–ಘೋಷಣೆ ನಂತರ: ಅಭ್ಯರ್ಥಿಗಳ ಪರಿಚಯ, ಕ್ಷೇತ್ರದ ಜನತೆಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಭ್ಯರ್ಥಿಗಳ ಮತ್ತು ಪಕ್ಷಗಳ ಪ್ರಯತ್ನ–ಸಾಧನೆಗಳ ವಿಮರ್ಶೆ, ಮಾಜಿ ಶಾಸಕರಾಗಿದ್ದ ಅಭ್ಯರ್ಥಿಗಳ ಅವಧಿಯ ವೈಫಲ್ಯ/ಹಗರಣಗಳ ಬಗ್ಗೆ ವಿಮರ್ಶೆ ಇತ್ಯಾದಿಗಳನ್ನು ಒಳಗೊಂಡ ಬರಹಗಳು ಇರುತ್ತವೆ

ಅಭ್ಯರ್ಥಿ ಆಖೈರು ನಂತರ: ಕ್ಷೇತ್ರಕ್ಕೆ ಪಕ್ಷ–ಅಭ್ಯರ್ಥಿಗಳ ಪ್ರಣಾಳಿಕೆಗಳ ವಿಮರ್ಶೆ, ಪ್ರಮುಖ ಅಭ್ಯರ್ಥಿಗಳ ಪ್ರಚಾರ ವೈಖರಿ ಬಗ್ಗೆ ವರದಿಗಳು, ಜನಮತದ ಬಗ್ಗೆ ಅಭಿಪ್ರಾಯ–ಸಮೀಕ್ಷೆ ಇತ್ಯಾದಿಗಳನ್ನು ಒಳಗೊಂಡ ಬರಹಗಳು ಇರುತ್ತವೆ

ಮಂಗಳೂರು ದಕ್ಷಿಣ ಕ್ಷೇತ್ರದ ಬಗ್ಗೆ ಮೊದಲ ಹಂತದ ಬರಹ ಇಲ್ಲಿದೆ.

ಮಂಗಳೂರು ದಕ್ಷಿಣ ಭಾಗ-1

ಸಮಗ್ರ ಮುನ್ನೋಟವಿಲ್ಲದ ಎರ್ರಾಬಿರ್ರಿ ಅಭಿವೃದ್ಧಿ



ಮಂಗಳೂರು ನಗರವು ಎರಡು ವಿಧಾನ ಸಭಾ ಕ್ಷೇತ್ರಗಳ ಮಧ್ಯೆ ಹಂಚಿ ಹೋಗಿದೆ. ಮಂಗಳೂರು ದಕ್ಷಿಣ ಕ್ಷೇತ್ರದ ದಕ್ಷಿಣ ಗಡಿಯು ನೇತ್ರಾವತಿ ನದಿಯಾಗಿದೆ. ಅರಬ್ಬಿ ಸಮುದ್ರದ ಒತ್ತಿನಲ್ಲಿರುವ ಬೆಂಗ್ರೆ ಪ್ರದೇಶ ಮಂಗಳೂರು ದಕ್ಷಿಣಕ್ಕೆ ಸೇರಿದರೆ ತಣ್ಣೀರುಬಾವಿ ಪ್ರದೇಶ ಮಂಗಳೂರು ಉತ್ತರಕ್ಕೆ ಸೇರಿದೆ. ಮಂಗಳೂರು ನಗರದ 38 ವಾರ್ಡ್‌ಗಳು ಮಂಗಳೂರು ದಕ್ಷಿಣ ಕ್ಷೇತ್ರಕ್ಕೆ ಸೇರಿವೆ. ನಗರದ ವಾಣಿಜ್ಯ ಕೇಂದ್ರವಾದ ಹಂಪನಕಟ್ಟಾ, ಆಡಳಿತ ಕೇಂದ್ರಗಳಾದ ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯತ್ ಕಚೇರಿ, ಜಿಲ್ಲಾ ತಾಲೂಕು ಮಟ್ಟದ ವಿವಿಧ ಇಲಾಖಾ ಕಚೇರಿಗಳು ಮಂಗಳೂರು ದಕ್ಷಿಣದಲ್ಲಿಯೇ ಬರುತ್ತಿವೆ. ಜಿಲ್ಲೆಯ ಇತರ ವಿಧಾನಸಭಾ ಕ್ಷೇತ್ರಗಳಿಗೆ ಹೋಲಿಸಿದರೆ ಮಂಗಳೂರು ದಕ್ಷಿಣವು ವಿಸ್ತಾರದಲ್ಲಿ ಚಿಕ್ಕದು. ಆದರೆ ಜಿಲ್ಲೆಯ ಇತರೆಲ್ಲ ಮತದಾರ ಸಂಖ್ಯೆಗಿಂತ ಇಲ್ಲಿ ಹೆಚ್ಚು ಮತದಾರರಿದ್ದಾರೆ. 2,30,351 ಮತದಾರರಲ್ಲಿ 1,20,033 ಮಹಿಳೆಯರಾದರೆ 1,10,318 ಪುರುಷರು.

2014 ರಂದು ಮಂಗಳೂರು ಮಹಾನಗರ ಪಾಲಿಕೆಯ ಆಡಳಿತ ಕಾಂಗ್ರೆಸ್ ಪಕ್ಷದ ಅಧೀನದಲ್ಲಿದೆ. ಅದಕ್ಕೂ ಹಿಂದೆ ಬಿಜೆಪಿ ಆಡಳಿತವಿತ್ತು. ಅಲ್ಲದೆ 2013 ರಿಂದ ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರವನ್ನು ಕಾಂಗ್ರೆಸ್ಸಿನ ಶಾಸಕರು ಪ್ರತಿನಿಧಿಸುತ್ತಿದ್ದಾರೆ. ತಾನು ಅಧಿಕಾರಕ್ಕೆ ಬಂದರೆ ಆಸ್ತಿ ತೆರಿಗೆ ಹೆಚ್ಚಳವಿಲ್ಲ ಎಂದು ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿತ್ತು. ಆದರೆ ಅಧಿಕಾರಕ್ಕೆ ಬಂದ ವರ್ಷಗಳಿಂದ ಪ್ರತಿ ವರ್ಷಕ್ಕೊಮ್ಮೆ 15% ತೆರಿಗೆ ಹೆಚ್ಚಳ ಮಾಡಿ ಜನತೆಯನ್ನು ವಂಚಿಸಿದೆ.

2013 ರಲ್ಲೇ ಮಂಗಳೂರು ನಗರದ ತ್ಯಾಜ್ಯ ವಿಲೇವಾರಿ ಜವಾಬ್ದಾರಿಯನ್ನು ಮುಂಬಯಿ ಮೂಲದ ಆಂಟೋನಿ ವೇಸ್ಟ್ ಎಂಬ ಖಾಸಗಿ ಸಂಸ್ಥೆಗೆ ನೀಡಲಾಗಿತ್ತು. ದಿನಕ್ಕೊಂದು ರೂಪಾಯಿಯಂತೆ ಪ್ರತಿ ಮನೆಗಳಿಂದ ವಸೂಲು ಕೊಡುವ ನೆವದಲ್ಲಿ ಖಾಸಗಿ ಉದ್ಯಮಿಗೆ ಹೇರಳ ಲಾಭ ಮಾಡಿಕೊಡಲಾಗುತ್ತಿದೆ. ಇದು ನಡೆದದ್ದು ಬಿಜೆಪಿ ಅವಧಿಯಲ್ಲಾದರೂ, ಅಂದಿನ ಕಾಂಗ್ರೆಸ್ ಪಾಲಿಕೆ ಸದಸ್ಯರೂ ಮೌನ ವಹಿಸಿದ್ದರು. ಈಗ ಕಾಂಗ್ರೆಸ್ ಆಡಳಿತದಲ್ಲೂ ಈ ವಂಚನೆ ಮುಂದುವರಿದಿದೆ.

ಮಂಗಳೂರು ನಗರಕ್ಕೆ ಸುವ್ಯವಸ್ಥಿತವಾದ ಒಳಚರಂಡಿ ಯೋಜನೆಗಾಗಿ ಈಗ 10 ವರ್ಷಗಳ ಹಿಂದೆಯೇ ಏಷ್ಯಾನ್ ಡೆವಲಾಪ್‌ಮೆಂಟ್ ಬ್ಯಾಂಡ್(ಎಡಿಬಿ) ನಿಂದ ಸಾಲ ಪಡೆದು ನಡೆಸಿದ ಒಳಚರಂಡಿ ಕಾಮಗಾರಿ, ರಸ್ತೆ ಕಾಂಕ್ರಿಟೀಕರಣದಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದ ಬಗ್ಗೆ ಗುಲ್ಲಾಗಿತ್ತು. ಈಗ ಹತ್ತು ವರ್ಷಗಳಲ್ಲೇ ಕೆಟ್ಟು ಹೋಗಿರುವ ಒಳಚರಂಡಿಗಳ ದುರಸ್ತಿ ಹಾಗೂ ವಿಸ್ತರಣೆಗಾಗಿ ಮತ್ತೆ ಅವೇ ಕಪ್ಪುಪಟ್ಟಿ ಹೊತ್ತ ಗುತ್ತಿಗೆದಾರರಿಗೆ ಕಾಮಗಾರಿ ನೀಡಲಾಗಿದೆ. ಇದರಲ್ಲಿ ಮಂಗಳೂರು ದಕ್ಷಿಣ ಮಂಗಳೂರು ಉತ್ತರದ ಕಾಂಗ್ರೆಸ್ ಶಾಸಕರ ಪಾತ್ರ ಇದೆ ಎಂಬುದನ್ನು ವಿವರಿಸಿ ಕೆಲವು ದಿನಗಳ ಹಿಂದೆ ಡಿವೈಎಫ್ಐ ಮತ್ತು ಸಿಪಿಐ(ಎಂ) ವತಿಯಿಂದ ಪ್ರತಿಭಟನೆ ನಡೆದಿದೆ.

ಮಂಗಳೂರು ನಗರದ ನಿವೇಶನ ರಹಿತರಿಗೆ ಮಂಗಳೂರು ನಗರ ವ್ಯಾಪ್ತಿಯಲ್ಲಿ ನಗರಪಾಲಿಕೆಯಾಗಲೀ, ಶಾಸಕರುಗಳಾಗಲೀ ಚಿಂತನೆ ಮಾಡಿರಲೇ ಇಲ್ಲ. ಕಳೆದ 4 ವರ್ಷಗಳಿಂದ ಸಿಪಿಐ(ಎಂ) ನೇತೃತ್ವದಲ್ಲಿ ನಿವೇಶನ ರಹಿತರ ಹೋರಾಟ ಸಮಿತಿ ಹಲವಾರು ಹೋರಾಟಗಳನ್ನು ಹಮ್ಮಿಕೊಂಡ ಮೇಲೆ ಶಾಸಕರುಗಳು ಕಣ್ಣು ತೆರೆಯುವಂತಾಯಿತು. ನಗರಪಾಲಿಕೆ ನಿವೇಶನ ರಹಿತರ ಅರ್ಜಿಗಳನ್ನು ಸ್ವೀಕರಿಸಲು ಶುರುವಾಯಿತು. ಕೊನೆಗೆ ಶಕ್ತಿನಗರ ಎಂಬಲ್ಲಿ ನಿವೇಶನವೊಂದನ್ನು ಗುರುತಿಸಿ, ಅಲ್ಲಿ ಜಿ+3 ಮಾದರಿಯ ಬಹುಮಹಡಿ ವಸತಿ ಸಂಕೀರ್ಣದ ಪ್ರಸ್ತಾಪ ಬಂತು. ಅಲ್ಲಿ 600ಕ್ಕೂ ಮಿಕ್ಕಿ ಮನೆಗಳ ಯೋಜನೆ ಸಿದ್ಧವಾಯಿತು. ನಿವೇಶನ ರಹಿತರ ಅರ್ಜಿಗಳನ್ನು ಆಯ್ಕೆಗಾಗಿ ಪರಿಶೀಲನೆ ಮಾಡುವ ಘಟ್ಟದಲ್ಲಿ ಮೊದಲು ಸಲ್ಲಿಕೆಯಾದ ಇಲ್ಲವೇ ಆದ್ಯತೆಯ ಮೇಲೆ ಪರಿಶಿಷ್ಟ ವರ್ಗಕ್ಕೆ ನೀಡಬೇಕಾದ ವಸತಿ ರಹಿತರ ಪಟ್ಟಿಯನ್ನು ಮಾಡಿಕೊಳ್ಳದೆ ಪಟ್ಟಿಯಲ್ಲಿ ಶಾಸಕರು ಶಿಫಾರಸು ಮಾಡಿದ ಅನರ್ಹರ ಹೆಸರುಗಳು ಸೇರಿಕೆಯಾಗಿವೆ. ಇದರ ವಿರುದ್ಧವೂ ನಿವೇಶನ ರಹಿತರ ಹೋರಾಟ ಸಮಿತಿ ಪ್ರತಿಭಟನೆಗಳನ್ನು ಮುಂದುವರಿಸುತ್ತಿದೆ.

ಬೀದಿ ಬದಿ ವ್ಯಾಪಾರಸ್ಥರಿಗೆ ಸಂಬಂಧಿಸಿ ಅಖಿಲ ಭಾರತ ಮಟ್ಟದ ಕಾಯಿದೆ ಜಾರಿಗೊಂಡಿದ್ದರೂ ನಿಯಮಾನುಸಾರ ವೆಂಡಿಂಗ್ ಜೋನ್ ರಚಿಸಿ ಅನರ್ಹರಿಗೆ ವ್ಯಾಪಾರಕ್ಕೂ ಯೋಗ್ಯ ಸ್ಥಳವನ್ನು ಪಾಲಿಕೆ ನೀಡುವುದು ಸಾಧ್ಯವಾಗಿಲ್ಲ. ಮಂಗಳೂರು ನಗರದ ಬೀದಿ ಬದಿ ವ್ಯಾಪಾರಿಗಳು ಸಿಐಟಿಯು ಅಡಿಯಲ್ಲಿ ಸಂಘಟಿತರಾಗಿ ರಾಷ್ಟ್ರದಲ್ಲೇ ಗಮನಾರ್ಹವಾದ ಹೋರಾಟಗಳನ್ನು ನಡೆಸಿದ್ದಾರೆ. ಬೀದಿ ವ್ಯಾಪಾರಿಗಳಿಗೆ ಜಾಗ ಹಂಚಿಕೆಯನ್ನು ನಗರಪಾಲಿಕೆ ಶಾಸಕರ ಮರ್ಜಿ ಬಿಟ್ಟುಕೊಟ್ಟಿದೆ. ಶಾಸಕರು ತಮ್ಮ ಬೆಂಬಲಿಗ ಬೀದಿ ವ್ಯಾಪಾರಿಗಳಿಗೆ ಜಾಗ ಹಂಚುವ ಸಲುವಾಗಿ, ನಿಗದಿತ ವೆಂಡಿಂಗ್ ಜೋನ್ ಹಂಚಿಕೆಯನ್ನು ಮಾಡಲು ಮುಂದಾಗುತ್ತಿಲ್ಲ.

ಈಗಿನ ಕಾಂಗ್ರೆಸ್ ಶಾಸಕರು ಚುನಾವಣೆಯ ಹೊತ್ತಿನಲ್ಲಿ ಮಂಗಳೂರಿಗೆ ಮೀನುಗಾರಿಕಾ ಬಂದರು ಅಭಿವೃದ್ಧಿಗೊಳಿಸಿ ಸುಸಜ್ಜಿತಗೊಳಿಸುವುದಾಗಿ ಆಶ್ವಾಸನೆ ನೀಡಿದ್ದರು. ನಗರ ಕೇಂದ್ರ ಮಾರ್ಕೆಟ್ ಅಭಿವೃದ್ಧಿಪಡಿಸುವುದಾಗಿ ತಿಳಿಸಿದ್ದರು. ಕದ್ರಿ ಪಾರ್ಕಿನಲ್ಲಿ ಕಾರಂಜಿ ಚಿಮ್ಮಿಸುವುದಾಗಿ ತಿಳಿಸಿದ್ದರು. ಮಂಗಳೂರು ಖಾಸಗಿ ಬಸ್ ನಿಲ್ದಾಣವನ್ನು ಆಧುನಿಕವಾಗಿ ಅಭಿವೃದ್ಧಿಗೊಳಿಸುವುದಾಗಿ ಭರವಸೆ ನೀಡಿದ್ದರು. ಈ ಯಾವ ಆಶ್ವಾಸನೆಗಳನ್ನು ಈಡೇರಿಸಿಲ್ಲ.

ಮಂಗಳೂರಿನ ಸರಕಾರಿ ವೆನ್‌ಲಾಕ್ ಆಸ್ಪತ್ರೆ ಜಿಲ್ಲೆಯ ಬಡರೋಗಿಗಳ ಆಶಾಕಿರಣವಾಗಿದ್ದು, ಅದನ್ನು ಖಾಸಗೀಕರಣಗೊಳಿಸುವ ಪ್ರಸ್ತಾಪಗಳಿವೆ. ಸರಕಾರಿ ಲೇಡಿಗೋಶನ್ ಮಹಿಳೆಯರ ಮಕ್ಕಳ ಆಸ್ಪತ್ರೆಯ ಪುನರ್ನಿರ್ಮಾಣ ಖಾಸಗಿ ಸಂಸ್ಥೆಯೊಂದರ ಸಹಭಾಗಿತ್ವದಲ್ಲಿ ನಡೆಯುತ್ತಿದ್ದು, 8 ವರ್ಷವಾದರೂ ಕಾಮಗಾರಿ ಪೂರ್ಣಗೊಂಡಿಲ್ಲ. ಅಪಾರ್ಟ್‌ಮೆಂಟ್, ಕಟ್ಟಡ ನಿರ್ಮಾಣದ ಮಾಫಿಯಾ ಕೈಯಲ್ಲಿ ನಗರದ ಕೊಳಚೆ ಹೆಚ್ಚಳವಾಗುತ್ತಿದ್ದು, ಇದರಿಂದ ಮಲೇರಿಯಾ, ಡೆಂಗ್ಯೂ ರೋಗಗಳ ಹೆಚ್ಚಳ ಕಂಡು ಬಂದಿದೆ. ರೋಗ ಕಾರಣವಾಗುವ ಕಟ್ಟಡ ನಿರ್ಮಾಣ ಮಾಫಿಯಾದ ಮೇಲೆ ನಿಯಂತ್ರಣವೇ ಇಲ್ಲವಾಗಿದೆ. ಪಾಲಿಕೆಯ ನಿಯಂತ್ರಣದಲ್ಲಿರುವ ಮಾರುಕಟ್ಟೆ ಸುಸಜ್ಜಿತವಾಗಿಲ್ಲ. ಸಿಟಿ ಬಸ್ ತಂಗುದಾಣವಿಲ್ಲದೆ ಎಲ್ಲೆಂದರಲ್ಲಿ ಜನ ಬಸ್ ಹತ್ತುತ್ತಿದ್ದು, ಅಪಘಾತಗಳು ಹೆಚ್ಚುತ್ತಿವೆ. ನಗರದ ವ್ಯಾಪ್ತಿ ಸ್ಮಶಾನಗಳು ಅವ್ಯವಸ್ಥೆಯ ಅಗರಗಳಾಗಿವೆ.

ಕೇಂದ್ರ ಸರಕಾರವು ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಯಾವ ಯೋಜನೆ ಹಾಕಿಕೊಳ್ಳುತ್ತಿದ್ದೇವೆ ಎಂಬುದನ್ನು ನಗರದ ಶಾಸಕರಾಗಲೀ ಪಾಲಿಕೆ ಪ್ರತಿನಿಧಿಗಳಾಗಲೀ ಸ್ಪಷ್ಟಪಡಿಸುತ್ತಿಲ್ಲ. ಮುನ್ನೋಟವಿಲ್ಲದೆ ಜನಪ್ರತಿನಿಧಿ ಗಳಿಂದಾಗಿ ಮಂಗಳೂರು ನಗರದ ಅಭಿವೃದ್ಧಿ ಎರ್ರಾಬಿರ್ರಿ ಸಾಗಿದೆ. ●

ಎಸ್‌ಎಸ್‌ಸಿ ಪರೀಕ್ಷಾ ಹಗರಣ ಮತ್ತು 'ಪ್ರಧಾನ ಮಂತ್ರಿ ಪಕೋಡಾ ಯೋಜನಾ'



ವೇದರಾಜ ಎನ್.ಕೆ.

"ನಾನು ಸದಾ ಭಾರತ ಯುವಜನರೊಡನೆ ಸಂವಾದ ನಡೆಸಲು ಕಾತುರನಾಗಿರುತ್ತೇನೆ" ಇದು ಪ್ರಧಾನಿಗಳ ಈ ವಾರದ ಟ್ವೀಟ್‌ಗಳಲ್ಲೊಂದು. ಆದರೆ ಇದಕ್ಕೆ ಟ್ವಿಟರ್ ಬಳಗದಲ್ಲಿ ಯುವಜನರಿಂದಲೇ ಬಂದಿರುವ ಪ್ರತಿಕ್ರಿಯೆಗಳು ಅತ್ತ ಈಶಾನ್ಯ ಭಾರತದ ಮೂರು ರಾಜ್ಯಗಳಲ್ಲಿ, ವಿಶೇಷವಾಗಿ ತ್ರಿಪುರಾದಲ್ಲಿ ಅವರ ಮಾತಿನ ಮೋಡಿಯನ್ನು ನಂಬಿ ಭಾರೀ ಬೆಂಬಲ ನೀಡಿದ ಯುವಜನರನ್ನು ಕೂಡ ತಬ್ಬಿಬ್ಬು ಮಾಡಿದೆಯೋ ಗೊತ್ತಿಲ್ಲ.

"ಸಾರ್, ಹಾಗಿದ್ದರೆ ದಿಲ್ಲಿಯಲ್ಲಿ ರಸ್ತೆಯಲ್ಲಿ ಕೂತಿರುವ ಯುವಜನರನ್ನೇಕೆ ಭೇಟಿಯಾಗಬಾರದು? ಅವರು ನಿಮ್ಮ ಸ್ಪಂದನೆಗೆ ಕಾಯುತ್ತಿದ್ದಾರೆ" ಎಂದು ಒಬ್ಬ ಪ್ರತಿಟ್ವೀಟ್ ಮಾಡಿದ್ದಾನೆ.

ಹೌದು, ಪ್ರಧಾನಿಗಳು ಹೀಗೆ 'ಕಾತುರ'ರಾಗಿದ್ದಾಗಲೇ ಸಾವಿರಾರು ಉದ್ಯೋಗಾಕಾಂಕ್ಷಿ ಯುವಜನರು ಸ್ಟಾಫ್ ಸೆಲೆಕ್ಷನ್ ಕಮಿಶನ್(ಎಸ್‌ಎಸ್‌ಸಿ-ಸಿಬ್ಬಂದಿ ಆಯ್ಕೆ ಆಯೋಗ)ದ ಪರೀಕ್ಷೆಯಲ್ಲಿ ಹಗರಣ ನಡೆದಿದೆಯೆಂದು ಆಕ್ರೋಶದಿಂದ ದಿಲ್ಲಿಯಲ್ಲಿ ಎಸ್‌ಎಸ್‌ಸಿ ಕಚೇರಿಯೆದುರು ಹಗಲು-ರಾತ್ರಿಯೆನ್ನದೆ ಪ್ರತಿಭಟನೆ ನಡೆಸುತ್ತಿದ್ದರು. ಸುಮಾರು 9000ಕ್ಕೂ ಹೆಚ್ಚು ಹುದ್ದೆಗಳನ್ನು ತುಂಬಲು ಕಳೆದ ವರ್ಷ ನವಂಬರ್‌ನಲ್ಲಿ ನಡೆಯಬೇಕಾಗಿದ್ದ ಪರೀಕ್ಷೆ ಕೊನೆಗೂ ಫೆಬ್ರುವರಿ 17ರಿಂದ 22 ರವರೆಗೆ ನಡೆಯುತ್ತದೆ ಎನ್ನಲಾಯಿತು. ಉದ್ಯೋಗಾಕಾಂಕ್ಷಿಗಳು ಕಷ್ಟಪಟ್ಟು ಪರೀಕ್ಷೆಗೆ ಸಿದ್ಧತೆ ಮಾಡಿಕೊಂಡು ಹಾಜರಾದರು ಕೂಡ. ಆದರೆ ಫೆ. 21ರಂದು ನಡೆದ ಪರೀಕ್ಷೆಯನ್ನೇ ರದ್ದು ಮಾಡಲಾಯಿತು. ಕೊಟ್ಟ ಕಾರಣ ತಾಂತ್ರಿಕ ಅಡಚಣೆಗಳು ಮತ್ತು ಪರೀಕ್ಷಾ ದುರಾಚರಣೆಗಳು. ಆದರೆ ಅದರ ವಿವರಗಳನ್ನು ಕೊಡಲು ಸಂಬಂಧಪಟ್ಟ ಅಧಿಕಾರಿಗಳು ನಿರಾಕರಿಸಿದರು. ಮಾರ್ಚ್ 9ರಂದು ಹೊಸದಾಗಿ ಪರೀಕ್ಷೆಗೆ ಹಾಜರಾಗಬೇಕೆಂದಷ್ಟೇ ತಿಳಿಸಲಾಯಿತು.

ಈ ಪರೀಕ್ಷೆ ನಡೆಸುವುದನ್ನು ಸಿಫಿ.ಕಾಂ ಎಂಬ ಖಾಸಗಿ ಸಂಸ್ಥೆಗೆ ಹೊರಗುತ್ತಿಗೆ ಕೊಡಲಾಗಿದೆಯಂತೆ. ಅದು ತನ್ನ ಸೈಬರ್‌ಕೆಫೆಗಳಲ್ಲಿ ಈ ಪರೀಕ್ಷೆ ನಡೆಸುತ್ತದೆ. ಆದರೆ ಇದರಲ್ಲಿ ಬಹಳಷ್ಟು ಗೋಲ್‌ಮಾಲ್‌ಗಳು ನಡೆಯುತ್ತಿವೆ, ಪರೀಕ್ಷಾ ಪತ್ರಿಕೆಗಳು ಲೀಕ್ ಆಗಿವೆ, ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆಕ್ರೋಶಗೊಂಡ ಸಾವಿರಾರು ಯುವಜನರು ಫೆ.27ರಂದು ಎಸ್‌ಎಸ್‌ಸಿ ಕಚೇರಿಯೆದುರು ಪ್ರತಿಭಟನೆ ಆರಂಭಿಸಿದರು. ಇದೊಂದು ಮಧ್ಯಪ್ರದೇಶವನ್ನು ಅಲುಗಾಡಿಸಿದ್ದ ವ್ಯಾಪಂ ಹಗರಣದಂತಹ ದೊಡ್ಡ ಹಗರಣ, ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು, ಅದುವರೆಗೆ' ಕದಲುವುದಿಲ್ಲ ಎಂದು ಕೂತೇ ಬಿಟ್ಟರು. ಎಸ್‌ಎಸ್‌ಸಿ ಮುಖ್ಯಸ್ಥರು ಸಿಬಿಐ ತನಿಖೆ ಸಾಧ್ಯವಿಲ, ಬೇಕಾದರೆ ಎಸ್‌ಐಟಿ ಮಾಡುತ್ತೇವೆ ಎಂದರು. ಪರೀಕ್ಷಾರ್ಥಿ ಯುವಜನರು ಬಿಡಲಿಲ್ಲ-ಪಟ್ಟು ಹಿಡಿದು ಕೂತರು.

ಇಷ್ಟೆಲ್ಲ ಆಗುವಾಗಲೂ ನಮ್ಮ ಟ್ವೀಟ್ ವೀರ ಪ್ರಧಾನ ಸೇವಕರು ಎಂದಿನಂತೆ ಮೌನವಾಗಿದ್ದರು. ಇದರ ನಡುವೆಯೇ ಬಂದ ಮೇಲೆ ಹೇಳಿದ ಪ್ರಧಾನಿ ಟ್ವೀಟ್ ಸಹಜವಾಗಿಯೇ ಯುವ ಉದ್ಯೋಗಾರ್ಥಿಗಳನ್ನು ರೇಗಿಸಿತು. ಯುವಜನರ ಆಕ್ರೋಶದ ಕೆಲವು ಸ್ಯಾಂಪಲ್‌ಗಳನ್ನು ನೋಡಿ(ಕೃಪೆ: ನ್ಯೂಸ್‌ಕ್ಲಿಕ್, ಮಾರ್ಚ್ 5)

* "ಮೂರ್ಖರಾಗಿ ಮಾಡುವುದನ್ನು ನಿಲ್ಲಿಸಿ. ನಿಮ್ಮಿಂದ ಈ ನಾಲ್ಕು ವರ್ಷಗಳಲ್ಲಿ ಉದ್ಯೋಗ ನಿರ್ಮಾಣದ ಬಗ್ಗೆ ಒಂದೇ ಒಂದು ಮಾತು ಬಂದಿಲ್ಲ"- ಪ್ರೇಮ್‌ಸುಖ್ ಚೌಧುರಿ
* "ನಿಜ ಹೇಳಬೇಕೆಂದರೆ ಸಾಹೇಬರಿಗೆ 'ಮೇಕ್ ಇನ್‌ಇಂಡಿಯಾ'ದ ಅಡಿಯಲ್ಲಿ ಪಕೋಡಾಗಳನ್ನು ಯುವ ಜನರು ಕಾಯಿಸಿ ಕೊಡಬೇಕಾಗಿದೆ. ಅವರ ಬಳಿಯೊಂದು ದೊಡ್ಡ ಪಕೋಡಾ ಪ್ರಾಜೆಕ್ಟ್ ಇದೆ- ಪ್ರಧಾನ ಮಂತ್ರಿ ಪಕೋಡಾ ಯೋಜನಾ' ಅದರಿಂದ ಯುವಜನ ಕಲ್ಯಾಣವಾಗುತ್ತದೆ."- ಬಬಿತ
* "ಮೋದೀಜೀ, ಇಂತಹ ದೊಡ್ಡ ಜೋಕ್ ಏಕೆ ಮಾಡುತ್ತೀರಿ? (ನಮಗೆ) ಸಹಿಸಲಾಗುವುದಿಲ್ಲ." - ಅನಿತ
* ಪ್ರಧಾನ ಮಂತ್ರಿಗಳು ಚುನಾವಣಾ ಪ್ರಚಾರಗಳಲ್ಲಿ ಮಗ್ನರಾಗಿದ್ದಾರೆ,' ವಿದ್ಯಾರ್ಥಿಗಳ ಭವಿಷ್ಯವನ್ನು ಪಣಕ್ಕಿಡಲಾಗಿದೆ. ಅಧಿಕಾರದಾಹಿಗಳು ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ಉಪೇಕ್ಷಿಸುತ್ತಿದ್ದಾರೆ"- ಚಂದನ್
* ಯುವಜನರು ನಿಮ್ಮೊಡನೆ ಮಾತಾಡಲು ಕ್ಯೂನಲ್ಲಿದ್ದಾರೆ. ನಿಮಗೆ ನಮ್ಮನ್ನು ಕಾಣಲಾಗುತ್ತಿಲ್ಲ. ನಮಗೆ ನಿಮ್ಮನ್ನು.. ನಾವೆಂದು ಭೇಟಿಯಾಗುವುದು, ನರೇಂದ್ರ ಮೋದೀಜೀ?-ಸಾಮ್ ನೇಗಿ
* "ನೀವೇಕೆ ನಿರುದ್ಯೋಗಿ ಯುವಜನರನ್ನು ಭೇಟಿಯಾಗ ಬಯಸುತ್ತೀರಿ? ಪಕೋಡ ಮಾಡಿ ಎಂದು ಹೇಳಲಿಕ್ಕೇನು?"- ಆಕಾಶ್ ಮಲ್ಹೋತ್ರ
* "ಸರ್, ನಾವೆಲ್ಲ ಯುವಜನ.. ನೀವು ನಮ್ಮನ್ನು ಭೇಟಿಯಾಗುವ ಕಾತುರ ತೋರಿಸಿಲ್ಲ. ಏಳು ದಿನಗಳಾದವು. ನಮ್ಮ ಗೆಳೆಯರು ಇನ್ನೂ ರಸ್ತೆಗಳ ಮೇಲೆ ಕೂತಿದ್ದಾರೆ. ನೀವು ಎಸ್‌ಎಸ್‌ಸಿ ಹಗರಣವನ್ನು ಹಗುರವಾಗಿ ನೋಡಿದ್ದೀರಿ"- ಪ್ರಶಾಂತ್.

ಕೊನೆಗೂ ಕೇಂದ್ರ ಸರಕಾರ ಸಿಬಿಐ ತನಿಖೆಗೆ ಒಪ್ಪಿತು. ಆದರೆ 'ಅಚ್ಛೇ ದಿನ್'ಗಳ ಜುಮ್ಲಾಗಳನ್ನು, ಹೊಸ-ಹೊಸ ಮೋಸದ ಚಾಳಿಗಳನ್ನು ನೋಡುತ್ತಿರುವ ಯುವಜನರು ಆಗಲೂ ಕದಲಲಿಲ್ಲ- ತನಿಖೆಯ ಸ್ವರೂಪವನ್ನು ಸ್ಪಷ್ಟಪಡಿಸುವ ವರೆಗೂ ಕದಲುವುದಿಲ್ಲ ಎಂದರು.

ಈ ನಡುವೆ ಲೋಕಸಭೆಯಲ್ಲಿ ಕಾರ್ಮಿಕ ಮಂತ್ರಾಲಯ ಸದಸ್ಯರ ಪ್ರಶ್ನೆಗಳಿಗೆ ಉತ್ತರವಾಗಿ ಸಲ್ಲಿಸಿದ ಲೇಬರ್ ಬ್ಯುರೊ ಸರಕಾರದ ವಿವಿಧ ಉದ್ಯೋಗ ಯೋಜನೆಗಳ ಮಾಹಿತಿಗಳನ್ನು ನೋಡಿ:

* ಪ್ರಧಾನ ಮಂತ್ರಿ ಉದ್ಯೋಗ ನಿರ್ಮಾಣ ಕಾರ್ಯಕ್ರಮ: 2016-17ರಲ್ಲಿ 4,07, 840 ಉದ್ಯೋಗಗಳನ್ನು ನೀಡಲಾಗಿದ್ದರೆ 2017-18 ರ ಒಂಭತ್ತು ತಿಂಗಳಲ್ಲಿ ಇದುವರೆಗೆ ' 2,08,576 ಮಾತ್ರ.


ಅಂದರೆ ಅರ್ಧದಷ್ಟು ಮಾತ್ರ.

* ಮನರೇಗ(ಗ್ರಾಮೀಣ ಉದ್ಯೋಗ)- 2016-17ರಲ್ಲಿ 23,583 ಲಕ್ಷ ವ್ಯಕ್ತಿ ದಿನಗಳು; ಎಪ್ರಿಲ್ 2017 ರಿಂದ ಡಿಸೆಂಬರ್ 2017ರ ಅವಧಿಯಲ್ಲಿ

ಕೇವಲ 16,029 ಲಕ್ಷ ವ್ಯಕ್ತಿ ದಿನಗಳು

* ದೀನ್‌ದಯಾಳ್ ರಾಷ್ಟ್ರೀಯ ನಗರ ಜೀವನಾಧಾರ ಮಿಶನ್‌ನಲ್ಲಿ 2016-17ರಲ್ಲಿ 1,51,901 ಕೌಶಲ ತರಬೇತಿ ಪಡೆದ ಯುವಜನರಿಗೆ ಉದ್ಯೋಗ ಕೊಡಿಸಿದರೆ, 2017-18ರ ಎಂಟು ತಿಂಗಳಲ್ಲಿ ಇದು ಅರ್ಧದಷ್ಟೂ ಇಲ್ಲ, ಕೇವಲ 69,255.

ಮೇಲೆ ಹೇಳಿದ ಪಿಎಂಪಿವೈ ('ಪ್ರಧಾನ ಮಂತ್ರಿ ಪಕೋಡಾ ಯೋಜನಾ')ದಲ್ಲಿ ಉಳಿದ 14ತಿಂಗಳಲ್ಲಿ ಎಷ್ಟು ಕೆಲಸಗಳು /ಪಕೋಡಾಗಳು 'ಸೃಷ್ಟಿ'ಯಾಗಬಹುದು, ಈ ಎಲ್ಲ ಕೊರತೆಗಳನ್ನು ತುಂಬಬಹುದೇ ಎಂದು ಕಾದು ನೋಡಬೇಕಷ್ಟೇ.



'ಸೈದ್ಧಾಂತಿಕ ಸಮರ ಗೆದ್ದವರು' ಟ್ವೀಟ್‌ಗಳನ್ನು ಅಳಿಸಬೇಕಾದ ಈ ಪರಿ

ತ್ರಿಪುರಾ ಈಶಾನ್ಯ ಮೂಲೆಯ ಒಂದು ಸಣ್ಣ ರಾಜ್ಯವಾದರೂ ಅಲ್ಲಿ ಅಚ್ಛೇದಿನ್‌ವಾಲಾಗಳ ಚುನಾವಣಾ ವಿಜಯ ಒಂದು ದೊಡ್ಡ ಸೈದ್ಧಾಂತಿಕ ಗೆಲುವು ಎಂದು ಪ್ರಧಾನ ಮಂತ್ರಿಗಳಾದಿಯಾಗಿ ಹೇಳುತ್ತಿದ್ದಾರೆ. ಅವರ ಒಬ್ಬ ಪ್ರಧಾನ ಕಾರ್ಯದರ್ಶಿ ಈ ಹಿಂದೆ ಜಮ್ಮು-ಕಾಶ್ಮೀರದಲ್ಲಿ, ಈಗ ಈಶಾನ್ಯ ಪ್ರದೇಶದಲ್ಲಿ ಅಚ್ಛೇದಿನ್ ಯಜ್ಞದ ಒಬ್ಬ ಪ್ರಮುಖ ಅಧ್ವರ್ಯ ರಾಮ್ ಮಾಧವ್ ಅವರು ಮಾರ್ಚ್ 5ರಂದು ಬೆಲೊನಿಯಾದಲ್ಲಿ ಅವರ ಅನುಯಾಯಿಗಳು ಬುಲ್‌ಡೋಜರ್‌ನಿಂದ ಲೆನಿನ್ ಪ್ರತಿಮೆಯನ್ನು ಉರುಳಿಸಿದ ಚಿತ್ರವನ್ನು ಹಾಕಿ "ಜನರು ಲೆನಿನ್ ಪ್ರತಿಮೆಯನ್ನು ಇಳಿಸುತ್ತಿದ್ದಾರೆ..ರಷ್ಯಾದಲ್ಲಲ್ಲ, ಇದು ತ್ರಿಪುರಾದಲ್ಲಿ. ಚಲೋ ಪಲ್ಟಾಯ್" ಎಂದು ಹೆಮ್ಮೆಯಿಂದ ಟ್ವೀಟ್ ಮಾಡಿದ್ದರು. ಅದನ್ನು ನಂತರ ಸದ್ದಿಲ್ಲದೆ ತೆಗೆದರು.

'ಹಿಸ್ ಎಕ್ಸಲೆನ್ಸಿ' ಅಥವಾ 'ಮಹಾಮಹಿಮ' ತ್ರಿಪುರಾದ ರಾಜ್ಯಪಾಲರು, ರಾಜ್ಯಸಭಾ ಸದಸ್ಯ ಸ್ವಪನ್ ದಾಸ್‌ಗುಪ್ತ, ಬಿಜೆಪಿ ರಾಷ್ಟ್ರೀಯ ವಕ್ತಾರ ನಳಿನ್ ಕೊಹ್ಲಿ, ದಿಲ್ಲಿಯಲ್ಲಿರುವ ಪ್ರಸಿದ್ಧ ವಕೀಲ ಪ್ರಶಾಂತ ಭೂಷಣ್ ಮೇಲೆ ಹಲ್ಲೆ ಮಾಡಿದ 'ಖ್ಯಾತಿ'ಯ ಬಿಜೆಪಿ ವಕ್ತಾರರು ಮುಂತಾದವರೂ ಇದೇ ಘಟನೆಯ ತರಹೇವಾರಿ ಟ್ವೀಟ್ ಮಾಡಿದರು. ತಮಿಳುನಾಡಿನ ಅಚ್ಛೇ ದಿನ್ ಮುಖಂಡರು ಇನ್ನೂ ಮುಂದೆ ಹೋಗಿ "ಯಾರು ಈ ಲೆನಿನ್, ಲೆನಿನ್ ಮತ್ತು ಭಾರತದ ನಡುವಿನ ಸಂಬಂಧ ಏನು? ಭಾರತಕ್ಕೂ ಕಮ್ಯುನಿಸ್ಟರಿಗೂ ಇರುವ ಸಂಬಂಧ ಏನು? ತ್ರಿಪುರಾದಲ್ಲಿ ಲೆನಿನ್ ಪ್ರತಿಮೆಯನ್ನು ತೆಗೆಯಲಾಗಿದೆ. ಇಂದು ತ್ರಿಪುರಾದಲ್ಲಿ ಲೆನಿನ್ ಪ್ರತಿಮೆ, ನಾಳೆ ಜಾತ್ಯಂಧ ಇವಿಆರ್ ರಾಮಸ್ವಾಮಿಯದ್ದು" ಎಂದು ತಮಿಳಿನಲ್ಲಿ ಟ್ವೀಟ್ ಮಾಡಿದರು. ಅವರೂ ಈಗ ಆ ಟ್ವೀಟನ್ನು ಅಳಿಸಿ ಹಾಕಿದ್ದಾರೆ.

ಹೀಗೆ ಟ್ವೀಟ್ ಹಾಕುವದು, ನಂತರ ಅಳಿಸುವುದು ಈ ಅಚ್ಛೇದಿನ್‌ವಾಲಾಗಳ ಒಂದು ದೊಡ್ಡ ಚಾಳಿಯಾಗಿ ಬಿಟ್ಟಿದೆ. ಮೊದಲು ಹಾಕಿದ್ದೇಕೆ, ಆ ಮೇಲೆ ತೆಗೆದದ್ದೇಕೆ? ವಾಸ್ತವವಾಗಿ ಅವರು ತ್ರಿಪುರಾದಲ್ಲಿ ಗೆದ್ದಿರುವ ಸಿದ್ಧಾಂತ ಯಾವುದು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಹಾಕಿದ ಟ್ವೀಟನ್ನು ತೆಗೆಯುವುದೆಂದರೆ ಸೋಲೋ, ಗೆಲುವೋ?

ಅಳಿಸಿ ಹಾಕಲು ಒಂದು ಕಾರಣ ದೇಶಾದ್ಯಂತ ಈ ಹೊಲಸು ಕೃತ್ಯಕ್ಕೆ ವ್ಯಕ್ತಪಟ್ಟ ಆಕ್ರೋಶ. ಲೆನಿನ್‌ಗೂ ಭಾರತಕ್ಕೂ ಏನು ಸಂಬಂಧ ಎಂದು ಬಹುಶಃ ಬಹಳಷ್ಟು ಬಿಜೆಪಿ ಘಟಾನುಘಟಿಗಳಿಗೆ ತಿಳಿದೇ ಇರಲಿಕ್ಕಿಲ್ಲ . ಒಬ್ಬ ಅಚ್ಛೇ ದಿನ್ ಪ್ರೊಫೆಸರ್ ಅಂತೂ ಲೆನಿನ್ ಬಗ್ಗೆ ಭಗತ್‌ಸಿಂಗ್‌ಗೆ ಆರಂಭದಲ್ಲಿ ಮಾತ್ರ ಗೊತ್ತಿದ್ದದ್ದು, ಆಮೇಲೆ ಲೆನಿನ್ ಕೃತ್ಯಗಳು ಅವರಿಗೆ ತಿಳಿದಿರಲಿಲ್ಲ ಎಂದು ಸಮಜಾಯಿಷಿ ನೀಡಲು ಪ್ರಯತ್ನಿಸಿದರು. ಆಗ ಅವರಿಗೆ ಭಗತ್‌ಸಿಂಗ್ ನೇಣಿಗೇರುವ ಹಿಂದಿನ ದಿನ ಲೆನಿನ್ ಬಗ್ಗೆ ಓದುತ್ತಿದ್ದರು, ಅದಕ್ಕೆ ಏಳು ವರ್ಷಗಳ ಮೊದಲೇ ಲೆನಿನ್ ನಿಧನರಾಗಿದ್ದರು ಎಂದೂ ನೆನಪಿಸಬೇಕಾಯಿತು.

ಈ ರೀತಿ ಅವರ ಅಜ್ಞಾನಗಳು/ ಹಸಿ ಸುಳ್ಳುಗಳು ಬಯಲಾದ್ದು ಈ ಟ್ವೀಟ್ ತೆಗೆಯಲು ಕಾರಣವಾಗಿರಬಹುದೇನೋ. ಆದರೆ ಈ ಸೈದ್ಧಾಂತಿಕ ಸಮರದ ಟ್ವೀಟ್ ಹಾಕುವ, ತೆಗೆಯುವ ಪ್ರಕ್ರಿಯೆ ಇಲ್ಲಿಗೇ ನಿಲ್ಲಲಿಲ್ಲ. ಲೆನಿನ್ ನಂತರ ಪೆರಿಯಾರ್ ಬಗ್ಗೆ ಟ್ವೀಟ್ ಅವರ ನಿಜವಾದ 'ಸಿದ್ಧಾಂತ'ವನ್ನು ಬಯಲಿಗೆಳೆದಾಗ ಕಮ್ಯುನಿಸ್ಟರು ತ್ರಿಪುರಾದಲ್ಲಿ ರಾಜೀವ್ ಗಾಂಧಿ ಪ್ರತಿಮೆಯನ್ನು ಕೆಡವಿದ್ದರು ಎಂದು 'ಫೋಟೋ ಸಾಕ್ಷಿ' ಸಮೇತ ಟ್ವೀಟ್ ಮಾಡಿದರು. ಹಾಗೆ ಮಾಡಿದವರು 'ಯಕಶ್ಚಿತ್' ಟ್ರೋಲ್ ಅಲ್ಲ, ಅಚ್ಛೇದಿನ್‌ವಾಲಾಗಳ ಮಾರ್ಗದರ್ಶಕ ಪತ್ರಿಕೆಯ ಒಬ್ಬ ಸಂಪಾದಕರು. ಯಥಾಪ್ರಕಾರ ಇದನ್ನು ವೈರಲ್ ಮಾಡಲಾಯಿತು. ಆದರೆ ಆ ಸಾಕ್ಷಿ ಫೋಟೋ ವಾಸ್ತವವಾಗಿ ಆಂಧ್ರಪ್ರದೇಶದ್ದು, ಆ ರಾಜ್ಯದ ವಿಭಜನೆಯನ್ನು ವಿರೋಧಿಸುತ್ತಿದ್ದ ಒಂದು ಗುಂಪಿನವರು 2013ರಲ್ಲಿ ಮಾಡಿದ ಕೃತ್ಯದ ಫೋಟೋ ಎಂದು ಬಯಲಾಯಿತು, ಆ ಟ್ವೀಟ್‌ಗಳೂ ಅಳಿಸಿ ಹೋದವು. ನಿಜ, ಕೆಲವರು ತಮ್ಮ 'ಸೈದ್ಧಾಂತಿಕ ವಿಜಯ'ದ(ಅಜ್ಞಾನದ?) ದಾಖಲೆಯಾಗಿ ಉಳಿಸಿಕೊಂಡಿರಬಹುದು.

ಈ ನಡುವೆ ಅವರು ಗೆದ್ದಿರುವ ಈ 'ಸಮರ' ಯಾವುದು ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಬಹುಶಃ ಇದಕ್ಕೆ ಅವರು ಮೂರು ವರ್ಷಗಳ ಹಿಂದೆ ಜಮ್ಮು-ಕಾಶ್ಮೀರದಲ್ಲಿ ಗೆದ್ದ 'ಸಮರ'ವನ್ನು ನೆನಪಿಸಿಕೊಳ್ಳುವುದು ಸಹಾಯಕವಾಗಬಹುದು. ಆಗ ಪಿಡಿಪಿ-ಬಿಜೆಪಿ ಸರಕಾರದ ಮುಖ್ಯಮಂತ್ರಿಗಳಾದ ಮುಫ್ತಿ ಮಹಮ್ಮದ್ ಸೈಯದ್ ಇದು ಉತ್ತರ ಧ್ರುವ-ದಕ್ಷಿಣ ಧ್ರುವದ ಸಂಗಮ ಎಂದಿದ್ದರಂತೆ. ಪ್ರಧಾನ ಮಂತ್ರಿಗಳು "ಪಿಡಿಪಿ-ಬಿಜೆಪಿ ಸರಕಾರ ಜಮ್ಮು ಮತ್ತು ಕಾಶ್ಮೀರದ ಜನತೆಯ ಆಶೋತ್ತರಗಳನ್ನು ಈಡೇರಿಸುವ ಮತ್ತು ರಾಜ್ಯವನ್ನು ಪ್ರಗತಿಯ ಹೊಸ ಎತ್ತರಕ್ಕೆ ಒಯ್ಯುವ ಒಂದು ಚಾರಿತ್ರಿಕ ಅವಕಾಶ" ಎಂದು ಟ್ವೀಟ್ ಮಾಡಿದರು. ಮೇಲೆ ಹೇಳಿದಂತೆ ಈ 'ಚಾರಿತ್ರಿಕ ಅವಕಾಶ' ಕಲ್ಪಿಸಿಕೊಳ್ಳುವಲ್ಲಿ ರಾಮ್ ಮಾಧವ್‌ರದ್ದು ಪ್ರಮುಖ ಪಾತ್ರ ಎನ್ನಲಾಗಿತ್ತು.

ಮೂರು ವರ್ಷಗಳ ನಂತರ ಆ ರಾಜ್ಯದಲ್ಲಿನ ಸ್ಥಿತಿಯೇನು ಎಂದು ಎಲ್ಲರಿಗೂ ಗೊತ್ತು. ಜಮ್ಮುವಿನ ಕಥುವಾದಲ್ಲಿ 8 ವರ್ಷದ ಅಲೆಮಾರಿ ಜನಾಂಗದ ಬಾಲಕಿಯ ಮೇಲೆ ಅತ್ಯಾಚಾರ ಮತ್ತು ಕೊಲೆಯ ಭೀಕರ ಘಟನೆಯ ಬಗ್ಗೆ ಆಳ್ವಿಕೆ ನಡೆಸುತ್ತಿರುವ ಪಕ್ಷಗಳ ನಡುವಿನ ಹೊಲಸು ಜಟಾಪಟಿ ಈ 'ಸಿದ್ಧಾಂತ'ದ ನಿಜ ಸ್ವರೂಪದ ಬಗ್ಗೆ ಬೆಳಕು ಚೆಲ್ಲಬಹುದೇನೋ. ಯೇನಕೇನ ಪ್ರಕಾರೇಣ ಸಮಯಸಾಧಕರನ್ನು ಸೃಷ್ಟಿಸುವುದು, ಅವರ ಮೂಲಕ ಅಧಿಕಾರಕ್ಕೇರುವುದು ಇದೇ ಆ 'ಸಿದ್ಧಾಂತ' ಎಂಬ ತೀರ್ಮಾನಕ್ಕೆ ಬರಬಹುದೇನೋ. ನಿಜ, ಅದರಲ್ಲಿ ಅವರಿಗೆ ಸಾಕಷ್ಟು ಗೆಲುವು ಸಿಕ್ಕಿದೆ.

ಈ ನಡುವೆ ಅವರ ಎನ್‌ಡಿಎ ಸರಕಾರದ ಭಾಗವಾಗಿದ್ದ ತೆಲುಗುದೇಶಂನ ಇಬ್ಬರೂ ಮಂತ್ರಿಗಳು ಸಂಪುಟದಿಂದ ಹೊರ ನಡೆದಿದ್ದಾರೆ.- ಆಂಧ್ರಪ್ರದೇಶಕ್ಕೆ ವಿಶೇಷ ಪ್ಯಾಕೇಜ್ ಕೊಡುವ ಭರವಸೆಯನ್ನು ಪ್ರಧಾನಿಗಳು ಈಡೇರಿಸಿಲ್ಲ ಎಂದು ಪ್ರತಿಭಟಿಸಿ. ಇದು ಅವರ 'ಸೈದ್ಧಾಂತಿಕ ಗೆಲುವೋ ಸೋಲೋ?



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಬ್ಯಾಂಕುಗಳು ಸರ್ಕಾರದ ಒಡೆತನದಲ್ಲೇ ಇರಬೇಕು: ಏಕೆ?



ಬ್ಯಾಂಕಿಂಗ್ ವ್ಯವಸ್ಥೆಯೇ ಹಣಕಾಸು ವಲಯದ ತಿರುಳು. ದೇಶದ ಅರ್ಥವ್ಯವಸ್ಥೆ ಸದೃಢವಾಗಿ ಬೆಳೆಯಬೇಕೆಂದಾದರೆ, ಬ್ಯಾಂಕಿಂಗ್ ವ್ಯವಸ್ಥೆಯು ಸುಸ್ಥಿತಿಯಲ್ಲಿ ಉಳಯುವಂತೆ ನೋಡಿಕೊಳ್ಳಬೇಕಾಗುತ್ತದೆ. ಬ್ಯಾಂಕಿಂಗ್ ವ್ಯವಸ್ಥೆಯು ಸುಸ್ಥಿತಿಯಲ್ಲಿ ಉಳಯಬೇಕಾದರೆ ಅವುಗಳ ಮೇಲೆ ಬಿಗಿಯಾದ ನಿಯಂತ್ರಣವಿರಬೇಕಾಗುತ್ತದೆ. ಬಿಗಿಯಾದ ನಿಯಂತ್ರಣವಿರಬೇಕು ಎಂದಾದರೆ, ಬ್ಯಾಂಕುಗಳು ಸರ್ಕಾರದ ಒಡೆತನದಲ್ಲಿರಬೇಕಾಗುತ್ತದೆ.

ಕಳೆದ ಎರಡು ವರ್ಷಗಳಿಂದಲೂ ವಸೂಲಾಗದ ಸಾಲಗಳ ಸುಳಿಯಲ್ಲಿ ಸಿಕ್ಕಿ ಒದ್ದಾಡುತ್ತಿರುವ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ನೀರವ್ ಮೋದಿ ಹಗರಣವು ಗಾಯದ ಮೇಲೆ ಉಪ್ಪು ತಿಕ್ಕಿದಂತಿದೆ. ಸಾರ್ವಜನಿಕ ವಲಯದ ಬ್ಯಾಂಕುಗಳ ಉಸ್ತುವಾರಿ ಹೊತ್ತ ಆಯಾ ಬ್ಯಾಂಕಿನ ಆಡಳಿತ ಮಂಡಳಿಗಳಿಂದ ಹಿಡಿದು, ಹಿಂದಿನ ಮತ್ತು ಇಂದಿನ ಕೇಂದ್ರ ಮಂತ್ರಿಮಂಡಲಗಳಲ್ಲಿ ಸಂಬಂಧಿಸಿದ ಮಂತ್ರಿಗಳ ಕರ್ತವ್ಯ ಲೋಪದ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಹಳ್ಳಕ್ಕೆ ಬಿದ್ದ ಕುರಿಯ ಮೇಲೆ ಕಲ್ಲು ಎಸೆಯುವವರ ಹಾಗೆ ಮತ್ತು ಇಂತಹ ಅವಕಾಶಕ್ಕಾಗಿಯೇ ಹಾತೊರೆಯುತ್ತಿದ್ದವರ ಹಾಗೆ, ಕಾರ್ಪೊರೇಟ್ ವಲಯದ ಸಂಸ್ಥೆಗಳು ಮತ್ತು ಅವರ ಆಪ್ತರು, ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಒದಗಿರುವ ದುರವಸ್ಥೆಯಿಂದ ಅವುಗಳನ್ನು ಪಾರು ಮಾಡಲು, ಅವುಗಳ ಒಡೆತನವನ್ನು ಖಾಸಗಿಯವರಿಗೆ ಬಿಟ್ಟುಕೊಡಬೇಕು ಎಂದು ಆಗ್ರಹಿಸಿದ್ದಾರೆ. ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದ ಸಾವಿರಾರು ಕೋಟಿ ರೂಪಾಯಿಗಳ ಸಾಲವನ್ನು ತೀರಿಸುವ ಇರಾದೆಯೇ ಇಲ್ಲದವರು ಮತ್ತು ತಮಗೆ ಸಾಲ ಕೊಟ್ಟ ಬ್ಯಾಂಕನ್ನೇ ಮುಳುಗಿಸುವ ಖದೀಮರು, ಇಂತಹವರನ್ನು ಒಳಗೊಂಡ ಖಾಸಗಿ ವಲಯಕ್ಕೆ ಸಾರ್ವಜನಿಕ ವಲಯದ ಬ್ಯಾಂಕುಗಳ ಒಡೆತನ ವರ್ಗಾಯಿಸುವುದೂ ಒಂದೇ, ಕಳ್ಳನಿಗೆ ಮನೆ ಕಾಯುವ ಜವಾಬ್ದಾರಿ ವಹಿಸುವುದೂ ಒಂದೇ.

736 ಖಾಸಗಿ ಬ್ಯಾಂಕುಗಳು ವಿಫಲವಾಗಿದ್ದವು

ಸಾರ್ವಜನಿಕ ವಲಯದ ಬ್ಯಾಂಕುಗಳ ಜೊತೆ ಹೋಲಿಸಿದಾಗ, ಒಟ್ಟಾರೆಯಾಗಿ, ಖಾಸಗಿ ವಲಯದ ಬ್ಯಾಂಕುಗಳ ವೈಫಲ್ಯವು (ಅಂದರೆ, ಹಣ ಇಟ್ಟ ಠೇವಣಿದಾರನಿಗೆ ಅದನ್ನು ವಾಪಸ್ ಕೊಡಲಾಗದ ಬ್ಯಾಂಕಿನ ಪರಿಸ್ಥಿತಿ) ಎದ್ದು ಕಾಣುತ್ತದೆ. ಬ್ಯಾಂಕ್ ರಾಷ್ಟ್ರೀಕರಣದ ಹಿಂದಿನ ಇಪ್ಪತ್ತು ವರ್ಷಗಳಲ್ಲಿ ದೇಶದ 736 ಖಾಸಗಿ ಬ್ಯಾಂಕುಗಳು ವಿಫಲವಾಗಿವೆ. ಅಂದರೆ, ಅವುಗಳ ಅಸ್ತಿತ್ವವೇ ಇಲ್ಲದಂತಾಗಿದೆ – ಒಂದೋ ಸಂಪೂರ್ಣವಾಗಿ ಮುಳುಗಿವೆ, ಇಲ್ಲವೇ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದ ಬ್ಯಾಂಕುಗಳೊಂದಿಗೆ ವಿಲೀನವಾಗಿವೆ. ರಾಷ್ಟ್ರೀಕರಣದ (1969) ನಂತರದಲ್ಲಿಯೂ 36 ಖಾಸಗಿ ಬ್ಯಾಂಕುಗಳು ವಿಫಲವಾಗಿವೆ. ಆದರೆ, ಸಾರ್ವಜನಿಕ ವಲಯದ ಯಾವುದೇ ಬ್ಯಾಂಕ್ ಈ ವರೆಗೆ ವಿಫಲವಾಗಿಲ್ಲ ಮತ್ತು ಖಾಸಗಿ ಬ್ಯಾಂಕುಗಳ ವೈಫಲ್ಯವನ್ನು ತಡೆಗಟ್ಟುವ ಉದ್ದೇಶದ ಜೊತೆಗೆ ದೇಶದ ಸಮತೋಲ ಅಭಿವೃದ್ಧಿ ಸಾಧಿಸುವ ಉದ್ದೇಶದಿಂದಲೇ 20 ಅತಿ ದೊಡ್ಡ ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲಾಗಿತ್ತು.

ಠೇವಣಿದಾರರ ಹಣದ ಸುರಕ್ಷತೆ, ಶ್ರೀಸಾಮಾನ್ಯರಿಗೆ ಬ್ಯಾಂಕಿಂಗ್ ಸೌಲಭ್ಯ, ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕ್ ಶಾಖೆ ತೆರೆಯುವ ಮೂಲಕ ಕೃಷಿಕರಿಗೆ ಸಾಲ ಒದಗಿಸುವುದು, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಾಲ ಒದಗಿಸುವುದು ಹಾಗೂ ಸಾಮಾಜಿಕ ನ್ಯಾಯದ ಮೂಲಕ ದೆ?ಶದ ಆರ್ಥಿಕ ಅಭಿವೃದ್ಧಿ ಹಮ್ಮಿಕೊಳ್ಳುವುದು ಇಂತಹ ಉದ್ದೇಶಗಳೊಂದಿಗೆ ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲಾಗಿತ್ತು. ರಾಷ್ಟ್ರೀಕರಣ ಅನಿವಾರ್ಯವಾಗಿತ್ತು. ಏಕೆಂದರೆ, ಈ ಎಲ್ಲ ಉದ್ದೇಶಗಳನ್ನು ಖಾಸಗಿ ಬ್ಯಾಂಕ್‌ಗಳು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದವು. ಈ ಅಂಶಗಳಿಗೆ ಸಂಬಂಧಿಸಿದಂತೆ, ಈಗಲೂ, ಖಾಸಗಿ ವಲಯದ ಕೊಡುಗೆ ನಗಣ್ಯವೇ. ಹಾಗಾಗಿ, ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ಖಾಸಗಿ ವಲಯದ ಒಡೆತನಕ್ಕೆ ಒಳಪಡಿಸುವುದು ಅಂದರೆ ಅದು ರಾಷ್ಟ್ರೀಕರಣದ ಉದ್ದೇಶಗಳಿಗೆ ಮಾಡಿದ ಅಪಚಾರವೂ ಮತ್ತು ಠೇವಣಿದಾರರ ಹಿತಕ್ಕೆ ಧಕ್ಕೆಯೂ ಆಗುತ್ತದೆ.

ಅಮೆರಿಕಾ –ಯೂರೋಪಿನ ಅತಿ ದೊಡ ಖಾಸಗಿ ಬ್ಯಾಂಕ್‌ಗಳು ವಿಫಲವಾದದ್ದೇಕೆ?

2008ರ ಜಾಗತಿಕ ಹಣಕಾಸು ಬಿಕ್ಕಟ್ಟಿನ ಸಂದರ್ಭದಲ್ಲಿ ಅಮೆರಿಕಾ ಮತ್ತು ಯೂರೋಪಿನ ಹಲವಾರು ಅತಿ ದೊಡ್ಡ ಖಾಸಗಿ ಬ್ಯಾಂಕ್‌ಗಳು ಬಿರುಗಾಳಿಗೆ ಸಿಕ್ಕ ತರಗೆಲೆಗಳಂತಾದವು. ಅಂತಹ ಸಮಯದಲ್ಲೂ ನಮ್ಮ ದೇಶದ ಬ್ಯಾಂಕಿಂಗ್ ವ್ಯವಸ್ಥೆ ಸ್ಥಿರವಾಗಿಯೇ ಇತ್ತು. ಈ ಸ್ಥಿರತೆಯ ಹಿಂದೆ ಇದ್ದ ಏಕೈಕ ಅಂಶವೆಂದರೆ ಅದು ರಾಷ್ಟ್ರೀಕೃತ ಬ್ಯಾಂಕ್‌ಗಳು ನಮ್ಮ ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಿಂಹ ಪಾಲು ಹೊಂದಿದ್ದವು ಮತ್ತು ಅವುಗಳಿಗೆ ಜೂಜುಕೋರ ವ್ಯವಹಾರಗಳಲ್ಲಿ ತೊಡಗುವ ಅನುಮತಿ ಇರಲಿಲ್ಲ.

ದಕ್ಷತೆ ಮತ್ತು ಲಾಭ–ಗಳಿಕೆಯಲ್ಲಿ ಖಾಸಗಿ ಬ್ಯಾಂಕ್‌ಗಳು ಯಾವಾಗಲೂ ಮುಂದು; ಖಾಸಗಿ ಬ್ಯಾಂಕ್‌ಗಳು ದಗಾ, ವಂಚನೆ ಮುಂತಾದ ಹಗರಣಗಳಿಂದ ಮುಕ್ತವಾಗಿವೆ ಎಂಬ ಅನಿಸಿಕೆ ವ್ಯಾಪಕವಾಗಿದೆ. ಹಾಗಾದರೆ, ಸಮರ್ಥ ಆಡಳಿತ – ನಿರ್ವಹಣೆಗಳಿಗೆ ಒಳಪಟ್ಟಿದ್ದ ಅಮೆರಿಕಾ ಮತ್ತು ಯೂರೋಪಿನ ಹಲವಾರು ಅತಿ ದೊಡ್ಡ ಖಾಸಗಿ ಬ್ಯಾಂಕ್‌ಗಳು ಏಕೆ ವಿಫಲವಾದವು? ದಕ್ಷತೆ ಮತ್ತು ಲಾಭ–ಗಳಿಕೆಯಲ್ಲಿ ಖ್ಯಾತಿಗಳಿಸಿದ್ದ ಈ ದೊಡ್ಡ ಖಾಸಗಿ ಬ್ಯಾಂಕ್‌ಗಳು ಊಹಿಸಲಾಗದಷ್ಟು ದೊಡ್ಡ ಮೊತ್ತದ ನಷ್ಟ ಏಕೆ ಅನುಭವಿಸಿದವು? ಅಮಾಯಕ ಠೇವಣಿದಾರರ ಮೇಲೆ ಬೀಳುವ ಇಂತಹ ವೈಫಲ್ಯಗಳ ಹೊರೆಯನ್ನು ಹೊರುವವರು ಯಾರು? ಈ ಪ್ರಶ್ನೆಗಳಿಗೆ ಖಾಸಗೀಕರಣದ ವೀರರು ಉತ್ತರ ಕೊಡಬೇಕಿದೆ.

2008ರಲ್ಲಿ, ಅಮೆರಿಕಾದ ಲೆಹ್ಮನ್ ಬ್ರದರ್ಸ್, ಮೆರಿಲ್ ಲಿಂಚ್, ಏಐಜಿ ಮುಂತಾದ ಅತಿ ದೊಡ್ಡ ಖಾಸಗಿ ಬ್ಯಾಂಕ್‌ಗಳು ಮುಳುಗಿದಾಗ, ಠೇವಣಿದಾರರ ಹಿತ ರಕ್ಷಣೆಗಾಗಿ, ಅಮೆರಿಕಾದ ಸರ್ಕಾರವು ತನ್ನ ಬೊಕ್ಕಸದಿಂದ (ತೆರಿಗೆದಾರರ ಹಣ) ಸುಮಾರು 750 ಬಿಲಿಯನ್ ಡಾಲರ್ ಹಣ ಹೂಡಿಕೆಯ ಮೂಲಕ ಒಂದು ಪಾರು ಯೋಜನೆ ರೂಪಿಸಬೇಕಾಯ್ತು. 1995ರಲ್ಲಿ, ಇನ್ನೂರು ವರ್ಷಗಳ ಕಾಲ ಬಾಳಿದ್ದ ಬ್ರಿಟನ್ನಿನ ಬೆರಿಂಗ್ಸ್ ಬ್ಯಾಂಕ್‌ನ ಪ್ರತಿನಿಧಿಯಾಗಿ ಸಿಂಗಪುರದಲ್ಲಿದ್ದ ನಿಕ್ ಲಿಸನ್ ಎಂಬಾತ ಮಾಡಿದ್ದ ಜೂಜುಕೋರ ಹೂಡಿಕೆಗಳಿಂದಾಗಿ, ಇಡೀ ಬ್ಯಾಂಕ್ ಹೇಳ ಹೆಸರಿಲ್ಲದಂತಾಯಿತು. ಇಂತಹದೇ ಪ್ರಮಾದಗಳಿಂದಾಗಿ, 2008ರಲ್ಲಿ ಫ್ರಾನ್ಸಿನ ಸೊಸೆಟಿ ಜನರೆಲ್ ಎಂಬ ಬ್ಯಾಂಕ್ ಐದು ಬಿಲಿಯನ್ ಡಾಲರ್ ಹಣ ಕಳೆದುಕೊಂಡಿತ್ತು; 2011ರಲ್ಲಿ ಯುಬಿಎಸ್ ಎಂಬ ಹೆಸರಿನ ಸ್ವಿಸ್ ಬ್ಯಾಂಕ್ ಎರಡು ಬಿಲಿಯನ್ ಡಾಲರ್ ಹಣ ಕಳೆದುಕೊಂಡಿತ್ತು. ಕೆಲವೇ ವರ್ಷಗಳ ಹಿಂದೆ, ಕಾನೂನು ಉಲ್ಲಂಘನೆ, ವಿದೇಶಿ ವಿನಿಮಯ ದರ ಮತ್ತು ಬಡ್ಡಿ ದರಗಳಿಗೆ ಸಂಬಂಧಿಸಿದಂತೆ ಅವ್ಯವಹಾರಗಳಲ್ಲಿ ತೊಡಗಿದ್ದರಿಂದಾಗಿ, ಹೆಚ್‌ಎಸ್‌ಬಿಸಿ ಮತ್ತು ಡ್ಯೂಷೆ ಬ್ಯಾಂಕ್‌ಗಳು ಇನ್ನೂರು ಬಿಲಿಯನ್ ಡಾಲರ್ ಮೊತ್ತದ ದಂಡ ತೆತ್ತಿವೆ.

ಆಕಸ್ಮಿಕವಲ್ಲ, ವ್ಯವಸ್ಥಾಗತ

ಇವೆಲ್ಲವೂ ಖಾಸಗಿ ಬ್ಯಾಂಕುಗಳೇ! ಈ ಎಲ್ಲ ಘಟನೆಗಳೂ ಸಂಭವಿಸಿದ್ದುದು ಆಕಸ್ಮಿಕವಾಗಿ ಅಲ್ಲವೇ ಅಲ್ಲ. ಅಥವಾ, ಇವು, ದುರಾಡಳಿತ/ನಿರ್ವಹಣೆಯ ಕೊರತೆಯಿಂದ ಉಂಟಾದ ಘಟನೆಗಳೂ ಅಲ್ಲ. ಬದಲಿಗೆ, ಈ ಘಟನೆಗಳ ಉಗಮವು ಬ್ಯಾಂಕಿಂಗ್ ವ್ಯವಸ್ಥೆಯ ಸಂರಚನೆಯಲ್ಲಿಯೇ ಅಡಗಿದೆ ಎಂಬುದಾಗಿ ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊಫೆಸರ್ ಸಿ.ಪಿ.ಚಂದ್ರಶೇಖರ್ ಅಭಿಪ್ರಾಯಪಡುತ್ತಾರೆ.

2008ರ ಹಣಕಾಸು ಬಿಕ್ಕಟ್ಟಿನ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ ಪ್ರೊಫೆಸರ್ ಚಂದ್ರಶೇಖರ್, ಖಾಸಗಿ ಬ್ಯಾಂಕುಗಳೇ ಪ್ರಧಾನವಾಗಿರುವ ಅಮೆರಿಕಾದ ಬ್ಯಾಂಕಿಂಗ್ ವ್ಯವಸ್ಥೆಯ ಸಂರಚನೆಗೆ ಮಾಡಿದ ಬದಲಾವಣೆಗಳಲ್ಲಿ ಅಸ್ಥಿರತೆ ಹೇಗೆ ಮತ್ತು ಯಾವಾಗ ಪ್ರವೇಶಿಸಿತು ಎಂಬುದನ್ನೂ ಮತ್ತು 2008ರ ಹಣಕಾಸು ಬಿಕ್ಕಟ್ಟಿನ ಬೇರುಗಳ ಮೂಲವು ಆ ಸಂರಚನೆಗೆ ಆಗಿರುವ ಪರಿವರ್ತನೆಯಲ್ಲಿಯೇ ಇದೆ ಎಂಬುದನ್ನೂ ಹೀಗೆ ಗುರುತಿಸಿದ್ದಾರೆ:

1929ರ ಷೇರು ಮಾರುಕಟ್ಟೆ ಪತನದಿಂದ ಆರಂಭವಾದ ಮಹಾ ಕುಸಿತದ(ಗ್ರೇಟ್ ಡಿಪ್ರಶನ್) ' ಪರಿಣಾಮವಾಗಿ, ಸಾಲು ಸಾಲಾಗಿ ಅಮೆರಿಕಾದ ಬ್ಯಾಂಕುಗಳು ವಿಫಲವಾದ ಹಿನ್ನೆಲೆಯಲ್ಲಿ, 1933ರಲ್ಲಿ ಅಮೆರಿಕಾದ ಸರ್ಕಾರವು ಬ್ಯಾಂಕಿಂಗ್ ಚಟುವಟಿಕೆಗಳನ್ನು ನಿಯಂತ್ರಿಸುವ ಕಾನೂನಿಗೆ ತಿದ್ದುಪಡಿ ಮಾಡಿತು. ಇದು, ಗ್ಲಾಸ್–ಸ್ಟಿಗಾಲ್ ಕಾಯಿದೆ ಎಂಬ ಹೆಸರು ಪಡೆದಿದೆ. ಈ ಕಾಯಿದೆಯು, ವಾಣಿಜ್ಯ ಬ್ಯಾಂಕಿಂಗ್ ಚಟುವಟಿಕೆಗಳು ಮತ್ತು ಹೂಡಿಕೆ ಬ್ಯಾಂಕಿಂಗ್ ಚಟುವಟಿಕೆಗಳ ನಡುವೆ ಒಂದು ಗೋಡೆಯನ್ನೇ ನಿರ್ಮಿಸಿತು ಮತ್ತು ಬ್ಯಾಂಕಿಂಗ್ ವ್ಯವಸ್ಥೆಯನ್ನು ಒಂದು ಬಿಗಿಯಾದ ನಿಯಂತ್ರಣಕ್ಕೆ ಒಳಪಡಿಸಿತು. ಈ ವಿಷಯವನ್ನು ಸರಳವಾಗಿ ಹೀಗೆ ಹೇಳಬಹುದು: ಬ್ಯಾಂಕುಗಳು ಸ್ವೀಕರಿಸಿದ ಠೇವಣಿ ಹಣವನ್ನು ಸಾಲ ಕೊಡಲು ಬಳಸುವುದರ ಹೊರತಾಗಿ ಬೇರೆ ವ್ಯವಹಾರಗಳಲ್ಲಿ ತೊಡಗಿಸುವಂತಿಲ್ಲ. ಹಾಗಾಗಿ, ಅವು ಗಳಿಸುತ್ತಿದ್ದ ಲಾಭದ ಪ್ರಮಾಣ ಸಣ್ಣದಿತ್ತು.

ಎರಡನೇ ಮಹಾಯುದ್ಧಾನಂತರದ ಅವಧಿಯಿಂದ 1970ರ ದಶಕದ ಆರಂಭದವರೆಗೂ ಈ ವ್ಯವಸ್ಥೆಯೇ ಮುಂದುವರೆಯಿತು. ಜೊತೆಯಲ್ಲಿ, ಬಿಗಿ ನಿಯಂತ್ರಣದಿಂದಾಗಿ ಹೆಚ್ಚಿನ ಲಾಭಗಳಿಕೆಗೆ ಅವಕಾಶ ಇಲ್ಲದ ಕಾರಣದಿಂದ ಬ್ಯಾಂಕಿಂಗ್ ಸಂಸ್ಥೆಗಳ ಅಸಮಾಧಾನ ಹೆಚ್ಚುತ್ತಾ ಹೋಯಿತು. ಅಮೆರಿಕಾದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಮೇಲುಗೈ ಹೊಂದಿದ್ದ ಖಾಸಗಿ ಬ್ಯಾಂಕುಗಳು ತಮ್ಮ ಮೇಲೆ ಹೇರಿದ್ದ ನಿಯಂತ್ರಣವನ್ನು ಕೊನೆಗೊಳಿಸುವಂತೆ ಸರ್ಕಾರದ ಮೇಲೆ ಒತ್ತಡ ಹಾಕಿದವು. ಸರ್ಕಾರ ಮಣಿಯಿತು. ಕ್ರಮೇಣ, ಅವುಗಳ ಹೂಡಿಕೆಯು ಅಪಾರ ಲಾಭ ತರುವ ಜೂಜುಕೋರ ಉತ್ಪನ್ನ(ಇವುಗಳನ್ನು ನಂಜಿನ ಆಸ್ತಿಗಳೆಂದು ಕರೆಯುತ್ತಾರೆ) ಗಳತ್ತ ವಾಲಿತು. ಇಂತಹ ಅನೇಕ ಹೊಸ ಹೊಸ ಉತ್ಪನ್ನಗಳನ್ನು ಅವಿಷ್ಕಾರಗೊಳಿಸಿ ಅವುಗಳನ್ನು ಜೂಜಿಗೆ ಒಡ್ಡಿದಂತೆಲ್ಲಾ ಅವರ ಲಾಭ ಮತ್ತು ಅದಕ್ಕಿಂತ ದೊಡ್ಡ ರಿಸ್ಕ್ ಹೆಚ್ಚಿದವು. ಷೇರು ಮಾರುಕಟ್ಟೆಯಲ್ಲಿ ವೈಪರೀತ್ಯಗಳುಂಟಾದವು. ನಂತರದಲ್ಲಿ ಉಂಟಾದದ್ದು 2008ರ ಹಣಕಾಸು ಬಿಕ್ಕಟ್ಟು

ಇನ್ನೊಂದು ಮುಖ–'ಟ್ರಿಕೀ ಲಯೆಬಿಲಿಟೀಸ್'

ಖಾಸಗಿ ಬ್ಯಾಂಕುಗಳ ಮತ್ತು ಇಲ್ಲಿರುವ ವಿದೇಶಿ ಬ್ಯಾಂಕುಗಳ ಒಂದು ಅತಿ ಮುಖ್ಯವಾದ ಮತ್ತು ಬಹಳ ಮಂದಿಗೆ ಗೊತ್ತಿಲ್ಲದ ಇನ್ನೊಂದು ಮುಖವೆಂದರೆ, ಅದು ಅವು ಹೊತ್ತಿರುವ ಬೃಹತ್ ಗಾತ್ರದ ಚಮತ್ಕಾರಿ ಬಾಧ್ಯತೆಗಳು(ಟ್ರಿಕೀ ಲಯೆಬಿಲಿಟೀಸ್). ಈ ಬಾಧ್ಯತೆಗಳು ಆಯ–ವ್ಯಯ(ಬ್ಯಾಲೆನ್ಸ್ ಶೀಟ್) ಪಟ್ಟಿಯಲ್ಲಿ ಕಾಣಿಸಿಕೊಳ್ಳುವುದೇ ಇಲ್ಲ. ಏಕೆಂದರೆ, ಅವುಗಳ ಮೊತ್ತ ನಿಖರವಾಗಿರುವುದಿಲ್ಲ. ಡೆರಿವೆಟಿವ್ಸ್, ಗ್ಯಾರಂಟಿಗಳು, ಲೆಟರ್ ಆಫ್ ಕ್ರೆಡಿಟ್, ಲೆಟರ್ ಆಫ್ ಅಂಡರ್‌ಟೇಕಿಂಗ್ ಮುಂತಾದ ಕೆಲವು ಐಟಂಗಳಿಗೆ 'ಸಂಭವನೀಯ ಬಾಧ್ಯತೆಗಳು'(ಕಂಟಿಂಜೆಂಟ್ ಲಯೆಬಿಲಿಟೀಸ್) ಎಂಬ ಹೆಸರಿದೆ. ಇವುಗಳ ಮೊತ್ತವನ್ನು ಆಯ–ವ್ಯಯ ಪಟ್ಟಿಯಲ್ಲಿ ತೋರಿಸುವುದಿಲ್ಲ. ಜೂಜುಗಾರಿಕೆಗೆ ಬಳಸಿಕೊಳ್ಳುವ ಡೆರಿವೆಟಿವ್ಸ್ (ಇವುಗಳಲ್ಲಿ ನಂಜಿನ ಸ್ವರೂಪದ ಆಸ್ತಿಗಳದ್ದೇ ಬಹು ದೊಡ್ಡ ಪಾಲು) ಅಪಾರ ಲಾಭ ತಂದುಕೊಡುತ್ತವೆ. ಈ ಡೆರಿವೆಟಿವ್ಸ್‌ಗಳಿಂದಾಗಿಯೇ 2008ರಲ್ಲಿ ಅಮೆರಿಕಾ ಮತ್ತು ಯೂರೋಪಿನ ಅನೇಕ ಬ್ಯಾಂಕ್‌ಗಳು ಮುಳುಗಿದವು ನಂತರ ಹಣಕಾಸಿನ ಬಿಕ್ಕಟ್ಟು ಉಂಟಾಯಿತು. ಲೆಟರ್ ಆಫ್ ಅಂಡರ್‌ಟೇಕಿಂಗ್(ಮುಚ್ಚಳಿಕೆ ಪತ್ರ)ಗಳನ್ನು ಬಳಸಿಕೊಂಡು ನೀರವ್ ಮೋದಿ, ಹೊರ ದೇಶಗಳಲ್ಲಿರುವ ನಮ್ಮ ಬ್ಯಾಂಕ್ ಶಾಖೆಗಳಿಂದ 11,400 ಕೋಟಿ ರೂ. ಸಾಲ ಪಡೆದು ಅವುಗಳಿಗೆ ಪಂಗನಾಮ ಹಾಕಿದ್ದು.

ಭಾರತದ ಬ್ಯಾಂಕುಗಳ 2016–17 ವರ್ಷದ ಸಂಭವನೀಯ ಬಾಧ್ಯತೆಗಳ ಸಂಬಂಧವಾಗಿ, ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಆಘಾತ ಉಂಟುಮಾಡುವಂತಿವೆ: ಸಾರ್ವಜನಿಕ ವಲಯದ ಬ್ಯಾಂಕುಗಳ ಸಂಭವನೀಯ ಬಾಧ್ಯತೆಗಳು ಅವುಗಳ ಒಟ್ಟು ಆಸ್ತಿಗಳ ಶೇ.39 ರಷ್ಟಿವೆ; ಖಾಸಗಿ ವಲಯದ ಬ್ಯಾಂಕುಗಳ ಸಂಭವನೀಯ ಬಾಧ್ಯತೆಗಳು ಅವುಗಳ ಒಟ್ಟು ಆಸ್ತಿಗಳ ಶೇ.106 ರಷ್ಟಿವೆ; ವಿದೇಶಿ ಬ್ಯಾಂಕುಗಳ ವಲಯದ ಬ್ಯಾಂಕುಗಳ ಸಂಭವನೀಯ ಬಾಧ್ಯತೆಗಳು ಅವುಗಳ ಒಟ್ಟು ಆಸ್ತಿಗಳ ಶೇ. 626 ರಷ್ಟಿವೆ.

ಬ್ಯಾಂಕುಗಳ ಈ ಎಲ್ಲಾ ಎಡವಟ್ಟುಗಳಿಗೆ ಅವುಗಳ ಮೇಲಿನ ನಿಯಂತ್ರಣವನ್ನು ಸಡಿಲಗೊಳಿಸಿರುವುದೇ ಮುಖ್ಯ ಕಾರಣವಾಗಿದೆ. ಬ್ಯಾಂಕಿಂಗ್ ವ್ಯವಸ್ಥೆಯೇ ಹಣಕಾಸು ವಲಯದ ತಿರುಳು. ದೇಶದ ಅರ್ಥವ್ಯವಸ್ಥೆ ಸದೃಢವಾಗಿ ಬೆಳೆಯಬೇಕೆಂದಾದರೆ, ಬ್ಯಾಂಕಿಂಗ್ ವ್ಯವಸ್ಥೆಯು ಸುಸ್ಥಿತಿಯಲ್ಲಿ ಉಳಿಯುವಂತೆ ನೋಡಿಕೊಳ್ಳಬೇಕಾಗುತ್ತದೆ. ಬ್ಯಾಂಕಿಂಗ್ ವ್ಯವಸ್ಥೆಯು ಸುಸ್ಥಿತಿಯಲ್ಲಿ ಉಳಿಯಬೇಕಾದರೆ ಅವುಗಳ ಮೇಲೆ ಬಿಗಿಯಾದ ನಿಯಂತ್ರಣವಿರಬೇಕಾಗುತ್ತದೆ. ಬಿಗಿಯಾದ ನಿಯಂತ್ರಣವಿರಬೇಕು ಎಂದಾದರೆ, ಬ್ಯಾಂಕುಗಳು ಸರ್ಕಾರದ ಒಡೆತನದಲ್ಲಿರಬೇಕಾಗುತ್ತದೆ. ಆಗ ಮಾತ್ರ, ನಿಯಂತ್ರಣ ಸಡಿಲಗೊಳಿಸುವ ಒತ್ತಡಗಳಿಂದ ತಪ್ಪಿಸಿಕೊಳ್ಳಬಹುದು.

"ತನ್ನ ಕಾರ್ಯಕ್ಷಮತೆ ಮತ್ತು ಲಾಭದಾಯಕತೆಯ ದೃಷ್ಟಿಯಿಂದ ನೋಡಿದಾಗ, ಬ್ಯಾಂಕಿಂಗ್ ವ್ಯವಸ್ಥೆಯು ಸಾರ್ವಜನಿಕ ವಲಯದಲ್ಲಿರುವುದೇ ಒಳ್ಳೆಯದು ಎಂದು ಬಂಡವಾಳಶಾಹಿಗೂ ಅನಿಸುತ್ತಿರಬಹುದು" ಎಂದು ಪ್ರೊಫೆಸರ್ ಚಂದ್ರಶೇಖರ್ ಹೇಳುತ್ತಾರೆ. ○



ರಾಷ್ಟ್ರೀಕರಣದ ಹಿಂದಿನ ಇಪ್ಪತ್ತು ವರ್ಷಗಳಲ್ಲಿ ದೇಶದ 736 ಖಾಸಗಿ ಬ್ಯಾಂಕುಗಳು ವಿಫಲವಾಗಿದ್ದವು. ರಾಷ್ಟ್ರೀಕರಣದ (1969) ನಂತರದಲ್ಲಿಯೂ 36 ಖಾಸಗಿ ಬ್ಯಾಂಕುಗಳು ವಿಫಲವಾಗಿವೆ. ಆದರೆ, ಸಾರ್ವಜನಿಕ ವಲಯದ ಯಾವುದೇ ಬ್ಯಾಂಕ್ ಈ ವರೆಗೆ ವಿಫಲವಾಗಿಲ್ಲ ಮತ್ತು ಖಾಸಗಿ ಬ್ಯಾಂಕುಗಳ ವೈಫಲ್ಯವನ್ನು ತಡೆಗಟ್ಟುವ ಉದ್ದೇಶದ ಜೊತೆಗೆ ದೇಶದ ಸಮತೋಲ ಅಭಿವೃದ್ಧಿ ಸಾಧಿಸುವ ಉದ್ದೇಶದಿಂದಲೇ 20 ಅತಿ ದೊಡ್ಡ ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲಾಗಿತ್ತು.







ಬಿಜೆಪಿ ಸರಕಾರದ ವಿಶ್ವಾಸದ್ರೋಹವನ್ನು ಬಯಲಿಗೆಳೆಯುತ್ತಿರುವ ಮಹಾರಾಷ್ಟ್ರದ ರೈತರ 200 ಕಿ.ಮೀ.'ಲಾಂಗ್ ಮಾರ್ಚ್'

ರಾಜ್ಯಗಳ ಸುತ್ತ

ಹಿಂದಿನ ಸಂಚಿಕೆಯಲ್ಲಿ ಈ ಪುಟದಲ್ಲಿ ವರದಿಯಾದಂತೆ ಮಹಾರಾಷ್ಟ್ರ ರಾಜ್ಯ ಕಿಸಾನ್ ಸಭಾದ ನೇತೃತ್ವದಲ್ಲಿ ನಾಶಿಕ್‌ನಿಂದ ಮುಂಬೈಗೆ ರೈತರ 'ಲಾಂಗ್ ಮಾರ್ಚ್'(ದೀರ್ಘ ನಡೆ) ಮಾರ್ಚ್ 6 ರಂದು ಸಂಜೆ 4.30ಕ್ಕೆ ನಾಶಿಕ್‌ನ ಕೇಂದ್ರೀಯ ಬಸ್ ನಿಲ್ದಾಣದಿಂದ ಆರಂಭವಾಗಿದೆ. ಇದರ ಒಂದು ಗಮನಾರ್ಹ ಸಂಗತಿಯೆಂದರೆ ಸಾವಿರಾರು ರೈತ ಮಹಿಳೆಯರೂ ಇದರಲ್ಲಿ ಭಾಗವಹಿಸುತ್ತಿರುವುದು. ಅವರೂ 200 ಕಿ.ಮಿ. ದೂರದ ಮುಂಬೈಗೆ ಕಾಲ್ನಡಿಗೆಯಲ್ಲೇ ಹೊರಟಿದ್ದಾರೆ.

ಅಂದು ಆ ಇಡೀ ಪ್ರದೇಶ ನೂರಾರು ಕೆಂಬಾವುಟಗಳು, ಬ್ಯಾನರುಗಳು, ಮತ್ತು ಬೆಳೆಗಳಿಗೆ ಫಲದಾಯಕ ಬೆಲೆಗಳು, ರೈತರ ಸಾಲಮನ್ನಾ, ಅರಣ್ಯ ಹಕ್ಕುಗಳ ಜಾರಿ, ಬಡ ರೈತರಿಗೆ ಮತ್ತು ಕೃಷಿ ಕೂಲಿಕಾರರಿಗೆ ಪೆನ್ಶನ್ ಮತ್ತಿತರ ಕಳೆದ ಎರಡು ವರ್ಷಗಳ ವಿವಿಧ ಹೋರಾಟಗಳಲ್ಲಿ, 11 ದಿನಗಳ ಚಾರಿತ್ರಿಕ ರೈತ ಮುಷ್ಕರದಲ್ಲಿ ಎತ್ತಿದ್ದ ರೈತರ ಬೇಡಿಕೆಗಳನ್ನು ಹೊತ್ತ, ಬಿಜೆಪಿ ರಾಜ್ಯ ಸರಕಾರದ ವಿಶ್ವಾಸದ್ರೋಹವನ್ನು ನೆನಪಿಸುವ ಕೆಂಪು ಘೋಷಣಾ ಫಲಕಗಳಿಂದ ತುಂಬಿ ಹೋಗಿತ್ತು. ಜತೆಗೆ ಮಹಾರಾಷ್ಟ್ರದ ರೈತರು ಸಾಮಾನ್ಯವಾಗಿ ತೊಡುವ ಮಣ್ಣಿನ ಬಣ್ಣಕ್ಕೆ ತಿರುಗುತ್ತಿರುವ ಬಿಳಿ ಟೋಪಿಗಳ ಬದಲು ಅದನ್ನೆ ಹೋಲುವ ಈ ಸಂದರ್ಭಕ್ಕೆಂದೇ ತಯಾರಿಸಿದ ಕೆಂಪು ಟೋಪಿಗಳನ್ನು ಧರಿಸಿದ ಸಾವಿರಾರು ರೈತರು– ಇಡಿ ಪ್ರದೇಶ 'ಲಾಲೋಲಾಲ್' ಆಗಿತ್ತು.

ಒಂದು ಬೃಹತ್ ಸಾರ್ವಜನಿಕ ಸಭೆಯ ನಂತರ ಈ ಲಾಂಗ್ ಮಾರ್ಚ್ ಆರಂಭವಾಯಿತು. ಸಭೆಯನ್ನುದ್ದೇಶಿಸಿ ಅಖಿಲ ಭಾರತ ಕಿಸಾನ್ ಸಭಾ ಮುಖಂಡರಲ್ಲದೆ, ಪೆಸಂಟ್ಸ್ ಅಂಡ್ ವರ್ಕರ್ಸ್ ಪಾರ್ಟಿಯ ಮುಖಂಡರೂ, ಈ ಹಿಂದೆ ರಾಜ್ಯದಲ್ಲಿ ಮಂತ್ರಿಗಳೂ ಆಗಿದ್ದ ಮೀನಾಕ್ಷಿ ಪಾಟೀಲ್ ಮತ್ತು ಸಿಐಟಿಯು ರಾಜ್ಯ ಅಧ್ಯಕ್ಷ ಡಾ.ಡಿ.ಎಲ್.ಕರಾಡ್ ಹಾಗೂ ಎಐಟಿಯುಸಿ ಮುಖಂಡ ರಾಜು ದೇಶ್ಲೆ ಮಾತಾಡಿದರು.

ಈ ಸಭೆಯಲ್ಲಿ ಮಾತಾಡಿದ ಭಾಷಣಕಾರರು ತ್ರಿಪುರಾದಲ್ಲಿ ಆರೆಸ್ಸೆಸ್–ಬಿಜೆಪಿ ಹಿಂಸಾಚಾರವನ್ನು ಬಲವಾಗಿ ಖಂಡಿಸಿದರು. ಲೆನಿನ್ ಅವರ ಪ್ರತಿಮೆಯ ಧ್ವಂಸ ಈ ಮಂದಿಗೆ ದೇಶದಲ್ಲಿ ಪೂರ್ಣ ಅಧಿಕಾರ ದೊರೆತರೆ ಮುಂದೆ ಪೆರಿಯಾರ್ ಮತ್ತು ಅಂಬೇಡ್ಕರ್ ಮಾತ್ರವಲ್ಲ, ಮಹಾತ್ಮ ಗಾಂಧಿ, ಭಗತ್‌ಸಿಂಗ್ ಮತ್ತಿತರ ಪ್ರಗತಿಪರ ನೇತಾರರ ಪ್ರತಿಮೆಗಳ ಮತ್ತು ಅವರು ಪ್ರತಿಪಾದಿಸಿದ ಸಮಾನತೆಯ ತತ್ವಗಳ ಧ್ವಂಸದ ಮುನ್ನೆಚ್ಚರಿಕೆಯಾಗಿದೆ ಎಂದು ಎಚ್ಚರಿಸಿದರು.



ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಡಾ.ಅಶೋಕ ಧವಳೆ, ಜಂಟಿ ಕಾರ್ಯದರ್ಶಿ ಡಾ. ವಿಜೂ ಕೃಷ್ಣನ್, ಹಿಂದಿನ ರಾಜ್ಯ ಅಧ್ಯಕ್ಷ ಮತ್ತು ಶಾಸಕ ಜೆ ಪಿ ಗವಿತ್, ಹಾಲಿ ರಾಜ್ಯ ಅಧ್ಯಕ್ಷ ಕಿಸಾನ್ ಗುಜರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಅಜಿತ್ ನವಲೆ ಮತ್ತಿತರರು ಈ ಲಾಂಗ್ ಮಾರ್ಚ್‌ನ ನೇತೃತ್ವ ವಹಿಸಿದ್ದಾರೆ.

20 ಕಿ.ಮೀ. ನಡಿಗೆಯ ನಂತರ ವಾಲ್ದೇವಿ ನದಿಯ ದಂಡೆಯಲ್ಲಿ ರೈತರು ಮೊದಲ ರಾತ್ರಿ ಕಳೆದರು. ತಾವು ಕಟ್ಟಿಕೊಂಡು ಬಂದಿದ್ದ ಚಟ್ನಿ–ಭಕ್ರಿ (ಜೋಳದ ಅಥವ ರಾಗಿಯ ರೊಟ್ಟಿ) ತಂದು ಮುಂಬೈ–ನಾಶಿಕ್, ಇಂದೋರ್–ಆಗ್ರಾ– ದಿಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದ ಮೈದಾನದಲ್ಲಿ ಮಲಗಿದರು.

ಮಾರ್ಚ್ 7ರಂದು ಮುಂಜಾವಿನಲ್ಲಿ ನಾಶಿಕ್ ಜಿಲ್ಲೆಯ ರೈತರ ನಡೆ ಇಗತ್‌ಪುರಿಯತ್ತ ಹೊರಟಿತು. ನಂತರ ಅದು ಥಾಣೆ ಜಿಲ್ಲೆಯನ್ನು ಪ್ರವೇಶಿಸಿತು. ಅಲ್ಲಿ ಥಾಣೆ–ಪಾಲ್ಘರ್ ಜಿಲ್ಲೆಯಿಂದ ಹೊರಟಿದ್ದ ರೈತರ ಇನ್ನೊಂದು ತುಕಡಿ ಈ ಲಾಂಗ್ ಮಾರ್ಚ್‌ನಲ್ಲಿ ಸೇರಿಕೊಂಡಿದೆ. ಮಾರ್ಚ್ 12ರಂದು ಈ ಸಾವಿರಾರು ರೈತರು ಮುಂಭೈ ತಲುಪುವಾ, ರಾಜ್ಯದ ಇತರ ಜಿಲ್ಲೆಗಳಿಂದ ಬರುವ ಇನ್ನೂ ಹಲವು ಸಾವಿರ ರೈತರು ಇವರನ್ನು ಸೇರಿಕೊಂಡು ಮಹಾರಾಷ್ಟ್ರ ವಿಧಾನಸಭೆಗೆ ಮುತ್ತಿಗೆ ಹಾಕಲಿದ್ದಾರೆ.

ರಾಷ್ಟ್ರೀಯ ಮಾಧ್ಯಮಗಳು ಎನಿಸಿಕೊಂಡವುಗಳು ದೇಶಾದ್ಯಂತ ರೈತರ ಆಕ್ರೋಶಕ್ಕೆ ಗುರಿಯಾಗಿರುವ ಮೋದಿ ಸರಕಾರದ ಘೋರ ವಿಫಲತೆಗಳನ್ನು ಮರೆಮಾಚಲು ಮೋದಿ–ಷಾ ಈಶಾನ್ಯ ಚಂಡಮಾರುತದ ಗುಣಗಾನದಲ್ಲೇ ಮಗ್ನರಾಗಿದ್ದರೂ, ಸ್ಥಳೀಯ ಮಾಧ್ಯಮಗಳು ಇದನ್ನು ಉಪೇಕ್ಷಿಸಲಾಗಿಲ್ಲ. ರಾಜ್ಯದ ಬಿಜೆಪಿ ಸರಕಾರ ರೈತರಿಗೆ ಬಗೆದಿರುವ ವಿಶ್ವಾಸ ದ್ರೋಹ ಜನಜನಿತಗೊಳ್ಳುತ್ತಿದೆ.

ಬುಡಕಟ್ಟು ಹುಡುಗ ಮಧು ಮನೆಗೆ ಕೇರಳ ಮುಖ್ಯಮಂತ್ರಿಗಳ ಭೇಟಿ

ಕೇರಳದ ಅಟ್ಟಪಾಡಿಯಲ್ಲಿ ಕಳೆದ ತಿಂಗಳು ಆಹಾರ ಕದ್ದನೆಂದು ಕೆಲವು ಮಂದಿ ಹೊಡೆದು ಸಾಯಿಸಿದ ಬುಡಕಟ್ಟು ಹುಡುಗ ಮಧು ಮನೆಗೆ ಮಾರ್ಚ್ 2ರಂದು ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭೇಟಿ ನೀಡಿ ಆತನ 30ವರ್ಷದ ತಾಯಿ, ಸೋದರಿ ಮತ್ತು ಇತರ ಸಂಬಂಧಿಕರನ್ನು ಭೇಟಿಯಾಗಿ ಕೊಲೆಗಡುಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ನಡೆಯುತ್ತಿರುವ ದ್ವೇಷಪೂರ್ಣ ಅಪಪ್ರಚಾರ ನಡೆಸುವವರ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳುವುದಾಗಿ ಅವರು ಹೇಳಿದರು.

ಈ ಸಂದರ್ಭದಲ್ಲಿ ಅವರು ಸರಕಾರೀ ಅಧಿಕಾರಿಗಳೊಂದಿಗೆ ಚರ್ಚಿಸಿ ಎಲ್ಲ ಜಿಲ್ಲೆಗಳಲ್ಲೂ ಎಲ್ಲ ಬುಡಕಟ್ಟು ಜನಗಳಿಗೂ ಸಾಕಷ್ಟು ಆಹಾರ, ಕುಡಿಯುವ ನೀರು ಮತ್ತು ಉದ್ಯೋಗಾವಕಾಶಗಳನ್ನು ಲಭ್ಯಗೊಳಿಸಲು ಸಂಬಂಧಪಟ್ಟ ಡಿಸಿಗಳು ಎಲ್ಲ ಕ್ರಮಗಳನ್ನೂ ಕೈಗೊಳ್ಳುತ್ತಾರೆ ಎಂದು ಆಶ್ವಾಸನೆಯಿತ್ತರು.



ಬುಡಕಟ್ಟು ಜನಗಳಿಗೆ ವರ್ಷದಲ್ಲಿ ಕನಿಷ್ಟ 200 ದಿನಗಳ ಉದ್ಯೋಗವನ್ನು ಲಭ್ಯಗೊಳಿಸಲು ಸರಕಾರ ನಿರ್ಧರಿಸಿದೆ ಎಂದು ಅವರು ಹೇಳಿದರು.

ಕುಡುಕತನಕ್ಕೆ ಬಲಿಯಾಗುವ ಸಮಸ್ಯೆ ಇಲ್ಲಿ ಹೆಚ್ಚಿದ್ದು ಅದರಿಂದ ಜನಗಳನ್ನು ದೂರ ಸೆಳೆಯಲು ಮತ್ತು ಅಂಗವಿಕಲರ ಪುನರ್ವಸತಿಗೂ ಕೂಡ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಅವರು ಹೇಳಿದರು.

ಖಗೇಂದ್ರ ಜಮಾತಿಯ

ತ್ರಿಪುರಾದ ಸಿಪಿಐ(ಎಂ) ಮುಖಂಡರೂ, ಎಡರಂಗ ಸರಕಾರದಲ್ಲಿ ಮೀನುಗಾರಿಕೆ, ಸಹಕಾರಿ ಮತ್ತು ಅಗ್ನಿಶಾಮಕ ಸೇವೆಗಳ ಇಲಾಖೆಯ ಮಂತ್ರಿಯೂ ಆಗಿದ್ದ ಖಗೇಂದ್ರ ಜಮಾತಿಯ ಮಾರ್ಚ್ 2ರಂದು ದಿಲ್ಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 63 ವರ್ಷ. ಮಾರ್ಚ್ 4ರಂದು ಅವರ ದೇಹವನ್ನು ಅಗರ್ತಲಾಕ್ಕೆ ತರಲಾಯಿತು. ತ್ರಪುರಾ ವಿಧಾನ ಸಭೆಯಲ್ಲಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.



ಖಗೇಂದ್ರ ಜಮಾತಿಯ ತನ್ನ ರಾಜಕೀಯ ಜೀವನ ಆರಂಭಿಸಿದ್ದು ಒಂದು ಉಗ್ರಗಾಮಿ ಬುಡಕಟ್ಟು ಸಂಘಟನೆಯಾದ ಟಿಎನ್‌ವಿಯಲ್ಲಿ. ಆದರೆ ಟಿಎನ್‌ವಿಯ ಮತಿಹೀನ ಕೊಲೆ ರಾಜಕೀಯದಿಂದ ಬೇಸತ್ತ ಕೆಲವರು ಅದರಿಂದ ಪ್ರತ್ಯೇಕಗೊಂಡು ಅಖಿಲ ತ್ರಿಪುರಾ ಜನತಾ ವಿಮೋಚನಾ ಸಂಘಟನೆ (ಎಟಿಪಿಎಲ್‌ಒ) ಎಂಬುದನ್ನು ರಚಿಸಿಕೊಂಡರು. ಅದು ರಚಿಸಿದ 'ಪ್ರತಿ ಸರಕಾರ'ದಲ್ಲಿ ಅವರು 'ಗೃಹಮಂತ್ರಿ'ಯೂ ಆಗಿದ್ದರು. ಆದರೆ ಪ್ರತ್ಯೇಕತಾವಾದಿ ರಾಜಕೀಯ ಬುಡಕಟ್ಟು ಜನಗಳಿಗೇ ಮಾರಕ ಎಂದು ಮನವರಿಕೆಯಾದ ಈ ಸಂಘಟನೆಯ ಹಲವರು 1983ರಲ್ಲಿ ಎಡರಂಗ ಸರಕಾರಕ್ಕೆ ಶರಣಾಗತರಾದರು, ಅವರಲ್ಲಿ ಖಗೇಂದ್ರ ಅವರು ಪ್ರಮುಖರು. ಅಂದಿನಿಂದ ಅವರು ಸಿಪಿಐ(ಎಂ) ನೇತೃತ್ವದ ಗಣಮುಕ್ತಿ ಪರಿಷದ್‌ನಲ್ಲಿ ಕೆಲಸ ಮಾಡಲಾರಂಭಿಸಿದರು. ಮುಂದೆ ಅವರು ಸಿಪಿಐ(ಎಂ) ಸೇರಿದರು. 1988ರಿಂದ ಸತತ ಆರು ಬಾರಿ ಅವರು ಶಾಸಕರಾಗಿ ಚುನಾಯಿತರಾಗಿದ್ದ ಅವರು ಸರಳ ಜೀವನ ಶೈಲಿ ಮತ್ತು ನೇರನುಡಿಗಳಿಂದ ಜನಪ್ರಿಯರಾಗಿದ್ದವರು.

ಸಿರಿಯಾ–ಅಮೆರಿಕಾದ ಮಿಲಿಟರಿ ಹಸ್ತಕ್ಷೇಪದ ಹುನ್ನಾರ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಸಿರಿಯಾದ ರಾಜಧಾನಿ ನಗರ ಡಮಾಸ್ಕಸ್‌ನ ಸಮೀಪದಲ್ಲಿರುವ ಉಪನಗರ ಪೂರ್ವ ಘೌಟದಲ್ಲಿ ಕಳೆದ ಹತ್ತು ದಿನಗಳಿಂದೀಚೆಗೆ ಏನು ನಡೆಯುತ್ತಿದೆ? ನೂರಾರು ನಾಗರೀಕರ ಸಾವು–ನೋವು–ಹಿಂಸೆಗಳು ಹಾಗೂ ಅಮಾಯಕ ಕಂದಮ್ಮಗಳ ದಾರುಣ–ಮಾರಣಾಂತಿಕ, ಹಿಂಸಾತ್ಮಕ ಸಾವುಗಳು ಇತ್ಯಾದಿಯಾಗಿ–ಮಾಧ್ಯಮಗಳ ಮೂಲಕ ನಾವು ನೋಡುತ್ತಿರುವ ದೃಷ್ಟಿ–ಗೋಚರ ಬಿರುಸಿನ ಬಾಂಬು ದಾಳಿಗಳನ್ನು ನಡೆಸುತ್ತಿರುವವರು ಯಾರು? ಮಾಧ್ಯಮಗಳು ಬಿತ್ತರಿಸುತ್ತಿರುವ ದೃಶ್ಯಾವಳಿಗಳು ಹಾಗೂ ವಿಮರ್ಶೆಗಳು ಅಲ್ಲಿನ ಪ್ರಕ್ಷುಬ್ಧ ಪರಿಸ್ಥಿತಿಯ ನೈಜ ಚಿತ್ರಣವೇ? ಯಾರದ್ದೊ ಪ್ರೇರಣೆಗೆ ಒಳಪಟ್ಟ ಸುಳ್ಳು ವಿಮರ್ಶೆಗಳೇ?

ಸಿರಿಯಾದಲ್ಲಿ ಕಳೆದ 6 ವರ್ಷಗಳಿಂದ ನಿರಂತರವಾಗಿ ಸಮರ ನಡೆಯುತ್ತಿದೆ. ಒಂದು ಅಂದಾಜಿನಂತೆ ಈಗಾಗಲೇ ಸುಮಾರು 4,00,000 ಕ್ಕಿಂತ ಅಧಿಕವಾಗಿ ಸಿರಿಯನ್ ನಾಗರೀಕರು ಈ ಯುದ್ಧದಿಂದ ಕೊಲ್ಲಲ್ಪಟ್ಟಿದ್ದಾರೆ. (ಜನಶಕ್ತಿ ಪತ್ರಿಕೆಯ – ಸಂಪುಟ 12, ಸಂಚಿಕೆ 1 ರಲ್ಲಿ–ಜನವರಿ 1–7, 2018 ರಲ್ಲಿ "ಸಿರಿಯಾದ ಸಮರ ಅಂತಿಮ ಘಟ್ಟದ ಸಮೀಪದಲ್ಲಿ" ನೋಡಿ)

ಸಿರಿಯಾ ಪಾಶ್ಚಿಮಾತ್ಯ ಪ್ರಭುತ್ವಗಳ ಮುತ್ತಿಗೆಯಿಂದ ಕಳೆದ ಆರು ವರ್ಷಗಳಿಂದ ನರಳಿ ಜರ್ಜರಿತಗೊಂಡಿದೆ. ಸಾಮ್ರಾಜ್ಯಶಾಹಿ ಅಮೆರಿಕ ಮತ್ತು ಯುರೋಪಿಯನ್ ಪ್ರೇರಿತ ಪ್ರಸಾರ – ಪ್ರಚಾರ ಮಾಧ್ಯಮಗಳು ಈ ಅಕ್ರಮಣಕಾರಿ ಕಾನೂನುಬಾಹಿರ ಯುದ್ಧವನ್ನು ಪೋಷಿಸಿಕೊಂಡು, ತಮ್ಮ ಮೂಗಿನ ನೇರಕ್ಕೆ ವಿಮರ್ಶಿಸಿ ಸಮರ್ಥಿಸಿಕೊಂಡು ಬರುತ್ತಿದ್ದಾರೆ. ಈ ನಿಟ್ಟಿನಲ್ಲಿ ನಿಜ ಪರಿಸ್ಥಿತಿಯನ್ನು ಮರೆ ಮಾಚಿ ತಿರುಚಲಾಗುತ್ತಿದೆ ಎಂಬುದನ್ನು ಮೊದಲು ಅರಿಯಬೇಕು. ಸಿರಿಯಾದ ಸ್ವಾತಂತ್ರ್ಯ, ಏಕತೆ ಸಮಗ್ರತೆಗೆ ಧಕ್ಕೆ ತರುವಂತ ಕೆಲಸವನ್ನು ಈ ಮಾಧ್ಯಮಗಳು ಮಾಡುತ್ತಿವೆ. ಸಿರಿಯಾದ ಅಧ್ಯಕ್ಷ 'ಬಷಾರ್ ಅಸ್ಸಾದ್' ರ ಆಡಳಿತದ ಬದಲಾವಣೆ ಹಾಗೂ ಅವರನ್ನು ಪದಚ್ಯುತಿಗೊಳಿಸಿ, ತನ್ನ ಸೇನಾ ಪಡೆಗಳ ನೇತೃತ್ವದ 'ಆಡಳಿತ' ಸ್ಥಾಪಿಸುವ ಮೂಲ; ಉದ್ದೇಶವನ್ನು ಹೊಂದಿರುವ ಅಮೆರಿಕ ಮತ್ತು ಬೆಂಬಲಿತರು ಈ ಯುದ್ಧಕ್ಕೆ ಮೂಲ ಕಾರಣವೆಂಬುದನ್ನು ಗಮನಿಸಬೇಕಾಗಿದೆ. ಇವರ 'ಹಸ್ತಕ್ಷೇಪ' ನಿಲ್ಲುವವರೆಗೂ ಸಿರಿಯಾದ ಯುದ್ಧ ಕೊನೆಗಾಣಲು ಅಸಾಧ್ಯ.

ಪೂರ್ವ ಘೌಟಾ ದಲ್ಲಿನ ವಾಸ್ತವ ಚಿತ್ರ

ರಶಿಯಾದ ಮಿಲಿಟರಿ ಬೆಂಬಲದೊಂದಿಗೆ ಸಿರಿಯಾ ಆಡಳಿತದ ಸೈನ್ಯ ಪಡೆಗಳು ರಾಜಧಾನಿ ಡಮಾಸ್ಕಸ್ ಸಮೀಪದಲ್ಲಿರುವ ಪೂರ್ವ ಘೌಟಾ ಉಪನಗರವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಪ್ರಸ್ತುತ ಪ್ರಕ್ಷುಬ್ಧ ಪರಿಸ್ಥಿತಿಗೆ ಕಾರಣವಾಗಿದ್ದಾರೆ ಎಂದು ಯು.ಎಸ್. ಮತ್ತು ಯುರೋಪಿಯನ್ ಮಾಧ್ಯಮಗಳು ನಿರಂತರವಾದ ಪ್ರಚಾರದಲ್ಲಿ ಮುಳುಗಿವೆ. ಇದು ಅಲ್ಲಿನ ವಾಸ್ತವ ಚಿತ್ರಣವನ್ನೂ ತಿರುಚುವ–ತಲೆಕೆಳಗು ಮಾಡುವ ಸುಳ್ಳು ಸುದ್ಧಿಗಳಾಗಿವೆ ಎಂದು ರಷ್ಯ ಮತ್ತು ಸಿರಿಯಾ ಹೇಳುತ್ತಿವೆ. ಆದಾಗ್ಯೂ, ಈ ಸತ್ಯ ಮತ್ತು ಸುಳ್ಳಿನ ನಡುವೆ ತೆಳುವಾದ ವ್ಯತ್ಯಾಸವಿದೆ ಅಷ್ಟೇ ಎಂದು ಪರಿಗಣಿಸಬಹುದು.

ಆರು ವರ್ಷಗಳ ಹಿಂದೆಯೇ, ಅಮೆರಿಕನ್ ಮತ್ತು ಯುರೋಪಿಯನ್ ಬೆಂಬಲಿತ ವಿವಿಧ ಸಶಸ್ತ್ರ ಗುಂಪುಗಳಾದ 'ಝುಯಾಶ್–ಅಲ್–ಇಸ್ಲಾಂ', ಅಹರ್–ಅಲ್–ಶಾಮ್ ಮತ್ತು ಆಲ್–ಖೈದಾ ಹುಟ್ಟು ಹಾಕಿದ ಅಲ್–ನುಸ್ರಾ ಫ್ರೆಂಟ್ ಮುಂತಾದವರು ಈ ಪೂರ್ವ ಘೌಟಾ ಉಪನಗರವನ್ನು ತಮ್ಮ ನಿಯಂತ್ರಣದಲ್ಲಿಯೇ ಹಿಡಿದಿಟ್ಟುಕೊಂಡಿದ್ದಾರೆ. ಇವರೊಂದಿಗೆ ಬಷಾರ್ ಆಡಳಿತದ ಸೈನಾ ಪಡೆಗಳು ತನ್ನ ಸ್ವಾಯತ್ತತೆಯ ವ್ಯಾಪ್ತಿಯೊಳಗೆ ಬರುವ ಈ ಉಪನಗರದ ಜನರ ರಕ್ಷಣೆಗಾಗಿ, ಸಶಸ್ತ್ರ ಗುಂಪುಗಳೊಂದಿಗೆ ಸಮರದಲ್ಲಿ ನಿರತರಾಗಿದ್ದಾರೆ. ಬಷರ್ ಅಸ್ಸಾದ್ ರವರ ಕೋರಿಕೆಯ ಮೇರೆಗೆ ರಷ್ಯಾ 2015 ರಲ್ಲಿ ಸಿರಿಯಾ ಯುದ್ಧ ಭೂಮಿಗೆ ಪ್ರವೇಶಿಸಿತು.

ಪೂರ್ವ ಘೌಟಾ ಉಪನಗರವನ್ನು ವಶಪಡಿಸಿಕೊಂಡಿರುವ ಸಶಸ್ತ್ರ ಗುಂಪುಗಳು ಅಂತರ ರಾಷ್ಟ್ರೀಯವಾಗಿ ಕಾನೂನು ಬಾಹಿರ ಭಯೋತ್ಪಾದನೆಯನ್ನು ಘೋಷಿಸುವ ಗುಂಪುಗಳಾಗಿವೆ. ಇವೆಲ್ಲಾ ಒಂದೇ ರೀತಿಯ 'ಕೊಲೆ–ಹತ್ಯಾಕಾಂಡ' ನಡೆಸುವ ಸಿದ್ದಾಂತಕ್ಕೆ ಜೋತು ಬಿದ್ದಿವೆ. ಇವರಿಗೆ ಅಮೆರಿಕನ್ ಸಿಐಎ, ಬ್ರಿಟಿಷ್ ಎಂ 16, ಪ್ರೆಂಚ್–ಡಿಜಿಎಸ್‌ಇ ಮತ್ತು ಸೌದಿ ಅರೇಬಿಯಾ ದೇಶಗಳಿಂದ ನಿಧಿ ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸಲಾಗುತ್ತಿದೆ ಎಂದು ಸಿರಿಯಾ ಬೆಂಬಲಿತ ಮಾಧ್ಯಮಗಳ ಹೇಳಿಕೆಯಾಗಿದೆ. ಈ ಭಯೋತ್ಪಾದಕ–ದಂಗೆಕೋರರ ಹಿಡಿತದಲ್ಲಿ ಪೂರ್ವ ಘೌಟಾದ ಒಂದು ಲಕ್ಷಕ್ಕೂ ಅಧಿಕ ನಾಗರೀಕರು ಸಿಕ್ಕಿಹಾಕಿಕೊಂಡಿದ್ದಾರೆ. ಇಲ್ಲಿದ ಸರ್ಕಾರವು ತನ್ನ ನಾಗರೀಕರನ್ನು ಇವರ ಹಿಡಿತದಿಂದ ಮುಕ್ತಿಗೊಳಿಸುವ ಸಲುವಾಗಿ ಭಯೋತ್ಪಾದಕ ಗುಂಪುಗಳೊಂದಿಗೆ ಕಾದಾಟಕ್ಕೆ ಧುಮಕಲೇ ಬೇಕಾದ ಅನಿವಾರ್ಯತೆ ಉಂಟಾಗಿದೆ. ಕಳೆದ ಒಂದು ವಾರದಿಂದೀಚೆಗೆ ಬಾರೀ ದೊಡ್ಡ ಪ್ರಮಾಣದಲ್ಲಿ ನಾಗರಿಕರ ಮೇಲೆ ದಾಳಿಗಳು ನಡೆದಿವೆ. ಅಮೆರಿಕನ್ ಸೈನಿಕ ಪಡೆಗಳು, ನ್ಯಾಟೋ ಕಾರ್ಯಚರಣೆಗಳ ವೈಮಾನಿಕ ಬಾಂಬ್ ದಾಳಿಗಳಿಂದಾಗಿ ನಾಗರಿಕರ ಸಾವು–ನೋವುಗಳು ವಿಪರೀತ ಹೆಚ್ಚಾಗಿದೆ. ಈ ಬಿರುಸು–ದೃಶ್ಯ ಚಿತ್ರಣಗಳನ್ನು ಅಲ್ಲಿನ ಎರಡು ಕಡೆಯ ಮಾಧ್ಯಮಗಳು ಜಗತ್ತಿಗೆ ತೋರಿಸುತ್ತಿದ್ದಾರೆ ಯಾವುದು ಸತ್ಯ, ಯಾರದ್ದು ಮಿತ್ಯವೆಂದು? ಪರಿಶೀಲನೆ ನಡೆಸಬೇಕಾಗಿದೆ.

ಸಿರಿಯಾದ ವಿರುದ್ಧ ಮಾಧ್ಯಮಗಳ ಒಳಸಂಚು

ಅಮೆರಿಕನ್ ಪ್ರೇರಿತ ಸಿಎನ್‌ಎನ್–24 ಗಂಟೆಯ ಸುದ್ದಿ ವಾಹಿನಿಗಳು ತಮ್ಮ ದೃಶ್ಯ ಚಿತ್ರಣಗಳ ಬಿರುಸಿನ ಜಾಲ–ತಾಣಗಳ ಮೂಲಕ ಪ್ರಚಾರ ಮಾಡಿ, ತಕ್ಷಣದಲ್ಲಿ ಭಾವನಾತ್ಮಕ ಸಂಪರ್ಕಗಳನ್ನು ಜನರ ಮನಸ್ಸಿನೊಳಗೆ ಮೂಡಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಇದರ ಹಿಂದೆ ಸಿರಿಯಾ ಸರ್ಕಾರದ ವಿರುದ್ಧ ಸಂಕುಚಿತ ಅಭಿಪ್ರಾಯ ಮೂಡಿಸುವ ಅಮೆರಿಕಾದ ಪ್ರಭಾವಕ್ಕೆ ಒಳಪಟ್ಟಿರುವುದು ಈ ಬಿರುಸು–ದೃಶ್ಯ (ವಿಶ್ಯೂವೆಲ್ – ಬ್ಲಿಟ್ಜ್) ಚಿತ್ರಗಳ ನಿರೂಪಣೆಯ ಹಿಂದೆ ಅಡಕವಾಗಿರುವ ಅಂಶವಾಗಿದೆ. ಈ ಹಿಂದೆಯೂ ಸಹ ಇಂತಹದ್ದೇ ಪ್ರಸಾರ – ಪ್ರಚಾರ ನಡೆಸಿದ್ದನ್ನು ನೆನಪಿಸಿಕೊಳ್ಳೋಣ. ಅಂದರೆ, ಸೋಮಾಲಿಯದಿಂದ ಮೊದಲುಗೊಂಡು, ಬಾಲ್ಕನ್ಸ್ ನವರೆಗೂ, ಹಾಗೆಯೇ ಇರಾಕ್ ನಿಂದ ಪ್ಯಾಲೆಸ್ಟೇನ್ ನವರೆಗೂ, ಬಾಗ್ದಾದ್, ಮೊಸುಲ್ ಹೀಗೆ ಅಮೆರಿಕ ಪ್ರೇರಿತ ಮಾಧ್ಯಮಗಳ ಒಳಸಂಚು ಬಯಲುಗೊಳಿಸಬಹುದಾಗಿದೆ.

ಕಳೆದ ಕೆಲವು ದಿನಗಳಿಂದ ಸಾಮಾಜಿಕ ಮಾಧ್ಯಮಗಳ ವೇದಿಕೆಯಡಿಯಲ್ಲಿ ಹಲವು ಬಗೆಯ ಪ್ರಸಾರ –ಪ್ರಚಾರ ಸಂಪರ್ಕಗಳ ವಿಶಿಷ್ಟ ಪರಿಕರಗಳ ಮೂಲಕ – ಭಾವನಾತ್ಮಕತೆಯ ಮುಸುಕು ಕಳಂಕಕ್ಕೆ ಒಳಪಂಟ್ಟಂತೆ ಕಾಣುತ್ತಿದೆ. ಈ ಹಿಂದೆ ಅಮೆರಿಕಾದ ಅವಳಿ ಗೋಪುರಗಳ ಮೇಲಿನ್ 9/11 ರ ದಾಳಿಗಳ ಕ್ರೂರ ಚಿತ್ರಣಗಳನ್ನು 2001 ರಲ್ಲಿ ಅಪ್ಘಾನಿಸ್ತಾನದ ಮೇಲೆ ಆಕ್ರಮಣಗಳನ್ನು ಸಮರ್ಥಿಸಲು ಬಳಸಲಾಯಿತ್ತು. ಲಿಬಿಯಾ ನಾಗರೀಕ ಯುದ್ಧದಿಂದ ಬಂದ ಚಿತ್ರಗಳು ಯು.ಎಸ್. ನೋ–ಫ್ಲೈವಲಯ ಮತ್ತು ನ್ಯಾಟೋ ಪಡೆಗಳು ಆಡಳಿತ ಬದಲಾವಣೆಗೆ ಬಳಸಿಕೊಂಡಿದ್ದು ಇತಿಹಾಸದ ಪುಟಗಳನ್ನು ಸೇರಿರಬಹುದು.

ಆದರೆ ಇದೀಗ ಸಿರಿಯಾದ ಪೂರ್ವ ಘೌಟಾದ ದೇಶ್ಯಗಳು ವಿಡಿಯೋಗಳು ಅವಶೇಷಗಳ ಅಡಿಯಲ್ಲಿ ರಕ್ತ ಸುರಿಯುತ್ತಿರುವ ಮಕ್ಕಳ ದೃಶ್ಯಗಳು, ಮಹಿಳಾ ಮತ್ತು ಮಕ್ಕಳನ್ನು 'ಏರ್–ಸ್ಟ್ರೈಕ್–ವೈಮಾನಿಕ ದಾಳಿಗಳಿಂದ ನಾಶಗೊಳಿಸಿದೆನ್ನಲಾದ ದೃಶ್ಯಗಳನ್ನು ಮರು–ಪೋಸ್ಟ್ ಮಾಡಿರುತ್ತಾರೆ ಮತ್ತು ಹಂಚಿಕೊಂಡಿದ್ದಾರೆ. ಹಾಗೆಯೇ ಕಾರ್ಯ ನಿರ್ವಹಿಸಲು ಅಂತರರಾಷ್ಟ್ರೀಯ ಸಮುದಾಯಕ್ಕೆ ಕರೆ ನೀಡಿದ್ದಾರೆ. ಆದರೆ, ಈ ಎಲ್ಲಾ ಮಕ್ಕಳ ಪೋಟೋಗಳು–ವೀಡಿಯೋಗಳು 'ಗಾಜಾ ಪಟ್ಟಿ'ಯ ಮೇಲೆ ಇಸ್ರೇಲ್ ನಡೆಸಿದ ಬಾಂಬುದಾಳಿಯ ವಾಸ್ತವ ದೃಶ್ಯಗಳಾಗಿರುವುದು, ಅದೇ ರೀತಿಯಾಗಿ ಅವಶೇಷಗಳ ಅಡಿಯಲ್ಲಿ ದಾಳಿಗೆ ತುತ್ತಾದ ಮಗುವನ್ನು ಎತ್ತಿಕೊಂಡು ಓಡಿಹೋಗುತ್ತಿರುವ ತಂದೆ–ಮಗುವಿನ ಜೋಡಿ ಚಿತ್ರವು–ಇಸ್ಲಾಂಮಿಕ್ ಸ್ಟೇಟ್ಸ್(ಎಎಸ್ಸ್) ಉಗ್ರರ ಮೇಲೆ ಅಮೆರಿಕನ್ ಪಡೆಗಳು 'ಮೊಸುಲ್' ನಗರದ ಮೇಲೆ ನಡೆಸಿದ ಕಾರ್ಯಾಚರಣೆಯ ಸಂದರ್ಭದ ಚಿತ್ರವಾಗಿದೆ ಎಂದು ಕೆಲವು ಮಾಧ್ಯಮಗಳು ಸಾಭೀತು ಪಡಿಸಿವೆ. ಇದೀಗ ಇವೆಲ್ಲವನ್ನೂ ಪೂರ್ವ ಘೌಟಾದಿಂದ ಸೆರೆ ಹಿಡಿದ ದೃಶ್ಯಗಳೆಂದು ಅಮೆರಿಕನ್ ಪ್ರೇರಿತ ಮಾಧ್ಯಮಗಳು ಪ್ರಕಟಿಸಿವೆ. ಅಲ್ಲದೆ ಸಿರಿಯನ್ ಪಡೆಗಳೇ ಈ ದಾಳಿಗೆ ಕಾರಣವೆಂದು ಸುಳ್ಳು–ತಪ್ಪು ಮಾಹಿತಿಗಳ ಸುದ್ಧಿಗಳನ್ನು ಪ್ರಚಾರ ಮಾಡಿವೆ.

ಇದರಿಂದ ಅರ್ಥವಾಗುವುದೆಂದರೆ, ಅಮೆರಿಕಾದ ಮಾಧ್ಯಮಗಳು 'ಸಿರಿಯಾದ ಮೇಲೆ–ಅಮೆರಿಕಾದ ಮಿಲಿಟರಿ ಹಸ್ತಕ್ಷೇಪಕ್ಕೆ ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ ತೊಡಗಿರುವುದು ಸ್ಪಷ್ಟಗೊಂಡಂತಾಗಿದೆ. ಮಿಲಿಟರಿ ಹಸ್ತಕ್ಷೇಪದಿಂದ ಅಲ್ಲಿನ ಪ್ರಜಾಪ್ರಭುತ್ವವನ್ನು ನಾಶಗೊಳಿಸಿ, 'ಆಡಳಿತದ ಬದಲಾವಣೆ' ಮಾಡುವ ಮೂಲಕ ತನ್ನ ಅಧೀನದಲ್ಲಿ ಇರುವಂತೆ ಹಾಗೂ ತನ್ನ ಯಜಮಾನಿಕೆ ಅಧಿಪತ್ಯವನ್ನೂ ಜಗತ್ತಿಗೆ ತೋರಿಸಲು ಅಮೆರಿಕನ್ ಸಾಮ್ರಾಜ್ಯಶಾಹಿ ಬೆಸೆದಿರುವ ಕಾರ್ಯವ್ಯೂಹದ ತಂತ್ರವಿದಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

'ಅಲೆಪ್ಪೋ ರಕ್ಷಿಸಿ' ಮಾದರಿಯ
ಸಿರಿಯಾ–ವಿರೋಧಿ ಪ್ರಚಾರ

ಪೂರ್ವ ಘೌಟಾದೆನ್ನಲಾದ ವರದಿಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯ ಮಾಪನ ಮಾಡಬೇಕಾಗಿದೆ. 2016 ರಲ್ಲಿ ಪಾಶ್ಚಿಮಾತ್ಯ–ಅಮೇರಿಕಾವು' ತನ್ನ ಮಿಲಿಟರಿ ಕಾರ್ಯಾಚರಣೆ ಹಸ್ತಕ್ಷೇಪ'ಕ್ಕೆ ಕರೆ ನೀಡುವ ಮುನ್ನ' ಸಿರಿಯಾದ ಎರಡನೇ ದೊಡ್ಡ ನಗರವಾದ 'ಅಲೆಪ್ಪೋ ರಕ್ಷಿಸಿ' ಎಂಬ ನಾಮಾಂಕಿತದ ಘೋಷಣೆಯಡಿಯಲ್ಲಿ ಕಾರ್ಯಚರಣೆ ನಡೆಸಿದ್ದು ಸಿರಿಯನ್ ಜನರಿಗೆ ಮಾತ್ರವಲ್ಲದೆ, ಜಗತ್ತಿಗೆ ತಿಳಿದಿದೆ. ಆ ನಂತರ ರಷಿಯಾದ ಸೇನಾ ಪಡೆಗಳ–ಕಾರ್ಯಾಚರಣೆಯ ನೆರವಿನಿಂದ. ಅಲೆಪ್ಪೋ ನಗರವನ್ನು ಭಯೋತ್ಪಾದಕರ ವಶದಿಂದ ಮುಕ್ತಿ ಗೊಳಿಸಲಾಯಿತು. ಇದೀಗ ಆ ನಗರದ ನಿವಾಸಿಗಳು ಶಾಂತಿಯುತ ಸಹಬಾಳ್ವೆಗೆ ಹಿಂತಿರುಗಿದ್ದಾರೆ.

ಸಿರಿಯಾದಲ್ಲಿ ವಿಶ್ವಸಂಸ್ಥೆ 30 ದಿನಗಳ ಕದನ ವಿರಾಮ ವಿಧಿಸಿತ್ತು. ಆದರೆ, ರಷಿಯಾವು ಪ್ರತಿದಿನ ಐದು ಗಂಟೆಗಳ ಒಪ್ಪಂದವನ್ನು ಮುಂದಿಟ್ಟಿತು. ಹಾಗೆಯೇ ಸಿರಿಯನ್ ಸರ್ಕಾರ ಸಂಘರ್ಷ–ಸಮರ ವಲಯದಿಂದ ನಿರ್ಗಮಿಸುವ ಸಲುವಾಗಿ ಮಾನವೀಯ ಶಿಬಿರಗಳನ್ನು ಸ್ಥಾಪಿಸಿತು. ಯು.ಎಸ್., ಬ್ರಿಟನ್ ಮತ್ತು ಫ್ರಾನ್ಸ್ ಬಯಸಿದ್ದ ಪ್ರತಿಕಾರಕ್ಕೆ ವಿರುದ್ಧವಾಗಿ ರಷಿಯಾದಿಂದ ಬಂದ ಮಾಸ್ಕೋ ಪ್ರಸ್ತಾವನೆಯ ಐದು ಗಂಟೆಗಳ ಒಪ್ಪಂದ ಸಮಂಜಸವಾಗಿತ್ತು. ಇದರಿಂದಾಗಿ ಎಲ್ಲಾ ರೀತಿಯ ಸೇನಾ ಕಾರ್ಯಾಚರಣೆ 30 ದಿನಗಳ ಕಾಲ ನಿಲುಗಡೆಗೆ ಒಳಪಡುವಂತಾಯಿತು. ಈ ಸಮಯದಲ್ಲಿ ಪೂರ್ವ ಘೌಟಾದ ನಾಗರೀಕರ ವಿಮೋಚನೆಗೆ ಸಿರಿಯಾ ಸರ್ಕಾರ ಪ್ರಯತ್ನ ಮುಂದುವರಿಸಿತು.

ಅಲೆಪ್ಪೋ ಸಂದರ್ಭದಲ್ಲಿ, ಕಾನೂನುಬಾಹಿರವಾಗಿ ವಿದೇಶಿ ಬೆಂಬಲಿಗ ಉಗ್ರಗಾಮಿಗುಂಪುಗಳು ಆಕ್ರಮಿಸಿಕೊಂಡಿರುವ ಸಿರಿಯಾದ ಉಳಿದ ಪ್ರದೇಶಗಳನ್ನು ಕಾನೂನು ಬದ್ಧವಾಗಿ ಮರಳಿ ಪಡೆಯಲು ಹಾಗೂ ಸಿರಿಯಾ ತನ್ನ ಸಾರ್ವಭೌಮ ಹಕ್ಕನ್ನು ಪ್ರಸ್ಥಾಪಿಸಿದ ಕಾರಣ, ಉಗ್ರಗಾಮಿಗಳ ಗುಂಪುಗಳು ದಾಳಿ ನಡೆಸಿ, ಪ್ರಾಕ್ಸಿ ಯುದ್ಧ ನಡೆಸಿದ್ದರು. ಇಲ್ಲಿಯೂ ಅದು ಮರುಕಳಿಸಿತು.

ಪೂರ್ವ ಘೌಟಾದ ವಿಷಯದಲ್ಲಿ ರಷ್ಯಾ ಪ್ರಸ್ತಾಪಿಸಿದ ಮಾನವೀಯ ಪರಿಹಾರದ ಯೋಜನೆಯನ್ನು, ಜಾರಿಗೊಳಿಸಲು ಉಗ್ರಗಾಮಿ ಗುಂಪುಗಳು ಬಿಡಲಿಲ್ಲ, ಬದಲಿಗೆ ನಾಗರೀಕರ ಮೇಲೆ ಹಾಗೂ ಉದ್ದೇಶಿತವಾಗಿಯೇ ಕಾರಿಡಾರ್ – ಶಿಭಿರಗಳ ಮೇಲೆ ನಿರಂತರವಾಗಿ ಬಾಂಬ್ ದಾಳಿ ನಡೆಸಿದರು.

ನಾಗರೀಕರಿಗೆ ತಪ್ಪಿಸಿಕೊಳ್ಳಲು ಅವಕಾಶ ಕೊಡದ ಹಾಗೆ, ಒತ್ತೆಯಾಳು ಮಾಡಿಕೊಂಡರು. ನಾಗರೀಕರನ್ನು ಸ್ವೀಕರಿಸಲು ಕಾಯುತ್ತಿರುವ ಸಿರಿಯನ್ ಸರ್ಕಾರವು ಆಯೋಜಿಸಿದ್ದ ಬಸ್ಸುಗಳು ಹಾಗೂ ನೆರವು ನೀಡುವ ಕೆಲಸಗಾರರ ಮೇಲೆ ನಿರಂತರವಾಗಿ ಫಿರಂಗಿಗಳ ಮೂಲಕ ಬೆಂಕಿ ಉಂಡೆಗಳನ್ನು ಎಸೆಯುತ್ತಿದ್ದರಿಂದಾಗಿ ನಾಗರೀಕರು ಅಲ್ಲಿಂದ ಹೊರ ಬರಲು ಸಾಧ್ಯವಾಗಲಿಲ್ಲ. ಬದಲಿಗೆ ಸಾವು – ನೋವುಗಳು ಸಂಭವಿಸಿದವು. ಈ ವಾರ ಜೇನಿವಾದಲ್ಲಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ ಸಭೆ ನಡೆಯಿತು. ರಷಿಯಾದ ವಿದೇಶಾಂಗ ಮಂತ್ರಿ ಸೆರ್ಗೆಯ್ ಲವ್ರೋವ್ ಮಾತನಾಡಿ, ಪೂರ್ವ ಘೌಟಾದಲ್ಲಿ ಮಾನವೀಯ ಪರಿಹಾರ ಯೋಜನೆ ಜಾರಿಗೊಳಿಸುವಲ್ಲಿ–ಕದನ ವಿರಾಮವನ್ನು ಉಲಂಘಿಸುತ್ತಿರುವ ವಿದೇಶಿ ಬೆಂಬಲಿತ ಕೂಲಿ ಸೈನಿಕರು ಹಾಗೂ ಉಗ್ರಗಾಮಿಗಳು ನಡೆಸುತ್ತಿರುವ ದಾಳಿಗಳು ನಿಲ್ಲಬೇಕು. ಸಾವುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಸಮೀಪವಿರುವ ರಾಜಧಾನಿ ಡಮಾಸ್ಕಸ್ ಮೇಲೆಯೂ ರಾಕೆಟ್ಟುಗಳು, ಕ್ಷಿಪಣಿಗಳ ದಾಳಿಯನ್ನು ಆರಂಭಿಸುತ್ತಿದ್ದಾರೆ. ಇವುಗಳಿಗೆ ವಿರಾಮ ನೀಡಲೇ ಬೇಕಾಗಿದೆ. ಈ ನಿಟ್ಟಿನಲ್ಲಿ ವಿಶ್ವಸಂಸ್ಥೆಯ ಮಧ್ಯಸ್ಥಿಕೆ ಅಗತ್ಯವಿದೆ ಎಂದಿದ್ದಾರೆ.

ಈ ಮಧ್ಯೆ ಸಿರಿಯನ್ ರ ಫ್ರೀ–ಪ್ರೆಸ್ ಜಾಲ–ತಾಣದ ಒಂದು ವಿಶ್ವಾಸಾರ್ಹ ಅಂಕಿ–ಅಂಶಗಳ ಪ್ರಕಾರ ಸಿರಿಯನ್ ಜನಸಂಖ್ಯೆಯಲ್ಲಿ ಶೇ. 85 ರಷ್ಟು ಜನರು, ಅಧ್ಯಕ್ಷ ಬಷಾರ್ ಅಸ್ಸಾದ್‌ಆಡಳಿತದ ಪಡೆಗಳ ರಕ್ಷಣೆಯಲ್ಲಿದ್ದಾರೆ. ಕೇವಲ ಶೇ. 15 ರಷ್ಟು ಸಣ್ಣ ಪ್ರಮಾಣದ ಜನಸಂಖ್ಯೆ ಮಾತ್ರ ದಂಗೆಕೋರರು ನಿಯಂತ್ರಿಸುತ್ತಿರುವ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ ಎಂಬ ಮಾಹಿತಿ ವಿದೇಶಿ ಆಕ್ರಮಣಕಾರರಿಗೆ ಕಿರಿ–ಕಿರಿ ತಂದಿದೆ.

"ಲಜ್ಜೆಗೆಟ್ಟ ಪಾಶ್ಚಿಮಾತ್ಯ ಮಾಧ್ಯಮ"ಗಳ
ಯುದ್ಧ ಪ್ರಚಾರ ಸುದ್ಧಿಗಳು

ಈ ಸಣ್ಣ ಪ್ರಮಾಣದ ಜನಸಂಖ್ಯೆಯ ಪ್ರದೇಶಗಳಿಂದ ವರದಿಯಾಗುತ್ತಿರುವಬಹುತೇಕ ಸುದ್ಧಿಗಳು ಸುಳ್ಳು–ತಪ್ಪು ಸುದ್ಧಿಗಳಾಗಿವೆ. ಕೆಲವು ಸುದ್ದಿಗಳು ನಿಜವಾಗಿರಲು ಬಹುದು, ಅಂತಹುಗಳನ್ನು ಅಲ್ಲೆಗೆಳೆಯ ಬಾರದು. ಆದರೆ ಫ್ರಾನ್ಸ್ 24, ಸಿಎನ್‌ಎನ್ ಮತ್ತು ಇತರರನ್ನು ಸಿಐಎ ಪ್ರಾಯೋಜಿತ 'ರಿಪೋರ್ಟಿಂಗ್' ಎಂದು ಕರೆಯಬಹುದು, ಮತ್ತೆ ಕೆಲವು ಸುದ್ಧಿಗಳು ಭಯೋತ್ಪಾದಕ – ಸಂಯೋಜಿತ 'ಶ್ವೇತ ಹೆಲ್ಮೆಟ್' ಮಾಧ್ಯಮ ಕಾರ್ಯಚರಣೆಯಿಂದ ಮಾಹಿತಿಗಳನ್ನು ಪಡೆಯಲಾಗಿದೆ ಎಂದು ಅಂದಾಜಿಸಲಾಗಿದೆ. ಅಥವಾ ಅನಾಮಧೇಯ ನಿವಾಸಿಗಳು ಮತ್ತು ಕಾರ್ಯಕರ್ತರು ಅಥವಾ ಒಬ್ಬ ಬ್ರಿಟಿಷ್ ಮೂಲದ ಮಾನಿಟರ್ ನಿಂದ ಅಂದರೆ 15 ವರ್ಷದಿಂದ ಸಿರಿಯಾದಲ್ಲಿ ನೆಲಸದೆ ಇರುವ, ಒಬ್ಬ ಗಡಿಪಾರು ಸಿರಿಯನ್ ಪೀಠೋಪಕರಣ ಮಾರಾಟಗಾರನಿಂದ 'ಸುದ್ಧಿ ಪಡೆದಿರಬಹುದು. ಈ ರೀತಿ ಪತ್ರಿಕೋದ್ಯಮವು ಸಿರಿಯಾಕ್ಕೆ ಸಂಬಂಧಿಸಿದಂತೆ ಕಳೆದ 7 ವರ್ಷಗಳಿಂದ ಕರುನಾಜನಕ ಮಾಹಿತಿಗಳನ್ನು ಲಜ್ಜೆ–ಗೆಟ್ಟು ಪ್ರಸಾರ ಮಾಡುತ್ತಿವೆ ಎಂಬುದು ಪೂರ್ವ ಘೌಟಾದ ದೃಶ್ಯ–ಚಿತ್ರಣಗಳಿಂದ ಮತ್ತೆ ಸಾಭೀತಾಗಿದೆ.

ವಾಸ್ತವವಾಗಿ ಸಿರಿಯಾದಲ್ಲಿ ಪಾಶ್ಚಿಮಾತ್ಯ ಬೆಂಬಲಿತ ಉಗ್ರಗಾಮಿಗಳು ಮುತ್ತಿಗೆ ದಾಳಿಗಳ ಮೂಲಕ ಸಿರಿಯಾದಲ್ಲಿ ಪ್ರಕ್ಷುಬ್ಧತೆ ಉಂಟು ಮಾಡುತ್ತಿದ್ದಾರೆ. ಹಾಗೆಯೇ ಪ್ರಚಾರ ಮಾಧ್ಯಮಗಳು ಕೂಡ ಅಪರಾಧಿ ಸ್ಥಾನದಲ್ಲಿದ್ದು–ಸಿರಿಯಾದಲ್ಲಿನ ಸಮರಕ್ಕೆ–ಅಂತ್ಯ ಘೋಷಿಸಲು ತಡೆಯೊಡ್ಡುತ್ತಿದ್ದಾರೆ. ಪೂರ್ವ ಘೌಟಾದಲ್ಲಿನ ಬೆಳವಣಿಗೆಗಳ ಬಗ್ಗೆ ಮಾಧ್ಯಮಗಳ ನಿರೂಪಣೆ–ಪ್ರಚಾರದ ಮಧ್ಯೆ ಅನೇಕ ಪ್ರಶ್ನೆಗಳು ಉತ್ತರವಿಲ್ಲದೆ ಉಳಿದು ಹೋಗಿವೆ. ಅಮೆರಿಕಾ ಮಾನವೀಯ ದೃಷ್ಟಿಯಿಂದ ಮಧ್ಯಪ್ರವೇಶಿಸುತ್ತಿದ್ದೇವೆ ಎಂದು ಬಿಂಬಿಸುವ ತಂತ್ರ ಹೂಡಿದೆ. ಸೋಮಾಲಿಯಾ, ಇರಾಕ್, ಲಿಬಿಯಾ, ಅಪ್ಘಾನಿಸ್ತಾನ ಮುಂತಾದ ದೇಶಗಳಲ್ಲಿ ಅಮೆರಿಕ ಇದನ್ನೆ ಮಾಡಿದ್ದು ಎಂದು ಮರೆಯಬಾರದು.

JANASHAKTHI KANNADA VARA PATRIKE MARCH 12-18, 2018 Price : Rs. 10/- Date of Publication : 9 MARCH 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಚಾರಿತ್ರಿಕ ಯುವಕಾರ್ಮಿಕರ ಸಮಾವೇಶ

ಕೋಮುವಾದ ಮತ್ತು ಆರ್ಥಿಕ ಬಿಕ್ಕಟ್ಟಿನ ವಿಷಮಿಶ್ರಣ : ಪ್ರೊ. ಚಂದ್ರಶೇಖರ್





ಆರ್. ಶ್ರೀನಿವಾಸ್, ಟಿ.ಕೆ.ಎಸ್. ಕುಟ್ಟಿ ರವರನ್ನು ಪ್ರೊ. ಚಂದ್ರಶೇಖರ್ ಸನ್ಮಾನಿಸುತ್ತಿರುವುದು

ವಸಂತ್

ಫ್ಯಾಸಿಸ್ಟ್ ಚಹರೆಗಳ ಆಳವಾದ ಕೋಮುವಾದ ಮತ್ತು ಸ್ವಾತಂತ್ರ್ಯ ನಂತರದ ಮೊದಲ ದಶಕಗಳಲ್ಲಿ ಅನುಸರಿಸಿದ (ಕನಿಷ್ಟ ಆಶಯಗಳಲ್ಲಾದರೂ) ಸಮಾನತೆ ಸಾಧಿಸುವ ಆರ್ಥಿಕ ನೀತಿಯಿಂದ ನವ-ಉದಾರೀಕರಣದತ್ತ ಸಾಗಿದ್ದರಿಂದ ಉಂಟಾದ ಆರ್ಥಿಕ ಬಿಕ್ಕಟ್ಟಿನ ವಿಷಮಿಶ್ರಣವೇ, ಇಂದು ಯುವ ಕಾರ್ಮಿಕರೂ ದೇಶದ ಜನತೆಯೂ ಎದುರಿಸುತ್ತಿರುವ ಸವಾಲುಗಳಿಗೆ ಮುಖ್ಯ ಕಾರಣ ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಮತ್ತು ಜೆ.ಎನ್.ಯು. ಪ್ರೊ. ಸಿ.ಪಿ.ಚಂದ್ರಶೇಖರ್ ಅವರು ಹೇಳಿದರು. ಅವರು ಮಾರ್ಚ್ 4ರಂದು ಕಿಕ್ಕಿರಿದು ತುಂಬಿದ್ದ ಬೆಂಗಳೂರಿನ ಜೈನ್ ವಿ.ವಿ.ಯ ಸಭಾಂಗಣದಲ್ಲಿ ಯುವ ಕಾರ್ಮಿಕರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಸಂಘಟಿಸಲಾಗಿದ್ದ "ಯುವ ಕಾರ್ಮಿಕರ ಸಮಾವೇಶ'ದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು. ಸಮಾವೇಶವನ್ನು ಸಿಪಿಐ(ಎಂ) ನ ಐಟಿ ಶಾಖೆ ಸಂಘಟಿಸಿತ್ತು. 700ಕ್ಕೂ ಹೆಚ್ಚು ಐಟಿ/ಐಟಿಇಎಸ್ ಮತ್ತು ಇತರ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಯುವ ಕಾರ್ಮಿಕರು ಸಮಾವೇಶದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಪ್ರೊ. ಚಂದ್ರಶೇಖರ್ ಮುಂದುವರೆದು ಮಾಧ್ಯಮಗಳು ಟಾಂ ಟಾಂ ಮಾಡುತ್ತಿರುವ, ಐಎಂಎಫ್ ವರದಿಯಲ್ಲಿ ಹೇಳಲಾದ "ಜಾಗತಿಕವಾಗಿ ಒಟ್ಟಿಗೆ ನಡೆಯುತ್ತಿರುವ ಆರ್ಥಿಕ ಚೇತರಿಕೆ" ಮತ್ತು ಮೋದಿ ಸರಕಾರ ಕೊಚ್ಚಿಕೊಳ್ಳುತ್ತಿರುವ "ಜಗತ್ತಿನ ಅತಿ ವೇಗವಾಗಿ ಬೆಳೆಯುತ್ತಿರುವ ಭಾರತದ ಆರ್ಥಿಕ ಬೆಳವಣಿಗೆ" ಎರಡೂ ಬೊಗಳೆ ಮತ್ತು ಟೊಳ್ಳಾದದ್ದು ಎಂದು ವಿವರಿಸಿದರು. ನವ-ಉದಾರವಾದಿ ಆರ್ಥಿಕತೆಯ ಕೂಸಾದ ಐಟಿ ಕೈಗಾರಿಕೆಯ ಏಳುಬೀಳುಗಳು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಜತೆ ಅದರ ಸಂಬಂಧಗಳ ಬಗೆಗೂ ಅವರು ವಿವರಿಸಿದರು.

ಇದಕ್ಕಿಂತ ಮೊದಲು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮರೆಡ್ಡಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಆದಾಯದ ಮತ್ತು ಉದ್ಯೋಗದ ಅಭದ್ರತೆ ಮತ್ತು ಹಕ್ಕುಗಳಿಲ್ಲದಿರುವುದು – ಉದ್ಯೋಗಸ್ಥ ಮತ್ತು ನಿರುದ್ಯೋಗಿ ಯುವಜನರು ಎದುರಿಸುತ್ತಿರುವ ಸವಾಲುಗಳು. ಈ ಸವಾಲುಗಳಿಗೆ ಮುಖ್ಯ ಕಾರಣ ಮೋದಿ ಸರಕಾರ ತೀವ್ರಗೊಳಿಸಿರುವ ಜನ-ವಿರೋಧಿ ನವ-ಉದಾರವಾದಿ ಆರ್ಥಿಕ ನೀತಿಗಳು ಮತ್ತು ಬಹುತ್ವದ ಭಾರತದ ಕಲ್ಪನೆಯ ಮೇಲೆನೇ ಸಂಘಪರಿವಾರ ಮಾಡುತ್ತಿರುವ ಪ್ರಹಾರ ಎಂದರು.

ಬಿಪಿಎಲ್ ಹೀರೊಗಳಿಗೆ ಸನ್ಮಾನ

"ಬಿಪಿಎಲ್ ಹೋರಾಟದ ಹೀರೊ"ಗಳಾದ ಕಾ. ಆರ್.ಶ್ರೀನಿವಾಸ್ (ಈಗ ಸಿಪಿಐ(ಎಂ)ನ ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ) ಮತ್ತು ಕಾ. ಟಿ.ಕೆ.ಎಸ್. ಕುಟ್ಟಿ ಅವರನ್ನು ಸಮಾವೇಶ ಸನ್ಮಾನಿಸಿತು. ನವ-ಉದಾರವಾದಿ ಕಾಲಘಟ್ಟದ ಅತ್ಯಂತ ಚಾರಿತ್ರಿಕ ಕಾರ್ಮಿಕ ಹೋರಾಟವಾಗಿದ್ದ ಬಿಪಿಎಲ್ ಹೋರಾಟ ಮತ್ತು ಅದರಲ್ಲಿ ಈ ಹೀರೊಗಳ ಪಾತ್ರದ ಬಗ್ಗೆ ತಿಳಿಸಲಾಯಿತು. ಬಿಪಿಎಲ್ ಮ್ಯಾನೇಜುಮೆಂಂಟು ರಾಜ್ಯ ಆಡಳಿತದ ಜತೆ ಶಾಮೀಲಾಗಿ ಹೊರಿಸಿದ್ದ ಸುಳ್ಳು ಕೊಲೆ ಆಪಾದನೆ ಮೇಲೆ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಇವರಿಬ್ಬರೂ 16 ವರ್ಷಗಳ ಜೈಲುವಾಸದ ನಂತರ ಸನ್ನಡತೆಯ ಆಧಾರದ ಮೇಲೆ ಬಿಡುಗಡೆಯಾಗಿದ್ದಾರೆ. ಇವರ ಜತೆ ಇನ್ನೂ ಐವರು ದೀರ್ಘ ಜೈಲುವಾಸ ಅನುಭವಿಸಿದ್ದರು. ಇಬ್ಬರೂ ಹೀರೊಗಳು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು

ಹಿರಿಯ ಕಾರ್ಮಿಕ ಮತ್ತು ಸಿಪಿಐ(ಎಂ) ನಾಯಕ ಕಾ. ವಿ.ಜೆ. ಕೆ.ನಾಯರ್ ಇಂದಿನ ಸನ್ನಿವೇಶದಲ್ಲಿ 21ನೇ ಶತಮಾನದ ಕಾರ್ಮಿಕ ವರ್ಗವಾದ ನೀವು ಅದರ ಹಿಂದಿನ ಕಾರಣಗಳನ್ನು ಅರ್ಥ ಮಾಡಿಕೊಂಡು, ತಮ್ಮ ಹಕ್ಕುಗಳಿಗಾಗಿಯೂ ಮತ್ತು ರಾಜಕೀಯವಾಗಿಯೂ ಸಂಘಟಿತರಾಗುವ ಆವಶ್ಯಕತೆ ಬಗ್ಗೆ ಒತ್ತಿ ಹೇಳಿದರು. ಸಿಪಿಐ(ಎಂ) ನ ಕ್ರಾಂತಿಕಾರಿ ಕಾರ್ಯಕ್ರಮವನ್ನು ವಿವರಿಸಿದರು. ತ್ರಿಪುರಾ ಚುನಾವಣಾ ಫಲಿತಾಂಶದ ಹಿನ್ನೆಲೆಯಲ್ಲಿ ಆಂಶಿಕವಾಗಿ ಸಿಪಿಐ(ಎಂ)ಗೆ ನಿರಾಸೆಯಾಗಿದ್ದರೂ ಈ ಸಮಾವೇಶ ಹೊಸ ಉತ್ಸಾಹ ನಿರೀಕ್ಷೆ ಹುಟ್ಟಿಸಿದೆ ಎಂದರು.



ಕುರುಡು ಧೋರಣೆ, ಭ್ರಮೆಗಳನ್ನು ತೊಡೆಯುವುದು ಹೇಗೆ ?

ಕರ್ನಾಟಕ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾ. ಮೀನಾಕ್ಷಿಸುಂದರಂ ಮಾತನಾಡಿ ಮ್ಯಾನೇಜು ಮೆಂಟುಗಳೂ ವ್ಯವಸ್ಥೆಯೂ, ಯುವಕಾರ್ಮಿಕರಲ್ಲಿ ಅವರದೇ ಹಿತಾಸಕ್ತಿಗೆ ವಿರುದ್ಧವಾದ ಕುರುಡು ಧೋರಣೆಗಳನ್ನೂ ಭ್ರಮೆಗಳನ್ನೂ ಹುಟ್ಟುಹಾಕುತ್ತಿದೆ. ರಾಜಕೀಯ ಪ್ರಜ್ಞೆಯಲ್ಲಿ ಮುಂದಿರುವ ಇಲ್ಲಿ ನೆರೆದ ನೀವು ಐಟಿ/ಐಟಿಇಎಸ್ ಮಾತ್ರವಲ್ಲ ಎಲ್ಲಾ ಯುವಕಾರ್ಮಿಕರ ಈ ಕುರುಡು ಧೋರಣೆ ಮತ್ತು ಭ್ರಮೆಗಳನ್ನು ತೊಡೆಯುವುದು ಹೇಗೆ ಎಂದು ಕಾರ್ಮಿಕ ಚಳುವಳಿಗೆ ತಿಳಿಹೇಳಬೇಕೆಂದು ಕರೆ ನೀಡಿದರು.

ಕರ್ನಾಟಕ ಸಿಐಟಿಯು ಅಧ್ಯಕ್ಷರಾದ ಕಾ. ಎಸ್. ವರಲಕ್ಷ್ಮಿ ಮಾತನಾಡಿ, ಆಳುವ ವರ್ಗಗಳ ಜನಸಾಮಾನ್ಯರ ಆಹಾರ ಶಿಕ್ಷಣ ಮತ್ತು ಆರೋಗ್ಯಗಳಿಗೆ ಮಾರಕವಾದ ನೀತಿಗಳನ್ನು ಅರ್ಥ ಮಾಡಿಕೊಳ್ಳಬೇಕು. ಅಸಂಘಟಿತ ವಲಯಗಳ ಯುವ ಕಾರ್ಮಿಕರ ಹೋರಾಟದ ಜತೆ ಸೌಹಾರ್ದ ಸಂಬಂಧ ಬೆಳೆಸಬೇಕು ಎಂದು ಕರೆ ನೀಡಿದರು.

ಸಿಪಿಐ(ಎಂ) ನ ಭವಿಷ್ಯವಾದ ಯುವಕಾರ್ಮಿಕರು ಮಾರ್ಕ್ಸ್ ನ ಹುಟ್ಟಿನ 200ನೇ ಮತ್ತು ಕ್ಯಾಪಿಟಲ್ ಸಂಪುಟ 1ರ 150ನೇ ವಾರ್ಷಿಕೋತ್ಸವದ ಈ ವರ್ಷದಲ್ಲಿ ಮಾರ್ಕ್ಸ್ ನ "ಮಿಗುತಾಯ ಮೌಲ್ಯದ ಸಿದ್ಧಾಂತ"ವನ್ನು ಅಧ್ಯಯನ ಮಾಡಬೇಕು. ಅದು ಇಂದಿನ ಉದ್ಯಮಗಳಿಗೂ ಅನ್ವಯವಾಗುತ್ತದೆ. ಅದನ್ನು ಅಪ್ರಸ್ತುತ ಎನ್ನುವವರಿಗೆ ಉತ್ತರಿಸಬೇಕು. ಎಲ್ಲಾ ಕ್ಷೇತ್ರಗಳ ಯುವಕಾರ್ಮಿಕರನ್ನು ಸಂಘಟಿಸುವಲ್ಲಿ ಮುತುವರ್ಜಿ ವಹಿಸಬೇಕು ಎಂದು ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕಾ. ಕೆ.ಎನ್. ಉಮೇಶ್ ಕರೆ ನಿಡಿದರು.

ಸಮಾವೇಶದ ನಿರ್ಣಯಗಳು

ಮಾತನಾಡಿದ ಎಲ್ಲರೂ ನಗರದಾದ್ಯಂತ ತೀವ್ರ ಸಮಾವೇಶ-ಪೂರ್ವ ಪ್ರಚಾರ ಕೈಗೊಂಡು, ಯುವ ಕಾರ್ಮಿಕರನ್ನು ಇಷ್ಟು ಸಂಖ್ಯೆಯಲ್ಲಿ ಅಣಿ ನೆರೆಸಿ, ಇಷ್ಟು ಅಚ್ಚುಕಟ್ಟಾಗಿ ಅರ್ಥಪೂರ್ಣವಾಗಿ ಸಮಾವೇಶ ನಡೆಸಿದ್ದಕ್ಕೆ ಸಿಪಿಐ(ಎಂ) ಐಟಿ ಶಾಖೆಯನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು. ಸಮಾವೇಶ ಯುವ ಕಾರ್ಮಿಕರನ್ನು ಬಾಧಿಸುತ್ತಿರುವ ಸಮಸ್ಯೆಗಳು, ಇತರ ಕಾರ್ಮಿಕ ಮತ್ತು ಜನವಿಭಾಗಗಳ ಹೋರಾಟಗಳಿಗೆ ಸೌಹಾರ್ದ ಬೆಂಬಲ ಮತ್ತು ಕೆಲವು ರಾಜಕೀಯ ವಿಷಯಗಳ ಬಗ್ಗೆ ನಿರ್ಣಯಗಳನ್ನು ಕೈಗೊಂಡಿತು.

ಜಾತಿ ಧರ್ಮ ಭಾಷೆಗಳ ಆಧಾರದ ಮೇಲೆ ಕಾರ್ಮಿಕರ ಐಕ್ಯತೆಯನ್ನು ಒಡೆಯುವ ಹುನ್ನಾರಗಳ ಬಗ್ಗೆ ಎಚ್ಚರಿಕೆಯಿಂದಿರುವ, ಯುವ ಕಾರ್ಮಿಕರ ಅದರಲ್ಲೂ ವಿಶೇಷವಾಗಿ ಮಹಿಳೆಯರು ಮತ್ತು ರಾತ್ರಿಪಾಳಿ ಯುವಕಾರ್ಮಿಕರ ಸುರಕ್ಷಿತತೆ ಮತ್ತು ಭದ್ರತೆ ಬಗ್ಗೆ ಸೂಪರ್ ಲಾಭದಾಸೆಗಾಗಿ ದಿವ್ಯ ನಿರ್ಲಕ್ಷ ತೋರುವ ಕಂಪನಿಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಒತ್ತಾಯಿಸುವ, ರಾಜಸ್ತಾನ ಮಹಾರಾಷ್ಟ್ರ ಮುಂತಾದ ಕಡೆ ರೈತರ ಮತ್ತು ಸ್ಕೀಂ ಕಾರ್ಮಿಕರ ಹೋರಾಟಗಳಿಗೆ ಸೌಹಾರ್ದ ಬೆಂಬಲ ಕೊಡುವ ನಿರ್ಣಯಗಳನ್ನು ಸಮಾವೇಶ ಅಂಗೀಕರಿಸಿತು. ಇವಲ್ಲದೆ ಕರ್ನಾಟಕ ವಿಧಾನಸಭೆ ಮತ್ತು ವಿಧಾನ ಪರಿಷತ್ತು ಚುನಾವಣೆಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳನ್ನು ಬೆಂಬಲಿಸುವ ಮತ್ತು 22ನೇ ಸಿಪಿಐ(ಎಂ) ಮಹಾಧಿವೇಶನಕ್ಕೆ ಶುಭ ಕೋರುವ ನಿರ್ಣಯಗಳನ್ನೂ ಸಮಾವೇಶ ಅಂಗೀಕರಿಸಿತು.



ನೀವು ಹೀರೊ ಆಗುವುದು ಯಾವಾಗ ?

"ಬಿಪಿಎಲ್ ಹೀರೊ" ಕಾ. ಆರ್.ಶ್ರೀನಿವಾಸ್ ಸಮಾವೇಶದಲ್ಲಿ ಭಾಗವಹಿಸಿದ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಾ ಕೇಳಿದ ಪ್ರಶ್ನೆಯಿದು. ನಾವಿಬ್ಬರೇ ಹೀರೊಗಳಲ್ಲ. ನಮ್ಮ ಜತೆ ದೀರ್ಘ ಜೈಲುವಾಸ ಅನುಭವಿಸಿದ ಇತರ 5 ಸಂಗಾತಿಗಳು ಆಗ 30 ವರ್ಷ ಆಗದ ಯುವಕಾರ್ಮಿಕರೇ ಆಗಿದ್ದರು. ಆಗ ಹೆಚ್ಚುಕಡಿಮೆ ಬಿಪಿಎಲ್ ಎಲ್ಲಾರೂ ಯುವಕಾರ್ಮಿಕರೇ. ಹೋರಾಟದ ಒಂದು ಘಟ್ಟದಲ್ಲಿ ಸುಮಾರು 800 ಯುವಕಾರ್ಮಿಕರು 12 ದಿನ ಜೈಲಿನಲ್ಲಿದ್ದರು. ಅವರೂ ಹೀರೊಗಳೇ. ನೀವು ಅವರಂತೆ ಹೀರೊಗಳಾಗಬೇಕು ಎಂದು ಹುರಿದುಂಬಿಸಿದರು. ಈಗ ಐಟಿ ಯೂನಿಯನ್ ಕೆ.ಐ.ಟಿ.ಯು.ಗೆ ಕಾನೂನು ಸಲಹಾಕಾರರಾಗಿರುವ ಕಾ. ಟಿ.ಕೆ.ಎಸ್. ಕುಟ್ಟಿ ಇಂದಿನ ಐಟಿ ಕಂಪನಿಗಳ ಲಾಭಕೋರ ಕಾರ್ಮಿಕ-ವಿರೋಧಿ ಕುಟಿಲ ತಂತ್ರಗಳ ಸ್ಥೂಲ ಪರಿಚಯ ಮಾಡಿಕೊಟ್ಟರು.

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**